# ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

**ಪ್ರಧಾನ ಕಚೇರಿ:** ಸಂಖ್ಯೆ 14, ರಜತ ಭವನ, 1ನೇ ಮುಖ್ಯರಸ್ತೆ,ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ
ಬೆಂಗಳೂರು-560104. ದೂರವಾಣಿ:080-23300497,41159606, 23359600, 23402712, 23503666.
***Email: jscbinfo@jscbl.com web:www.jscbl.com***

## 42ನೇ ಸರ್ವ ಸದಸ್ಯರ ಸಭೆಯ ಸೂಚನಾ ಪತ್ರ

ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ., ನ 2022-2023ನೇ ಸಾಲಿನ 42ನೇ ವಾರ್ಷಿಕ ಸರ್ವಸದಸ್ಯರ ಮಹಾ ಸಭೆಯನ್ನು ಈ ಕೆಳಗೆ ನಮೂದಿಸಿರುವ ವಿಷಯ ಸೂಚಿಗಳ ಬಗ್ಗೆ ಚರ್ಚಿಸಿ ತೀರ್ಮಾನಿಸಲು ದಿನಾಂಕ 30-07-2023 ನೇ ಭಾನುವಾರ ಬೆಳಿಗ್ಗೆ 10.30 ಗಂಟೆಗೆ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್.ಸಿ. ಗೋಪಾಲ್‌ರವರ ಅಧ್ಯಕ್ಷತೆಯಲ್ಲಿ "ಅಭಿಮಾನಿ ಇನ್ ಅಂಡ್ ಕನ್‌ವೆನ್ಷನ್ ಸೆಂಟರ್" ನಂ.97, 2ನೇ ಬ್ಲಾಕ್, 3ನೇ ಹಂತ, ಬಸವೇಶ್ವರ ನಗರ, ಬೆಂಗಳೂರು-560079, ಇಲ್ಲಿ ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರು ಸಭೆಗೆ ಭಾಗವಹಿಸಲು ಕೋರಲಾಗಿದೆ.

## -:ವಿಷಯ ಸೂಚಿ:-

1. ಜ್ಯೋತಿ ಬೆಳಗಿಸುವುದರ ಮೂಲಕ ಸಭೆಯ ಉದ್ಘಾಟನೆ
2. ಪ್ರಾರ್ಥನೆ
3. ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು.
4. 2022-2023 ನೇ ಸಾಲಿನಲ್ಲಿ ನಿಧನ ಹೊಂದಿದ ಸದಸ್ಯರಿಗೆ ಶ್ರದ್ಧಾಂಜಲಿ ಅರ್ಪಿಸುವುದು.
5. ಅಧ್ಯಕ್ಷರಿಂದ ಸ್ವಾಗತ ಭಾಷಣ ಮತ್ತು 2022-2023 ನೇ ಸಾಲಿನ ಆಡಳಿತ ಮಂಡಳಿ ವರದಿಯ ಅಂಗೀಕಾರ
6. ದಿನಾಂಕ 26-06-2022 ರಂದು ನಡೆದ 41ನೇ ಸರ್ವಸದಸ್ಯರ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡುವುದು.
7. 2022-2023 ನೇ ಸಾಲಿನ ಲೆಕ್ಕ ಪರಿಶೋಧನೆ ಆದ ಲೆಕ್ಕಪತ್ರ ಹಾಗೂ ಲೆಕ್ಕ ಪರಿಶೋಧನಾ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು
8. 2022-2023 ನೇ ಸಾಲಿನಲ್ಲಿ ಮಂಜೂರಾತಿಗಿಂತ ಹೆಚ್ಚಿಗೆ ಖರ್ಚಾಗಿರುವ ಬಾಬ್ತುಗಳನ್ನು ಅಂಗೀಕರಿಸುವುದು ಹಾಗೂ 2023-24 ನೇ ಸಾಲಿನ ಅಂದಾಜು ಆಯ-ವ್ಯಯಕ್ಕೆ ಮಂಜೂರಾತಿ ನೀಡುವುದು.
9. 2022-2023 ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸುವುದು.
10. ಬ್ಯಾಂಕಿನ ನೌಕರರ ಸೇವಾ ನಿಯಮ, ಸಿಬ್ಬಂದಿ ವರ್ಗದವರ ವೃಂದ ಮತ್ತು ನೇಮಕಾತಿ ನಿಯಮಗಳು ಮತ್ತು ಸಿಬ್ಬಂದಿ ವೃಂದಬಲ ಮತ್ತು ವೇತನ ಶ್ರೇಣಿಗಳು ಪರಿಷ್ಕರಣೆ ಮಾಡಲು ಅನುಮೋದನೆ.
11. ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಹಾಗೂ ಸದಸ್ಯತ್ವದ ಸಮಾಪನೆ ಮಾಡಿದ ಸದಸ್ಯರುಗಳ ಪಟ್ಟಿಯ ಅನುಮೋದನೆ.
12. ಬ್ಯಾಂಕ್ ತನ್ನ ನಿಧಿಗಳನ್ನು ಕಲಂ 58ರ ಪ್ರಕಾರ ತೊಡಗಿಸುವ ಬಗ್ಗೆ ಅನುಮತಿ ನೀಡುವುದು.
13. 2023-2024 ನೇ ಸಾಲಿಗೆ ಲೆಕ್ಕ ಪರಿಶೋಧನೆ ಕೈಗೊಳ್ಳಲು ಲೆಕ್ಕ ಪರಿಶೋಧಕರನ್ನು ನೇಮಕ ಮಾಡಿಕೊಳ್ಳುವ ಕುರಿತು ಅನುಮೋದನೆ.
14. ಸದಸ್ಯರುಗಳಿಂದ ಬಂದ ಸೂಚನೆಗಳ ಪರಿಶೀಲನೆ (ಸಭೆಗೆ ಮೂರು ದಿನಗಳ ಮುಂಚಿತವಾಗಿ ಲಿಖಿತ ಮೂಲಕ ಬ್ಯಾಂಕ್‌ಗೆ ತಲುಪಿದ ಸೂಚನೆ ಪತ್ರಗಳ ಬಗ್ಗೆ ಚರ್ಚೆ)
15. ಅಧ್ಯಕ್ಷರ ಅನುಮತಿ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು
16. ವಂದನಾರ್ಪಣೆ

**ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ**
ಸಹಿ/-

**ಸ್ಥಳ:-ಬೆಂಗಳೂರು**
**ದಿನಾಂಕ:-06-07-2023**

**(ಭಾಗ್ಯ .ಎಸ್)**
**ಮುಖ್ಯಕಾರ್ಯನಿರ್ವಹಣಾಧಿಕಾರಿ**

* ಸಭೆಯಲ್ಲಿ ಭಾಗವಹಿಸುವ ಬ್ಯಾಂಕಿನ ಎಲ್ಲಾ ಸದಸ್ಯರು ತಮ್ಮ ಸದಸ್ಯತ್ವದ ಗುರುತಿನ ಚೀಟಿಯನ್ನು ತರತಕ್ಕದ್ದು.

## –: ಸೂಚನೆಗಳು :–

1. ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸಲು ಸಾಮಾನ್ಯ ಸದಸ್ಯರಿಗೆ ಮಾತ್ರ ಅವಕಾಶವಿರುತ್ತದೆ.
2. ಸುಸ್ತಿದಾರ ಸದಸ್ಯರಿಗೆ ಮಹಾಸಭೆಯಲ್ಲಿ ಮಾತನಾಡಲು ಹಕ್ಕಿರುವುದಿಲ್ಲ.
3. ಮುದ್ರಿತ ವಾರ್ಷಿಕ ವರದಿಯ ಪುಸ್ತಕವನ್ನು ದಿನಾಂಕ 21/07/2023 ರಿಂದ ಬ್ಯಾಂಕಿನ ಕಛೇರಿಯ ವೇಳೆಯಲ್ಲಿ ಎಲ್ಲಾ ಶಾಖೆಗಳಲ್ಲಿ ಪಡೆಯಬಹುದು.
4. ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ಹೊಂದದ ಸದಸ್ಯರು ಅವರ ಡಿವಿಡೆಂಡ್ ಹಣವನ್ನು ವರ್ಗಾಯಿಸಲು ಉಳಿತಾಯ ಖಾತೆಯನ್ನು ತೆರೆಯಲು ಕೋರಿದೆ. ತಪ್ಪಿದಲ್ಲಿ 3 ವರ್ಷ ಮೀರಿದ ಡಿವಿಡೆಂಡ್ ಹಣವನ್ನು ಬ್ಯಾಂಕಿನ ಉಪನಿಯಮದ ಪ್ರಕಾರ ಬ್ಯಾಂಕಿನ ಆಪದ್ಧನ ನಿಧಿಗೆ ವರ್ಗಾಯಿಸಲಾಗುವುದು.
5. ಸದಸ್ಯರುಗಳು ತಮ್ಮ ಉಳಿತಾಯ ಖಾತೆಯ ವ್ಯವಹಾರವನ್ನು ನಡೆಸದೇ ಇದ್ದ ಪಕ್ಷದಲ್ಲಿ ಅಂತಹ ಖಾತೆಯನ್ನು ನಿಷ್ಕ್ರಿಯ ಖಾತೆಗಳಾಗಿ ಮಾಡಲಾಗುವುದು ಅಂತಹ ಖಾತೆಗೆ ಡಿವಿಡೆಂಡ್ ಹಣ ವರ್ಗಾವಣೆ ಮಾಡಲಾಗುವುದಿಲ್ಲ.
6. ಮಾನ್ಯ ಸದಸ್ಯರು ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು ಇದ್ದಲ್ಲಿ ಮಹಾಸಭೆ ನಡೆಯುವ 03 ದಿನಗಳ ಮುಂಚಿತವಾಗಿ ಬ್ಯಾಂಕಿಗೆ ಲಿಖಿತ ಮೂಲಕ ತಲುಪಿಸತಕ್ಕದ್ದು. ಅಂತಹ ಸದಸ್ಯರುಗಳಿಗೆ ಆದ್ಯತೆ ಮೇರೆಗೆ ಸಭೆಯಲ್ಲಿ ಮಾತನಾಡಲು ಅವಕಾಶ ನೀಡಲಾಗುವುದು.
7. ಸದಸ್ಯರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಅರ್ಹ ಸದಸ್ಯರು ಹಾಗೂ ಠೇವಣಿದಾರರು ಪ್ರತಿ ವರ್ಷ ಏಪ್ರಿಲ್ ತಿಂಗಳಿನಲ್ಲಿ ಆದಾಯ ತೆರಿಗೆ ಫಾರಂ ನಂ. 15 ಜಿ/ಹೆಚ್. ಅನ್ನು ತಮ್ಮ ಪಾನ್ ಸಂಖ್ಯೆಯನ್ನು ನಮೂದಿಸಿ ಬ್ಯಾಂಕಿಗೆ ಸಲ್ಲಿಸಿ ಆದಾಯ ತೆರಿಗೆ / ಟಿ.ಡಿ.ಎಸ್. ನಿಂದ ವಿನಾಯಿತಿ ಪಡೆದುಕೊಳ್ಳಬಹುದು.
8. ಸದಸ್ಯರ ವಿಳಾಸ ಬದಲಾಗಿದ್ದಲ್ಲಿ ಬದಲಾವಣೆಯಾದ ವಿಳಾಸವನ್ನು ಬ್ಯಾಂಕಿಗೆ ಲಿಖಿತ ಮೂಲಕ ಅಥವಾ ಖುದ್ದಾಗಿ ಬಂದು ತಿಳಿಸತಕ್ಕದ್ದು.
9. ತಿದ್ದುಪಡಿ ಬೈಲಾ ಸಂಖ್ಯೆ 47ರ ಪ್ರಕಾರ ಕಳೆದ 05 ಸಾಮಾನ್ಯ ಸಭೆಗಳ ಪೈಕಿ 02 ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಹಾಗೂ ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಎರಡು ಸಹಕಾರ ವರ್ಷದಲ್ಲಿ ತಮ್ಮ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷಕ್ಕೆ ಕನಿಷ್ಠ 04 ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸಲು ತಪ್ಪಿದ ಸದಸ್ಯನಿಗೆ ಮತ ನೀಡುವ ಹಕ್ಕು ಹಾಗೂ ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕು ಇರುವುದಿಲ್ಲ.
10. ಇತ್ತೀಚಿನ ಭಾವಚಿತ್ರ ಹಾಗೂ ಕೆ.ವೈ.ಸಿ.ಗೆ ಸಂಬಂಧಿಸಿದ ಗುರುತಿನ ದಾಖಲೆಗಳಾದ ಆಧಾರ್ ಕಾರ್ಡ್, ಚುನಾವಣಾ ಗುರುತಿನ ಚೀಟಿ, ಪಾಸ್‌ಪೋರ್ಟ್, ಡ್ರೈವಿಂಗ್ ಲೈಸೆನ್ಸ್ ಮತ್ತು ಪಾನ್‌ಕಾರ್ಡ್, ಪ್ರತಿಗಳನ್ನು ಬ್ಯಾಂಕಿಗೆ ನೀಡತಕ್ಕದ್ದು. ಇವುಗಳಲ್ಲಿ ಪಾನ್‌ಕಾರ್ಡ್ ಕಡ್ಡಾಯವಾಗಿರುತ್ತದೆ.
11. ಸದಸ್ಯರು ಷೇರು ಪ್ರಮಾಣ ಪತ್ರ, ಗುರುತಿನ ಚೀಟಿಯನ್ನು ಪಡೆಯುವುದು ಹಾಗೂ ಒಂದು ವೇಳೆ ನಾಮಿನಿ ಬದಲಾವಣೆ ಇದ್ದ ಪಕ್ಷದಲ್ಲಿ ಸದರಿ ಬದಲಾಣೆಯನ್ನು ಬ್ಯಾಂಕಿಗೆ ಲಿಖಿತ ಮೂಲಕ ತಿಳಿಸುವುದು.
12. **ಸದಸ್ಯರಿಗೆ ಬೆಳಿಗ್ಗೆ 8–30 ರಿಂದ 10–30 ಗಂಟೆಯವರೆಗೆ ಮಾತ್ರ ಉಪಹಾರವನ್ನು ಏರ್ಪಡಿಸಲಾಗಿದೆ.**
13. **ಸದಸ್ಯರ ಗಮನಕ್ಕೆ:** ಅತಿ ಶೀಘ್ರದಲ್ಲಿ ಸುಸಜ್ಜಿತವಾದ ಕೇಂದ್ರ ಕಛೇರಿ ಕಟ್ಟಡ ಪೂರ್ಣಗೊಳ್ಳಲಿದೆ, ಬ್ಯಾಂಕಿನ ವ್ಯವಹಾರಗಳನ್ನು ಈ ನೂತನ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು. ಈ ಕುರಿತು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು.

### ಕೇಂದ್ರ ಕಛೇರಿ

**ನಂ. 14, ರಜತ ಭವನ, 1ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ,**
**ವಿಜಯನಗರ, ಬೆಂಗಳೂರು–560104 । ದೂರವಾಣಿ: 23300497,23402712.**

| ಮುಖ್ಯಕಾರ್ಯನಿರ್ವಹಣಾಧಿಕಾರಿ | ಸಹಾಯಕ ವ್ಯವಸ್ಥಾಪಕರು |
|---|---|
| **ಶ್ರೀಮತಿ ಭಾಗ್ಯ. ಎಸ್.** | **ಶ್ರೀಮತಿ ಲೀಲಾವತಿ. ಆರ್** |

### ವಿಜಯನಗರ ಶಾಖೆ

**ನಂ. 14, "ರಜತ ಭವನ", 1ನೇ ಮುಖ್ಯರಸ್ತೆ,**
**ಹಕ್ಕ ರಸ್ತೆ, ಹಂಪಿನಗರ, ವಿಜಯನಗರ,**
**ಬೆಂಗಳೂರು – 560 104.**
**ದೂರವಾಣಿ: 23300497, 41159606**
ವ್ಯವಸ್ಥಾಪಕರು,
ಶ್ರೀ ಯೋಗೇಶ್ .ಬಿ

### ಮಹಾಲಕ್ಷ್ಮೀಪುರಂ ಶಾಖೆ

**ಸಂಖ್ಯೆ 21, 6 ನೇ ಮುಖ್ಯರಸ್ತೆ,**
**ಮುನೇಶ್ವರ ಬ್ಲಾಕ್, ಮಹಾಲಕ್ಷ್ಮೀಪುರ,**
**ಬೆಂಗಳೂರು–560086**
**ದೂರವಾಣಿ: 23592994, 23197492**
ಸಹಾಯಕ ವ್ಯವಸ್ಥಾಪಕರು
ಶ್ರೀಮತಿ ಪೂರ್ಣಿಮಾ. ವೈ.ಕೆ.

### ಮೂಡಲಪಾಳ್ಯ ಶಾಖೆ

**ಸಂಖ್ಯೆ 167, ನಾಗರಬಾವಿ ಮುಖ್ಯ ರಸ್ತೆ,**
**ಮಧುರನಗರ, ಮೂಡಲಪಾಳ್ಯ,**
**ಬೆಂಗಳೂರು–560072,**
**ದೂರವಾಣಿ: 23110019, 23504924**
ವ್ಯವಸ್ಥಾಪಕರು
ಶ್ರೀಮತಿ ಗೀತಾ. ಸಿ.

### ರಾಜರಾಜೇಶ್ವರಿನಗರ ಶಾಖೆ

**ನಂ–117, 12ನೇ ಅಡ್ಡರಸ್ತೆ, ಐಡಿಯಲ್ ಹೋಂ, 1ನೇ ಹಂತ, ರಾಜರಾಜೇಶ್ವರಿನಗರ, ಬೆಂಗಳೂರು–560098**
**ದೂರವಾಣಿ: 28604162**
ಸಹಾಯಕ ವ್ಯವಸ್ಥಾಪಕರು
ಶ್ರೀ ಬಾಲರಾಜು.ಎ

### ಸುಂಕದಕಟ್ಟೆ ಶಾಖೆ

**ನಂ.47 ಮಾಗಡಿ ಮುಖ್ಯರಸ್ತೆ, ಜಿ.ಟಿ. ಶಿಕ್ಷಣ ಸಂಸ್ಥೆಗಳ ಎದುರು,**
**ಸುಂಕದಕಟ್ಟೆ, ಬೆಂಗಳೂರು–560 091**
**ದೂರವಾಣಿ: 23586055**
ಸಹಾಯಕ ವ್ಯವಸ್ಥಾಪಕರು
ಶ್ರೀಮತಿ ರೂಪಾ ಎಂ.

## ಸಾಲದ ಮೇಲಿನ ಬಡ್ಡಿ ದರಗಳು ದಿನಾಂಕ 01/03/2023ರಿಂದ ಅನ್ವಯವಾಗುವಂತೆ

| ಕ್ರಸಂ. | ಸಾಲದ ವಿವರಗಳು | | ಸಾಲದ ಮಿತಿ | ಬಡ್ಡಿ ದರ |
|---|---|---|---|---|
| 1 | ಸ್ಥಿರಾಸ್ತಿ ಸಾಲಗಳಿಗೆ a) ಮನೆ ಕಟ್ಟಲು ಮತ್ತು ಖರೀದಿಗಾಗಿ | | ರೂ.35.00 ಲಕ್ಷ ದವರೆಗೆ | ಶೇ 8.25% |
| | | | ರೂ.35.00 ಲಕ್ಷದಿಂದ ರೂ.75.00 ಲಕ್ಷದ ವರೆಗೆ | ಶೇ 9.00% |
| | | | ರೂ.75.00 ಲಕ್ಷದಿಂದ ರೂ.140.00 ಲಕ್ಷದವರೆಗೆ | ಶೇ 9.50% |
| | b) ಮನೆ ರಿಪೇರಿಗೆ | | ರೂ.10.00 ಲಕ್ಷದವರೆಗೆ | ಶೇ 8.25% |
| | c) ನಿವೇಶನ ಖರೀದಿ | ಗೃಹಬಳಕೆ | ರೂ.140.00 ಲಕ್ಷದವರೆಗೆ | ಶೇ 11.00% |
| | | ಮತ್ತು ವಾಣಿಜ್ಯ | ರೂ.140.00 ಲಕ್ಷದವರೆಗೆ | ಶೇ 12.00% |
| 2 | ಸದಸ್ಯರ ಮಕ್ಕಳ ವಿದ್ಯಾಭ್ಯಾಸಕ್ಕೆ | | ರೂ.20.00 ಲಕ್ಷದವರೆಗೆ | ಶೇ 9.25% |
| | | | ರೂ.20.00 ಲಕ್ಷ ಮೇಲ್ಪಟ್ಟು ರೂ.50.00 ಲಕ್ಷದವರೆಗೆ | ಶೇ 9.50% |
| 3 | ಸದಸ್ಯರ ಮಕ್ಕಳ ಮದುವೆ ಉದ್ದೇಶಕ್ಕಾಗಿ | | ರೂ.25.00 ಲಕ್ಷದವರೆಗೆ | ಶೇ. 10.00% |

*ಷರತ್ತುಗಳು ಮತ್ತು ನಿಬಂಧನೆಗೊಳಪಟ್ಟಿರುತ್ತದೆ.

| ಕ್ರಸಂ. | ಸಾಲದ ವಿವರಗಳು | ಸಾಲದ ಮಿತಿ | ಬಡ್ಡಿ ದರ |
|---|---|---|---|
| 4 | ವಾಹನ ಸಾಲಗಳಿಗೆ * | ರೂ.50.00 ಲಕ್ಷದವರೆಗೆ | ಶೇ 8.50% ರಿಂದ ಶೇ 9.50% |
| 5 | ಆಭರಣಗಳ ಮೇಲಿನ ಸಾಲಗಳಿಗೆ * | ರೂ.20.00 ಲಕ್ಷದವರೆಗೆ | ಶೇ 9.00% ರಿಂದ ಶೇ 10.00% |
| 6 | ಓ.ಡಿ ಸಾಲಕ್ಕೆ * | ರೂ.500.00 ಲಕ್ಷದವರೆಗೆ | ಶೇ 11.00% ರಿಂದ ಶೇ 11.50% |
| 7 | ವ್ಯಾಪಾರಾಭಿವೃದ್ಧಿ ಸಾಲ * | ರೂ.1200.00 ಲಕ್ಷದವರಗೆ | ಶೇ 10.00% ರಿಂದ ಶೇ 11.00% |
| 8 | ಅಡಮಾನ ಸಾಲ | ರೂ.1200.00 ಲಕ್ಷದವರಗೆ | ಶೇ 12.00% |
| 10 | "B" ಖಾತಾ ಸ್ಥಿರಾಸ್ತಿಗಳಿಗೆ (ಸ್ಥಿರಾಸ್ತಿ ಜೊತೆಗೆ ಕಟ್ಟಡದ ಗೈಡ್‌ಲೈನ್ ಬೆಲೆಯ ಶೇ 50% ರಷ್ಟು) ಗರಿಷ್ಟ | ರೂ.100.00 ಲಕ್ಷದವರಗೆ | ಶೇ 12.00% |
| 11 | ಜಾಮೀನು ಸಾಲಗಳಿಗೆ | ರೂ.2,00,000/- | ಶೇ 13.00% |
| 12 | ಸಿ.ಆರ್.ಇ. ಸಾಲಗಳಿಗೆ | ರೂ.1,200.00 ಲಕ್ಷದವರೆಗೆ | ಶೇ 15.00% |

## ಠೇವಣಿಗಳ ಮೇಲಿನ ವಾರ್ಷಿಕ ಬಡ್ಡಿದರಗಳು

| ಅವಧಿ | ಸಾಮಾನ್ಯ | ಹಿರಿಯ ನಾಗರೀಕರಿಗೆ |
|---|---|---|
| 31 ದಿನದ ಮೇಲ್ಪಟ್ಟು 90 ದಿನಗಳ ಅವಧಿಗೆ | 4.75% | 5.00% |
| 91 ದಿನದ ಮೇಲ್ಪಟ್ಟು 180 ದಿನಗಳ ಅವಧಿಗೆ | 5.25% | 5.50% |
| 181 ದಿನದ ಮೇಲ್ಪಟ್ಟು 365 ದಿನಗಳ ಅವಧಿಗೆ | 5.75% | 6.00% |
| 01 ವರ್ಷ ಮೇಲ್ಪಟ್ಟು 2 ವರ್ಷದ ಅವಧಿಗೆ | 7.00% | 7.50% |
| 02 ವರ್ಷ ಮೇಲ್ಪಟ್ಟು 5 ವರ್ಷದ ಅವಧಿಗೆ | 7.25% | 7.75% |

**ವಿಶೇಷ ಠೇವಣಿ ಯೋಜನೆ 15 ತಿಂಗಳಿಗೆ ಸಾಮಾನ್ಯರಿಗೆ ಶೇ. 7.75% ಮತ್ತು ಹಿರಿಯ ನಾಗರಿಕರಿಗೆ ಶೇ. 8.25% ಬಡ್ಡಿದರ ಇರುತ್ತದೆ.**

**ಎಲ್ಲಾ ಶಾಖೆಗಳ ಬ್ಯಾಂಕಿನ ವ್ಯವಹಾರದ ವೇಳೆ**
**ಸೋಮವಾರದಿಂದ ಶನಿವಾರದವರೆಗೆ:**

**ವಾರದ ದಿನಗಳಲ್ಲಿ : ಬೆಳಿಗ್ಗೆ 10-00 ರಿಂದ 1-30 ರವರೆಗೆ**
**ಮಧ್ಯಾಹ್ನ 2-00 ರಿಂದ 5-30 ರವರೆಗೆ**

**ವಾರದ ರಜಾ ದಿನ: ಪ್ರತಿ ಭಾನುವಾರ ಹಾಗೂ 2ನೇ ಮತ್ತು 4ನೇ ಶನಿವಾರ**

## ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

**ಬ್ಯಾಂಕಿನ ಆಡಳಿತ ಮಂಡಳಿಯವರು, ಬ್ಯಾಂಕಿನ ಸದಸ್ಯರ ಮಕ್ಕಳಿಗೆ 2022-2023ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್. ಎಲ್.ಸಿ. ಪರೀಕ್ಷೆಯಲ್ಲಿ ಶೇ 90.00% ಮತ್ತು ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಶೇ 85% ಮತ್ತು ಅದಕ್ಕಿಂತ ಹೆಚ್ಚಿಗೆ ಅಂಕಗಳಿಸಿ ತೇರ್ಗಡೆ ಹೊಂದಿರುವ ಅರ್ಹ ವಿದ್ಯಾರ್ಥಿಗಳಿಗೆ ಬ್ಯಾಂಕಿನ ವತಿಯಿಂದ ಪ್ರತಿಭಾ ಪುರಸ್ಕಾರವನ್ನು ನೀಡಲು ತೀರ್ಮಾನಿಸಿದ್ದು, ಹೆಚ್ಚಿನ ವಿವರಗಳಿಗೆ ಬ್ಯಾಂಕಿನ ಶಾಖಾ ವ್ಯವಸ್ಥಾಪಕರನ್ನು ಸಂಪರ್ಕಿಸಿ ಅರ್ಜಿಯನ್ನು ಪಡೆಯಬಹುದಾಗಿದೆ. ಅರ್ಜಿಯನ್ನು ಸ್ವೀಕರಿಸುವ ಕೊನೆಯ ದಿನಾಂಕ: 10-08-2023 ಆಗಿರುತ್ತದೆ. ಪ್ರತಿಭಾ ಪುರಸ್ಕಾರ ನೀಡುವ ದಿನಾಂಕ ಮತ್ತು ಸ್ಥಳವನ್ನು ಪೋಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ದೂರವಾಣಿ ಮುಖಾಂತರ ಮುಂದೆ ತಿಳಿಸಲಾಗುವುದು.**

## ವಿಷಯ ಸೂಚಿಗೆ ಟಿಪ್ಪಣಿ

ಸಹಕಾರ ಸಂಘಗಳ 2013ರ ತಿದ್ದುಪಡಿಕಾಯ್ದೆ ನಿಯಮದನುಸಾರ ದಿನಾಂಕ 30/07/2023ರ ಭಾನುವಾರ ಬೆಳಿಗ್ಗೆ 10–30 ಗಂಟೆಗೆ ನಡೆಸಲು ಉದ್ದೇಶಿಸಿರುವ ಸರ್ವಸದಸ್ಯರ ಮಹಾಸಭೆಯ ವಿಷಯ ಸೂಚಿಯಲ್ಲಿನ ವಿಷಯಗಳ ಬಗ್ಗೆ ಸಂಕ್ಷಿಪ್ತ ಟಿಪ್ಪಣೆಯನ್ನು ತಮ್ಮ ಮುಂದೆ ಮಂಡಿಸಲಾಗಿದೆ.

**–:ವಿಷಯಸೂಚಿ:–**

1. **ಜ್ಯೋತಿ ಬೆಳಗಿಸುವುದರ ಮೂಲಕ ಸಭೆಯ ಉದ್ಘಾಟನೆ**
2. **ಪ್ರಾರ್ಥನೆ**
3. **ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು.**

ಮುಖ್ಯಕಾರ್ಯನಿರ್ವಹಣಾಧಿಕಾರಿಯವರು ಮಹಾ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವರು

4. **2022–2023 ನೇ ಸಾಲಿನಲ್ಲಿ ನಿಧನ ಹೊಂದಿದ ಸದಸ್ಯರಿಗೆ ಶ್ರದ್ಧಾಂಜಲಿ ಅರ್ಪಿಸುವುದು.**

   ಪ್ರಸಕ್ತ ಸಾಲಿನಲ್ಲಿ ಒಟ್ಟು 119 ಜನ ಸದಸ್ಯರು ನಿಧನ ಹೊಂದಿದ್ದು 01 ನಿಮಿಷ ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಅರ್ಪಿಸುವುದು, ಪಟ್ಟಿಯನ್ನು ಲಗತ್ತಿಸಿದೆ.

   **ಪುಟ ಸಂಖ್ಯೆ : 06–07**

5. **ಅಧ್ಯಕ್ಷರಿಂದ ಸ್ವಾಗತ ಭಾಷಣ ಮತ್ತು 2022–2023 ನೇ ಸಾಲಿನ ಆಡಳಿತ ಮಂಡಳಿ ವರದಿಯ ಅಂಗೀಕಾರ**

   ಬ್ಯಾಂಕಿನ ಅಧ್ಯಕ್ಷರಾದ ಶ್ರೀ. ಹೆಚ್.ಸಿ.ಗೋಪಾಲ್‌ರವರು 42ನೇ ವಾರ್ಷಿಕ ಸರ್ವಸದಸ್ಯರ ಸಭೆಗೆ ಹಾಜರಾದ ಸದಸ್ಯರನ್ನು ಸಭೆಗೆ ಸ್ವಾಗತಿಸುವರು ಮತ್ತು ಆಡಳಿತ ಮಂಡಳಿ ವರದಿಯನ್ನು ಅನುಮೋದನೆಗಾಗಿ ಮಹಾಸಭೆಗೆ ಮಂಡಿಸುವರು.

   **ಪುಟ ಸಂಖ್ಯೆ : 7–12**

6. **ದಿನಾಂಕ 26/06/2022ರಂದು ನಡೆದ 41ನೇ ಸರ್ವಸದಸ್ಯರ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡುವುದು.**

   ದಿನಾಂಕ 26/06/2022ರಂದು ನಡೆದ 41ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಲಾಗುವುದು.

   **ಪುಟ ಸಂಖ್ಯೆ : 13–41**

7. **2022–2023ನೇ ಸಾಲಿನ ಲೆಕ್ಕ ಪರಿಶೋಧನೆ ಆದ ಲೆಕ್ಕಪತ್ರ ಹಾಗೂ ಲೆಕ್ಕ ಪರಿಶೋಧನಾ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು.**

   2022–2023ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಮೆ.ಬಾಬು ಅಂಡ್ ಬಡತ್‌ರವರು ನಡೆಸಿದ್ದು, ಲೆಕ್ಕಪರಿಶೋಧನಾ ವರದಿಯನ್ನು ದಿನಾಂಕ 17/06/2023 ರಂದು ಸಲ್ಲಿಸಿರುತ್ತಾರೆ. ಈ ವರದಿಯನ್ನು ಮಹಾಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

   **ಪುಟ ಸಂಖ್ಯೆ : 36–71**

8. **2022–2023ನೇ ಸಾಲಿನಲ್ಲಿ ಮಂಜೂರಾತಿಗಿಂತ ಹೆಚ್ಚಿಗೆ ಖರ್ಚಾಗಿರುವ ಬಾಬ್ತುಗಳನ್ನು ಅಂಗೀಕರಿಸುವುದು ಹಾಗೂ 2023–24ನೇ ಸಾಲಿನ ಅಂದಾಜು ಆಯ–ವ್ಯಯಕ್ಕೆ ಮಂಜೂರಾತಿ ನೀಡುವುದು.**

   2022–2023ನೇ ಸಾಲಿನಲ್ಲಿ ಮಂಜೂರಾತಿಗಿಂತ ಹೆಚ್ಚಿಗೆ ಖರ್ಚಾಗಿರುವ ಬಾಬ್ತುಗಳಿಗೆ ನೀಡಿರುವ ಕಾರಣಗಳನ್ನು ಪರಿಗಣಿಸಿ ಅಂಗೀಕರಿಸುವುದು. ಹಾಗೂ 2023–24ನೇ ಸಾಲಿನ ವ್ಯವಹಾರದ ಮಟ್ಟ, ಮುಂದಿನ ಯೋಜನೆಗಳು ಹಾಗೂ ಹೊಂದಲಾದ ಗುರಿ ಇವುಗಳನ್ನು ಪರಿಗಣಿಸಿ ಅಂದಾಜು ಆಯ–ವ್ಯಯದ ಪಟ್ಟಿಯನ್ನು ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಲಾಗಿದೆ.

   **ಪುಟ ಸಂಖ್ಯೆ : 72–74**

---

## NACH

ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನದಂತೆ ದಿನಾಂಕ 01/08/2021 ರಿಂದ ಅನ್ವಯವಾಗುವಂತೆ National Automated Clearing House (NACH) ವರ್ಷದ 365 ದಿವಸವೂ ಕಾರ್ಯ ನಿರ್ವಹಿಸುತ್ತಿರುವುದರಿಂದ ಮಾನ್ಯ ಸದಸ್ಯರು ಮತ್ತು ಗ್ರಾಹಕರು ECS ವ್ಯವಹಾರ ಸಂಬಂಧ ತಮ್ಮ ಖಾತೆಗಳಲ್ಲಿ ಸಾಕಷ್ಟು ಶಿಲ್ಕನ್ನು (Sufficient Balance) ನಿರ್ವಹಿಸಲು ಈ ಮೂಲಕ ಸೂಚಿಸಲಾಗಿದೆ.

**9. 2022–2023ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸುವುದು.**
2022–2023ನೇ ಸಾಲಿನಲ್ಲಿ ಬ್ಯಾಂಕ್ ರೂ. 11,24,44,925.51 ನಿವ್ವಳ ಲಾಭಗಳಿಸಿದ್ದು, ಈ ಲಾಭದ ವಿಲೇವಾರಿಯನ್ನು ಮಹಾಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ಪುಟ ಸಂಖ್ಯೆ : 75**

**10. ಬ್ಯಾಂಕಿನ ನೌಕರರ ಸೇವಾ ನಿಯಮ, ಸಿಬ್ಬಂದಿ ವರ್ಗದವರ ವೃಂದ ಮತ್ತು ನೇಮಕಾತಿ ನಿಯಮಗಳು ಮತ್ತು ಸಿಬ್ಬಂದಿ ವೃಂದಬಲ ಮತ್ತು ವೇತನ ಶ್ರೇಣಿಗಳು ಪರಿಷ್ಕರಣೆ ಮಾಡಲು ಅನುಮೋದನೆ.**

**ಪುಟ ಸಂಖ್ಯೆ : 75**

**11. ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಹಾಗೂ ಸದಸ್ಯತ್ವದ ಸಮಾಪನೆ ಮಾಡಿದ ಸದಸ್ಯರುಗಳ ಪಟ್ಟಿಯ ಅನುಮೋದನೆ.**
2022–2023ನೇ ಸಾಲಿನಲ್ಲಿ ಬ್ಯಾಂಕಿಗೆ ಹೊಸದಾಗಿ ಸೇರ್ಪಡೆಯಾದ ಸದಸ್ಯರ ಹಾಗೂ ಸದಸ್ಯತ್ವ ಮುಕ್ತಾಯ ಮಾಡಿಕೊಂಡ ಸದಸ್ಯರ ಪಟ್ಟಿಯನ್ನು ಮಹಾಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಲಾಗಿದೆ.

**ಪುಟ ಸಂಖ್ಯೆ : 75**

**12. ಬ್ಯಾಂಕ್ ತನ್ನ ನಿಧಿಗಳನ್ನು ಕಲಂ 58ರ ಪ್ರಕಾರ ತೊಡಗಿಸುವ ಬಗ್ಗೆ ಅನುಮತಿ ನೀಡುವುದು.**
**ಸಹಕಾರ ಸಂಘಗಳ ನಿಯಮದಂತೆ ನಿಧಿಗಳನ್ನು ತೊಡಗಿಸಲು ಮಹಾಸಭೆಯ ಒಪ್ಪಿಗೆಗೆ ಮಂಡಿಸಲಾಗಿದೆ.**

**ಪುಟ ಸಂಖ್ಯೆ : 76**

**13. 2023–2024ನೇ ಸಾಲಿಗೆ ಲೆಕ್ಕ ಪರಿಶೋಧನೆ ಕೈಗೊಳ್ಳಲು ಲೆಕ್ಕ ಪರಿಶೋಧಕರನ್ನು ನೇಮಕ ಮಾಡಿಕೊಳ್ಳುವ ಕುರಿತು ಅನುಮೋದನೆ.**
ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಾನುಸಾರ 2023–24ನೇ ಸಾಲಿಗೆ ಲೆಕ್ಕಪರಿಶೋಧನೆ ಕೈಗೊಳ್ಳಲು ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿದ್ದು, ಮಹಾಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ಪುಟ ಸಂಖ್ಯೆ : 76**

**14. ಸದಸ್ಯರುಗಳಿಂದ ಬಂದ ಸೂಚನೆಗಳ ಪರಿಶೀಲನೆ (ಸಭೆಗೆ ಮೂರು ದಿನಗಳ ಮುಂಚಿತವಾಗಿ ಲಿಖಿತ ಮೂಲಕ ಬ್ಯಾಂಕ್‌ಗೆ ತಲುಪಿದ ಸೂಚನೆ ಪತ್ರಗಳ ಬಗ್ಗೆ ಚರ್ಚೆ)**

**15. ಅಧ್ಯಕ್ಷರ ಅನುಮತಿ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು**

**16. ವಂದನಾರ್ಪಣೆ**

**ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ**

ಸಹಿ/–
**ಶ್ರೀಮತಿ ಭಾಗ್ಯ. ಎಸ್**
ಮುಖ್ಯ ಕಾರ್ಯನಿರ್ವಹಣಾಧಿಕಾರಿ

**ಸ್ಥಳ : ಬೆಂಗಳೂರು.**
ದಿನಾಂಕ : 06–07–2023

---

# ಸದಸ್ಯರ ಗಮನಕ್ಕೆ

ಬ್ಯಾಂಕಿನ ಸದಸ್ಯರು ಹಿಂದಿನ 5 ವಾರ್ಷಿಕ ಸಾಮಾನ್ಯ ಮಹಾ ಸಭೆಗಳ ಪೈಕಿ 02 ಸಭೆಗಳಿಗೆ ಹಾಜರಾಗದಿದ್ದಲ್ಲಿ ಅಥವಾ ಮೂರು ನಿರಂತರ ಸಹಕಾರ ವರ್ಷಗಳವರೆಗೆ ಈ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕ್ ನೀಡುವ / ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪ್ರತಿವರ್ಷ ಬಳಸಿಕೊಳ್ಳಲು ತಪ್ಪಿದ್ದಲ್ಲಿ, ಅಂಥಹ ಸದಸ್ಯರು ಮಹಾ ಸಭೆಯಲ್ಲಿ ಮತ ಚಲಾಯಿಸುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

**ವಿಷಯ–4**

**2022–23 ನೇ ಸಾಲಿನಲ್ಲಿ ನಿಧನ ಹೊಂದಿದ ಸದಸ್ಯರಿಗೆ ಶ್ರದ್ಧಾಂಜಲಿ ಅರ್ಪಿಸುವುದು.**

2022–23 ನೇ ಸಾಲಿನಲ್ಲಿ ಒಟ್ಟು 119 ಸದಸ್ಯರುಗಳು ನಿಧನ ಹೊಂದಿದ್ದು 01 ನಿಮಿಷ ಮೌನಾಚರಣೆ ಮಾಡುವ ಮೂಲಕ ಮೃತರ ಆತ್ಮಕ್ಕೆ ಶಾಂತಿ ಕೋರುವುದು. ಹಾಗೂ ಬ್ಯಾಂಕಿನ ಹಿರಿಯ ಅಧಿಕಾರಿಯಾದ ಶ್ರೀ ರುದ್ರೇಶ್ ಜೆ.ಆರ್. ರವರು ಹೃದಯಾಘಾತದಿಂದ ಮೃತಗೊಂಡಿದ್ದು, ಅವರ ಸೇವೆಯನ್ನು ಸ್ಮರಿಸುತ್ತಾ ಅವರ ಆತ್ಮಕ್ಕೆ ಶಾಂತಿ ಕೋರುವುದು.

**2022–23ನೇ ಸಾಲಿನಲ್ಲಿ ಮೃತಪಟ್ಟ ಸದಸ್ಯರ ಪಟ್ಟಿ**

| ಕ್ರಸಂ | ಸದಸ್ಯರ ಹೆಸರು | ಸದಸ್ಯತ್ವ ಸಂಖ್ಯೆ |
|---|---|---|
| 1 | ಶ್ರೀ. ಅರವಿಂದ್. ಆರ್. ಯಾರಗೋಪ್ | ASM/1431 |
| 2 | ಶ್ರೀ. ಮಲ್ಲಯ್ಯ. ಹೆಚ್. | ASM/2001427 |
| 3 | ಶ್ರೀಮತಿ. ವೆಂಕಟಲಕ್ಷ್ಮೀ. ಆರ್. | ASM/2002207 |
| 4 | ಶ್ರೀ. ಶ್ರೀನಿವಾಸ್ ಹೆಚ್. ಟಿ. | ASM/2002906 |
| 5 | ಶ್ರೀಮತಿ. ಗಿರಿಜಮ್ಮ. ಬಿ. ಎಂ. | ASM/2003416 |
| 6 | ಶ್ರೀ. ಲಕ್ಷ್ಮೀಕಾಂತ. ಎನ್. ಪಿ. | ASM/2003578 |
| 7 | ಶ್ರೀ. ಗೋವಿಂದಯ್ಯ | ASM/2003965 |
| 8 | ಶ್ರೀ. ತ್ಯಾಗರಾಜು. ಕೆ | ASM/2004466 |
| 9 | ಶ್ರೀ. ಮಂಜುನಾಥ ಸ್ವಾಮಿ. ಎಂ. | ASM/2561 |
| 10 | ಶ್ರೀ. ಮೃತ್ಯುಂಜಯ | ASM/3639 |
| 11 | ಶ್ರೀ. ಹನುಮಂತರಾಯ | ASM/3813 |
| 12 | ಶ್ರೀ. ರಮೇಶ್. ವಿ. ಎನ್. | ASM/4898 |
| 13 | ಶ್ರೀ. ನಾಗರಾಜ್. ಸಿ. | ASM/5045 |
| 14 | ಶ್ರೀ. ಕನ್ನನ್. ಎಸ್. | ASM/5105 |
| 15 | ಶ್ರೀಮತಿ. ಕುಸುಮ. ಎಂ. ಎಸ್. | ASM/5503 |
| 16 | ಶ್ರೀಮತಿ. ಶಾರದ. ಹೆಚ್. | RSM /9151 |
| 17 | ಶ್ರೀ. ಕದ್ರಿನರಸಿಂಹಯ್ಯ | RSM/10001 |
| 18 | ಶ್ರೀ. ವೆಂಕಟೇಶ್. ಎಂ. | RSM/10046 |
| 19 | ಶ್ರೀ. ಮಂಜುನಾಥ ರಾವ್. ಪಿ. ಆರ್. | RSM/1008 |
| 20 | ಶ್ರೀ. ರಾಜೇಂದ್ರ ಪ್ರಸಾದ್. ಎನ್. | RSM/10149 |
| 21 | ಶ್ರೀಮತಿ. ಅನುಸುಯ. ಹೆಚ್. | RSM/10184 |
| 22 | ಶ್ರೀಮತಿ. ಸುಶೀಲದೇವಿ ಎನ್. ಹೀರೇಮಠ | RSM/10265 |
| 23 | ಶ್ರೀ. ಮುನಿಯಪ್ಪ. ಎಂ. | RSM/10270 |
| 24 | ಶ್ರೀ. ರಾಮಕೃಷ್ಣ. ಕೆ. | RSM/10423 |
| 25 | ಶ್ರೀ. ಗೋವಿಂದ ಬಂಡಾರಿ. ಬಿ. | RSM/10537 |
| 26 | ಶ್ರೀ. ಶ್ರೀನಿವಾಸ್. ಆರ್. | RSM/10550 |
| 27 | ಶ್ರೀ. ಸುಂದರ ರಾಜು. ಆರ್. | RSM/10591 |
| 28 | ಶ್ರೀ. ಅರ್ಜುನಾಗಿ. ವಿ. ಆರ್. | RSM/10865 |
| 29 | ಶ್ರೀ. ಗೋವಿಂದರಾಜನ್. ಎಂ. | RSM/10867 |
| 30 | ಶ್ರೀ. ಧರಣೆಗೌಡ | RSM/10878 |
| 31 | ಶ್ರೀಮತಿ. ಜಯಮ್ಮ | RSM/11328 |
| 32 | ಶ್ರೀ. ದೊಡ್ಡಯ್ಯ. ಕೆ. | RSM/11389 |
| 33 | ಶ್ರೀ. ಕೃಷ್ಣಮೂರ್ತಿ. ಕೆ. | RSM/11486 |
| 34 | ಶ್ರೀ. ರಾಮಯ್ಯ. ಡಿ. | RSM/11497 |

| ಕ್ರಸಂ | ಸದಸ್ಯರ ಹೆಸರು | ಸದಸ್ಯತ್ವ ಸಂಖ್ಯೆ |
|---|---|---|
| 35 | ಶ್ರೀಮತಿ. ಪದ್ಮಜಾ. ಎಸ್. | RSM/11566 |
| 36 | ಶ್ರೀಮತಿ. ಪ್ರೇಮ | RSM/11639 |
| 37 | ಶ್ರೀ. ಲಕ್ಷ್ಮೀಶ. ಕೆ. ಎನ್. | RSM/11706 |
| 38 | ಶ್ರೀ. ಸತ್ಯನಾರಾಯಣ. ಬಿ. | RSM/12062 |
| 39 | ಶ್ರೀ. ಜಗನ್ನಾಥನ್. ಸಿ. ಎಸ್ | RSM/1217 |
| 40 | ಶ್ರೀಮತಿ. ಶಾಂತಮ್ಮ. ಪಿ. | RSM/12231 |
| 41 | ಶ್ರೀ. ಮಂದಣ್ಣ. ಕೆ. ಎನ್. | RSM/12881 |
| 42 | ಶ್ರೀ. ರಾಮಮೂರ್ತಿ. ಎನ್. | RSM/12887 |
| 43 | ಶ್ರೀ. ರಂಗಸ್ವಾಮಿ. ಎನ್. | RSM/13261 |
| 44 | ಶ್ರೀ. ಅನಂತರಾಮ್. ಕೆ. ವಿ. | RSM/13435 |
| 45 | ಶ್ರೀ. ಚನ್ನ | RSM/1355 |
| 46 | ಶ್ರೀ. ಅರಸಪ್ಪ | RSM/13574 |
| 47 | ಶ್ರೀಮತಿ. ವೆಂಕಟಮ್ಮ | RSM/13588 |
| 48 | ಶ್ರೀ. ಮಲ್ಲೇಶಯ್ಯ. ಕೆ. ಬಿ. | RSM/13640 |
| 49 | ಶ್ರೀ. ಲೋಕೇಶ್ವರನ್. ಹೆಚ್. | RSM/13964 |
| 50 | ಶ್ರೀ. ನಾರಾಯಣಮೂರ್ತಿ. ಜಿ. | RSM/13982 |
| 51 | ಶ್ರೀ. ಮುನಿಸ್ವಾಮಪ್ಪ. ಕೆ. ಎಂ. | RSM/1413 |
| 52 | ಶ್ರೀ. ಲಕ್ಕಪ್ಪ. ಎಂ. ಜಿ. | RSM/14141 |
| 53 | ಶ್ರೀ. ಪುಟ್ಟರಾಜು. ಜಿ. | RSM/14179 |
| 54 | ಶ್ರೀ. ರಾಜಶೇಖರ್ ಮೂರ್ತಿ. ಜಿ. | RSM/142 |
| 55 | ಶ್ರೀಮತಿ. ಕನಕಮ್ಮ | RSM/148201 |
| 56 | ಶ್ರೀ. ಗೋವಿಂದ ಸ್ವಾಮಿ. ಆರ್. | RSM/15121 |
| 57 | ಶ್ರೀ. ಮುರುಗೇಂದ್ರಪ್ಪ. ಕೆ. ಜಿ. | RSM/1707 |
| 58 | ಶ್ರೀ. ಹನುಮಂತ ರಾವ್. ಜಿ. | RSM/1746 |
| 59 | ಶ್ರೀ. ಜಯಮ್ಮ. ಎನ್. | RSM/1932 |
| 60 | ಶ್ರೀ. ಶ್ರೀನಿವಾಸಮೂರ್ತಿ. ಎಲ್. | RSM/9398 |
| 61 | ಶ್ರೀ. ಸಿದ್ದೇಗೌಡ. ಹೆಚ್. ಬಿ. | RSM/2448 |
| 62 | ಶ್ರೀ. ಶಾಂತರಾಮ ರಾವ್. ಕೆ. ಎಸ್. | RSM/2502 |
| 63 | ಶ್ರೀ. ಮುರುಗಯ್ಯ. ಎ. | RSM/2607 |
| 64 | ಶ್ರೀ. ಧಶರಥ್. ಎಂ. ಪಿ. | RSM/2769 |
| 65 | ಶ್ರೀಮತಿ. ಮಹದೇವಮ್ಮ | RSM/3026 |
| 66 | ಶ್ರೀಮತಿ. ತಂಗಮ್ಮ. ಕೆ. | RSM/3226 |
| 67 | ಶ್ರೀ. ಹನುಮಂತರಾಯಪ್ಪ. ಪಿ. | RSM/3277 |
| 68 | ಶ್ರೀಮತಿ. ಮಸಿಲಾಮಣಿ. ಜಿ. | RSM/3489 |

| ಕ್ರ.ಸಂ | ಸದಸ್ಯರ ಹೆಸರು | ಸದಸ್ಯತ್ವ ಸಂಖ್ಯೆ |
|---|---|---|
| 69 | ಶ್ರೀ. ಶಿವಪ್ಪ. ಎಂ. ಪಿ. | RSM/3685 |
| 70 | ಶ್ರೀ. ಪರಮಶಿವಯ್ಯ. ಕೆ. ಎಂ. | RSM/3713 |
| 71 | ಶ್ರೀ. ಗೋಪಾಲರಾವ್. ಕೆ | RSM/3736 |
| 72 | ಶ್ರೀ. ಕೊಟ್ಟೂರಪ್ಪ. ಎಸ್. | RSM/386 |
| 73 | ಶ್ರೀ. ಚಿಕ್ಕಹನುಮಯ್ಯ | RSM/3896 |
| 74 | ಶ್ರೀ. ರಾಮಕೃಷ್ಣ | RSM/3909 |
| 75 | ಶ್ರೀಮತಿ. ಸಿದ್ದಗಂಗಮ್ಮ. ಕೆ. ಸಿ. | RSM/4527 |
| 76 | ಶ್ರೀ. ಪ್ರಕಾಶ್ ಗೌಡ. ಸಿ. | RSM/4702 |
| 77 | ಶ್ರೀ. ರಮೇಶ್. ಎಂ. | RSM/4847 |
| 78 | ಶ್ರೀ. ಚಂದ್ರ. ಎಸ್. ಎಲ್. | RSM/5033 |
| 79 | ಶ್ರೀಮತಿ. ಸರೋಜಮ್ಮ | RSM/5112 |
| 80 | ಶ್ರೀ. ಅಬ್ದುಲ್ ಖಾಯಮ್ | RSM/5168 |
| 81 | ಶ್ರೀ. ಶಂಕರ್. ಎಸ್. | RSM/5189 |
| 82 | ಶ್ರೀ. ನಾಗರಾಜು. ಎಂ. ಎನ್. | RSM/5403 |
| 83 | ಶ್ರೀ. ವೆಂಕಟರಮಣರೆಡ್ಡಿ | RSM/5430 |
| 84 | ಶ್ರೀಮತಿ. ಶಾರದ ಎಲ್. ಕುಂದರ್ | RSM/5927 |
| 85 | ಶ್ರೀ. ಸತ್ಯಕುಮಾರ್. ಆರ್. | RSM/5933 |
| 86 | ಶ್ರೀಮತಿ. ಶಿವರುದ್ರಮ್ಮ. ಎಸ್. | RSM/6063 |
| 87 | ಶ್ರೀ. ಗೋವಿಂದಯ್ಯ. ಆರ್. | RSM/6237 |
| 88 | ಶ್ರೀಮತಿ. ಲಕ್ಷ್ಮಮ್ಮ | RSM/6302 |
| 89 | ಶ್ರೀ. ಅಡವಪ್ಪ | RSM/631 |
| 90 | ಶ್ರೀ. ರುದ್ರೇಶ್. ಆರ್. ಎಂ. | RSM/6332 |
| 91 | ಶ್ರೀ. ಜಯಕುಮಾರ್. ಸಿ. ಎಂ. | RSM/6351 |
| 92 | ಶ್ರೀ. ಜಯಕೃಷ್ಣ. ಆರ್. | RSM/6669 |
| 93 | ಶ್ರೀ. ವೆಂಕಟಯ್ಯ. ಪಿ. ಆರ್. | RSM/6895 |
| 94 | ಶ್ರೀ. ರುದ್ರಾಚಾರ್. ಹೆಚ್. | RSM/7333 |
| 95 | ಶ್ರೀ. ನರಸಿಂಹ ಮೂರ್ತಿ. ಎಸ್. | RSM/7408 |
| 96 | ಶ್ರೀಮತಿ. ಸಾವಿತ್ರಮ್ಮ. ಬಿ. ವಿ. | RSM/7478 |
| 97 | ಶ್ರೀ. ಶಿವಕುಮಾರ್. ಹೆಚ್. ವಿ. | RSM/768 |
| 98 | ಶ್ರೀ. ರಾಜಶೇಖರಯ್ಯ | RSM/7703 |
| 99 | ಶ್ರೀಮತಿ. ರಾಜಮ್ಮ. ಎಂ. | RSM/7887 |
| 100 | ಶ್ರೀಮತಿ. ಮಂಜುಳ. ಕೆ. ಜಿ. | RSM/7918 |
| 101 | ಶ್ರೀ. ಶಿವಕುಮಾರ್. ಡಿ. ಸಿ. | RSM/794 |
| 102 | ಶ್ರೀ. ರಾಮಚಂದ್ರ | RSM/7940 |
| 103 | ಶ್ರೀ. ಶಿವಣ್ಣ. ಎಸ್. | RSM/7982 |
| 104 | ಶ್ರೀಮತಿ. ರಾಧಮ್ಮ. ಆರ್. | RSM/805 |
| 105 | ಶ್ರೀ. ರಮೇಶ್ ಗೌಡ. ಸಿ. ಎನ್. | RSM/8257 |
| 106 | ಶ್ರೀ. ದೇವೇಂದ್ರ. ಎ. ಎನ್. | RSM/8385 |
| 107 | ಶ್ರೀ. ವೆಂಕಟರಮಣಪ್ಪ. ಎಸ್. ವಿ. | RSM/8428 |
| 108 | ಶ್ರೀ. ಚಂದ್ರಪ್ಪ. ಪಿ. | RSM/8698 |
| 109 | ಶ್ರೀ. ಗುರುರಾಜಯ್ಯ. ಹೆಚ್. ಎಂ. | RSM/8705 |
| 110 | ಶ್ರೀ. ನಾಗರಾಜು | RSM/8740 |
| 111 | ಶ್ರೀ. ಕೆಂಪರಾಜ್. ಸಿ. | RSM/9032 |
| 112 | ಶ್ರೀ. ಶಿವಣ್ಣ | RSM/9065 |
| 113 | ಶ್ರೀ. ಫಿಲೋಮೆನ್ ರಾಜ್. ಎಸ್. | RSM/9294 |
| 114 | ಶ್ರೀ. ಗಿರೀಶ್. ಎಂ. | RSM/9353 |
| 115 | ಶ್ರೀ. ಕೃಷ್ಣೇಗೌಡ. ಎನ್. | RSM/9413 |
| 116 | ಶ್ರೀ. ನಾಗರಾಜಪ್ಪ. ಕೆ. | RSM/9486 |
| 117 | ಶ್ರೀ. ಸೋಮಣ್ಣ. ಕೆ. ಡಿ. | RSM/9649 |
| 118 | ಶ್ರೀಮತಿ. ಗೌರಮ್ಮ. ಜಿ. | RSM/9873 |
| 119 | ಶ್ರೀ. ಶಾಂತಿನಾಥ ಸ್ವಾಮಿಜಿ | RSM/9935 |

**ವಿಷಯ 5:–ಅಧ್ಯಕ್ಷರಿಂದ ಸ್ವಾಗತ ಭಾಷಣ ಮತ್ತು 2022–23ನೇ ಸಾಲಿನ ಆಡಳಿತ ಮಂಡಳಿ ವರದಿಯ ಅಂಗೀಕಾರ.**

ಬ್ಯಾಂಕಿನ ಅಧ್ಯಕ್ಷರಾದಂತಹ ಶ್ರೀ ಹೆಚ್ ಸಿ ಗೋಪಾಲ್ ಆದ ನಾನು ಬ್ಯಾಂಕಿನ 42ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಗೆ ತಮ್ಮೆಲ್ಲರನ್ನು ಆಡಳಿತ ಮಂಡಳಿಯ ಪರವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. 2022–23ನೇ ಸಾಲಿನಲ್ಲಿ ಬ್ಯಾಂಕ್ ಸಾಧಿಸಿರುವ ಗುರಿಗಳು, ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಮಾಡಿರುವ ಅಭಿವೃದ್ಧಿಗಳು ಹಾಗೂ ಬ್ಯಾಂಕಿನ ಆರ್ಥಿಕ ವ್ಯವಹಾರಗಳ ಸಮೀಕ್ಷೆಗಳನ್ನು ಒಳಗೊಂಡ ಆರ್ಥಿಕ ವರದಿಯನ್ನು ತಮ್ಮಗಳ ಅನುಮೋದನೆಗೆ ಮಂಡಿಸಲಾಗಿದೆ. ಬ್ಯಾಂಕಿನ ಅಭಿವೃದ್ಧಿಗೆ ಕಾರಣೀಭೂತರಾದ ತಮ್ಮೆಲ್ಲರಿಗೂ ತುಂಬು ಹೃದಯದ ಧನ್ಯವಾದಗಳನ್ನು ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದ ಪರವಾಗಿ ಸಲ್ಲಿಸುತ್ತೇನೆ.

**ಆತ್ಮೀಯ ಸಹಕಾರಿ ಬಂಧುಗಳೇ,**

ಬ್ಯಾಂಕಿನ 42ನೇ ವಾರ್ಷಿಕ ಸರ್ವ ಸದಸ್ಯರ ಸಭೆಗೆ ತಮ್ಮೆಲ್ಲರಿಗೂ ಆಡಳಿತ ಮಂಡಳಿಯ ಪರವಾಗಿ ಹೃದಯಪೂರ್ವಕ ಸ್ವಾಗತವನ್ನು ಕೋರುತ್ತೇವೆ.

ತಮ್ಮ ಬ್ಯಾಂಕ್ ವರ್ಷದ ಪ್ರಾರಂಭದಲ್ಲಿ ಸುವರ್ಣ ಮಹೋತ್ಸವವನ್ನು ಆಚರಿಸಿಕೊಂಡಿದ್ದು, ಇದರ ಸವಿನೆನಪಿಗಾಗಿ ಬ್ಯಾಂಕಿನ ಖಾಯಂ ಸದಸ್ಯರುಗಳಿಗೆ ತಲಾ ರೂ.3000/–ಮೌಲ್ಯದ 30 ಷೇರುಗಳನ್ನು ಕೊಡುಗೆಯಾಗಿ ನಿಮ್ಮಗಳ ಷೇರು ಖಾತೆಗಳಿಗೆ ಈಗಾಗಲೇ ವರ್ಗಾಯಿಸಿದ್ದು, ಷೇರು ಫೀ ಇಲ್ಲದೆ ರೂ.2,000/–ಗಳ ಹೆಚ್ಚುವರಿ ಷೇರು ಮೊತ್ತವನ್ನು ನೀಡಲಾಗಿರುತ್ತದೆ. ಇದರ ಪ್ರಯುಕ್ತ ಬ್ಯಾಂಕಿನ ಷೇರು ಬಂಡವಾಳದಲ್ಲಿ ರೂ.3.36 ಕೋಟಿಗಳಷ್ಟು ಹೆಚ್ಚಾಗಿರುವುದು ಹರ್ಷದಾಯಕವಾಗಿರುತ್ತದೆ.

ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆಯನ್ವಯ ಬ್ಯಾಂಕಿನ ಸಹಸದಸ್ಯತ್ವವು ಸಾಮಾನ್ಯ ಸದಸ್ಯತ್ವದ ಶೇ.15.00 ಗಿಂತ ಕಡಿಮೆಯಿರಬೇಕಾಗಿದ್ದು, ಬ್ಯಾಂಕಿನ ಸಹಸದಸ್ಯರ ಮಿತಿಯು ಶೇ.15.00 ಕ್ಕಿಂತ ಹೆಚ್ಚಾಗಿದ್ದು ಕಳೆದ ನಾಲ್ಕು ವರ್ಷಗಳಿಂದ ಆಡಿಟ್ ವರದಿಯಲ್ಲಿ ನಮೂದಾಗಿದ್ದ ನ್ಯೂನತೆಯನ್ನು ಸರಿಪಡಿಸುವ ಸಲುವಾಗಿ 1519 ಸಹಸದಸ್ಯರನ್ನು ಆಡಳಿತ ಮಂಡಳಿ ಅನುಮೋದನೆಯೊಂದಿಗೆ ಸಾಮಾನ್ಯ ಸದಸ್ಯರನ್ನಾಗಿ ಮಾರ್ಪಾಡು ಮಾಡಿಕೊಳ್ಳಲಾಗಿರುತ್ತದೆ.

2019-2020 ನೇ ಸಾಲಿನಲ್ಲಿ ಸಿಬ್ಬಂದಿ ಕಾಂತರಾಜು ಮಾಡಿದ್ದ ರೂ.1.28 ಕೋಟಿಗಳ ವಂಚನೆ ಪ್ರಕರಣದಲ್ಲಿ ಬಾಕಿ ವಸೂಲಾಗಬೇಕಿದ್ದ ರೂ 88.00 ಲಕ್ಷಗಳನ್ನು ಆರೋಪಿ ಕಾಂತರಾಜು ಮತ್ತು ಸಂಬಂಧಿಕರಿಂದ ವಸೂಲು ಮಾಡಲಾಗಿರುತ್ತದೆ ಹಾಗೂ ವಿಮೆಯಿಂದ ರು.13.50 ಲಕ್ಷಗಳನ್ನು ಕ್ಲೇಮ್ ಮಾಡಲಾಗಿರುತ್ತದೆ. ಈ ಮೂಲಕ ಬ್ಯಾಂಕ್ ತಃಖ್ತೆಗಳಲ್ಲಿ ಬಾಕಿಯಿದ್ದ ರೂ.139.13 ಲಕ್ಷಗಳನ್ನು ವಸೂಲು ಮಾಡಲಾಗಿರುತ್ತದೆ.

ಬ್ಯಾಂಕಿನ ಕೇಂದ್ರ ಕಛೇರಿ ಹಾಗೂ ವಿಜಯನಗರ ಶಾಖೆಯ ಸಲುವಾಗಿ ಸುಸಜ್ಜಿತವಾದ ಕಟ್ಟಡ ನಿರ್ಮಾಣವನ್ನು ಹಿಂದಿನ ಸಾಲಿನಲ್ಲಿ ಪ್ರಾರಂಭಿಸಿದ್ದು, ಸಿವಿಲ್ ಕಾಮಗಾರಿಗಳು ಮುಕ್ತಾಯವಾದ ಹಂತದಲ್ಲಿದ್ದು, ಸೆಲ್ಲರ್, ನೆಲಮಹಡಿ, ಮೊದಲನೇ, ಎರಡನೇ ಹಾಗೂ ಟೆರೆಸ್ ಮಹಡಿಗಳನ್ನು ಹೊಂದಿದ್ದು ಸುಮಾರು 10,000 ಚ.ಅಡಿಗಳಾಗಿದ್ದು, ರೂ.331.00 ಲಕ್ಷಗಳ ಅಂದಾಜು ವೆಚ್ಚ ಮಾಡಲಾಗಿರುತ್ತದೆ. ಹಾಗೂ ಕಟ್ಟಡದಲ್ಲಿ ಒಳಾಂಗಣ ಕೆಲಸವು ಆರಂಭವಾಗಿದ್ದು, ಒಳಾಂಗಣ ಕೆಲಸದ ಅಂದಾಜು ವೆಚ್ಚವು ಸುಮಾರು ರೂ.160.00 ಲಕ್ಷಗಳಾಗಿರುತ್ತದೆ. ಅತೀ ಶೀಘ್ರದಲ್ಲಿ ಬ್ಯಾಂಕ್‌ನ ಕಟ್ಟಡವು ಪೂರ್ಣಗೊಳ್ಳಲಾಗುತ್ತಿದೆ ಎಂದು ತಿಳಿಸಲು ಹರ್ಷವಾಗುತ್ತದೆ.

ಬ್ಯಾಂಕ್ ವಿವಿಧ ರೀತಿಯ ಸಾಲ ಸೌಲಭ್ಯಗಳನ್ನು ತನ್ನ ಸದಸ್ಯರುಗಳಿಗೆ ಸ್ಪರ್ಧಾತ್ಮಕ ಬಡ್ಡಿ ದರದಲ್ಲಿ ನೀಡುತ್ತಿದ್ದು, ಮಾನ್ಯ ಸದಸ್ಯರುಗಳು ಈ ಸೌಲಭ್ಯಗಳ ಸದುಪಯೋಗ ಪಡೆದುಕೊಂಡು ಬ್ಯಾಂಕಿನ ಅಭಿವೃದ್ಧಿಗೆ ಸಹಕರಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ. ಕಡಿಮೆ ಬಡ್ಡಿದರಗಳನ್ನು ಹಾಲಿ ಸಾಲಗಾರರಿಗೆ ನೀಡುವ ಉದ್ದೇಶದಿಂದ ನಿಯಮಗಳನ್ನು ರೂಪಿಸಿಕೊಂಡು ಸುಮಾರು ರೂ.167.20 ಕೋಟಿಗಳ ಮರು ಮಂಜೂರಾತಿ ಮಾಡಲಾಗಿರುತ್ತದೆ.

ಈಗಾಗಲೇ ಮೊಬೈಲ್ ಬ್ಯಾಂಕಿಂಗ್ ಸೌಲಭ್ಯವನ್ನು ನೀಡಿದ್ದು, ಪ್ರತಿದಿನಕ್ಕೆ ರೂ.2.00 ,ಲಕ್ಷದವರೆಗೆ ವ್ಯವಹರಿಸಲು ಅವಕಾಶವಿರುತ್ತದೆ.IMPS, RTGS, NEFT ಗಳನ್ನು UPI ನ ಅಡಿಯಲ್ಲಿGoogle Pay, Phone Pay, Paytm ಹಾಗೂ ಇತರೆ ಸೌಲಭ್ಯಗಳನ್ನುಎಲ್ಲಾ ಸದಸ್ಯರು ಮತ್ತು ಗ್ರಾಹಕರು ತಮ್ಮ ಮೊಬೈಲ್‌ಗಳಲ್ಲಿ ಅಳವಡಿಸಿಕೊಂಡು ಈ ಸೇವೆಯ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಂಡುDigital Bankingಅನ್ನು ಯಶಸ್ವಿಗೊಳಿಸುವಂತೆ ಕೋರುತ್ತೇವೆ.

ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದನ್ವಯ ಬ್ಯಾಂಕ್ ಹಾಲಿ ಇರುವ ಆಡಳಿತ ಮಂಡಳಿಯ ಜೊತೆಗೆ, 5 ಸದಸ್ಯರನ್ನೊಳಗೊಂಡ ವ್ಯವಸ್ಥಾಪನಾ ಸಮಿತಿಯನ್ನು (Board of Management) ರಚಿಸಿದ್ದು, ಶ್ರೀ ಸಿದ್ದಪ್ಪ.ಜಿ ನವರು ಸಮಿತಿಯ ಚೇರ್‌ಮನ್ ಆಗಿ, ಶ್ರೀ ರಾಜಗೋಪಾಲ್ ಹೆಗ್ಡೆ ರವರು, ಶ್ರೀ ಟಿ.ಆರ್ ಸ್ವಾಮಿರವರು, ಶ್ರೀ ಆನಂದ್ ರಾಮಯ್ಯ ರಮೇಶ್‌ರವರು ಹಾಗೂ ಶ್ರೀ ಕುಲಕರ್ಣಿ ಎಸ್.ಜಿ ರವರು, ಸಮಿತಿಯ ಸದಸ್ಯರುಗಳಾಗಿ, ಆಗಸ್ಟ್ 2022ರಿಂದ ತನ್ನ ಕಾರ್ಯವನ್ನು ಆರಂಭಿಸಿದ್ದು, ಬ್ಯಾಂಕಿಗೆ ಅವಶ್ಯವಿರುವ ಅನೇಕ ಪಾಲಿಸಿಗಳನ್ನು ರಚಿಸಿದ್ದು, ಬ್ಯಾಂಕಿನ ಹಿತಾಸಕ್ತಿಗೆ ಅನುಗುಣವಾಗುವಂತಹ ಸಲಹೆ ಸೂಚನೆಗಳನ್ನು ಆಡಳಿತ ಮಂಡಳಿ ಸಭೆಗೆ ಶಿಫಾರಸ್ಸು ಮಾಡುತ್ತಿದೆ ಎಂದು ತಿಳಿಸಲು ಇಚ್ಛಿಸುತ್ತೇನೆ.

RBI ನಿರ್ದೇಶನದಂತೆ PMC ಬ್ಯಾಂಕ್ Unity Small Finance Bankಗೆ ವಿಲೀನವಾಗಿದ್ದು, ಅದರಲ್ಲಿ ಹೂಡಿಕೆ ಮಾಡಿದ್ದ ರೂ.5.00 ಕೋಟಿ ಮತ್ತು ಬಡ್ಡಿಯ ಮೊತ್ತವನ್ನು ರೂ.4.41 ಕೋಟಿ PNCPS ಹಾಗೂ ರೂ.1.10 ಕೋಟಿ Equity shareಗಳಾಗಿ ಪರಿವರ್ತನೆಗೊಂಡಿದ್ದು PNCPS ಮೊತ್ತಕ್ಕೆ 2021-22ನೇ ಸಾಲಿಗೆ ರೂ.4,41,783.00ಗಳ Dividendಅನ್ನು ನೀಡಲಾಗಿರುತ್ತದೆ. ಸದರಿ ವರ್ಷದಲ್ಲಿ ಬ್ಯಾಂಕ್ RBIನ ನಿರ್ದೇಶನದನ್ವಯ PNCPS ಮೊತ್ತದ ಮೇಲೆ ರೂ.221.00ಲಕ್ಷಗಳ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕ್‌ನ FIDD (Financial Inclusion & development Department) ನಿಂದ ಆದ್ಯತಾವಲಯ ಮತ್ತು ಅದರ ಉಪವಲಯಗಳಿಗೆ ಗುರಿಗಳ ಸಂಬಂಧ 2020-21 ಹಾಗೂ 2021-22ನೇ ಸಾಲಿಗೆ Shortfall ಲೆಕ್ಕ ಹಾಕಿದ್ದು, ಅದು ರೂ.90.52 ಕೋಟಿಗಳಾಗಿದ್ದು, ಅದರ ಶೇ.50.00 ರಷ್ಟು ರೂ.45.26 ಕೋಟಿಗಳ ಮೊತ್ತವನ್ನು ಠೇವಣಿಯಾಗಿ SIDBIನಲ್ಲಿ ಹೂಡಿಕೆ ಮಾಡಲು ಪತ್ರ ಬಂದಿದ್ದು, ಅದರನ್ವಯ SIDBI ನಲ್ಲಿ ಬ್ಯಾಂಕ್ ದರದಲ್ಲಿ ಹೂಡಿಕೆ ಮಾಡಲಾಗಿದೆ ಹಾಗೂ 2022-23ನೇ ಸಾಲಿಗೆ Weaker Section UÉ Small and Marginal former ನ ಅಡಿಯಲ್ಲಿ ರೂ.17,85,000/- ಗಳ ಕಮಿಷನ್ ಪಾವತಿ ಮಾಡಿ ರೂ.35.00 ಕೋಟಿಗಳಿಗೆ PSLC ಖರೀದಿಸಲಾಗಿದೆ.

ಬ್ಯಾಂಕ್ Non-Banking Assetನಲ್ಲಿ ರೂ.4.23 ಕೋಟಿಗಳ ಮೌಲ್ಯದ 3 ಖಾಲಿ ನಿವೇಶನಗಳನ್ನು ಹೊಂದಿದ್ದು ಅದನ್ನು ವಸೂಲಾತಿ ಮಾಡಲು ಕ್ರಮಗಳನ್ನು ಕೈಗೊಂಡಿದ್ದು ಕಾನೂನು ತೊಡಕಿನ ಕಾರಣದಿಂದ ಅದನ್ನು ವಸೂಲಾತಿ ಮಾಡಲು ಸಾಧ್ಯವಾಗಿರುವುದಿಲ್ಲ.

ಬ್ಯಾಂಕ್ ತನ್ನ ಹೆಚ್ಚುವರಿ ಹಣವನ್ನು Call Money Deopositನ್ನು ಮಾಡುವ ಸಲುವಾಗಿ CCIL ಸಂಸ್ಥೆ ಹಾಗೂRBIನ ಸಹಯೋಗದಲ್ಲಿ ನೇರವಾಗಿ ಮಾಡಲು NDS – Callನಲ್ಲಿ ನೇರ ಸದಸ್ಯತ್ವವನ್ನು ಪಡೆದಿದ್ದು, ಹೆಚ್ಚುವರಿ ಹೂಡಿಕೆಗಳ ಮೇಲೆ ರೂ.

53.32 ಲಕ್ಷಗಳ ಆದಾಯವನ್ನು ಮಾಡಿರುತ್ತೇವೆ. NDS Call ನಲ್ಲಿ ನೇರ ಸದಸ್ಯತ್ವವನ್ನು ಪಡೆದಿರುವ ಕೆಲವೇ ಪಟ್ಟಣ ಸಹಕಾರಿ ಬ್ಯಾಂಕ್‌ಗಳಲ್ಲಿ ನಮ್ಮ ಬ್ಯಾಂಕ್ ಒಂದಾಗಿರುವುದು ಹೆಮ್ಮೆಯ ವಿಷಯವಾಗಿರುತ್ತದೆ.

ಹೂಡಿಕೆ ಸಂಬಂಧ ನೇರವಾಗಿ ವ್ಯವಹಾರಗಳನ್ನು ಮಾಡಲು CCILಹಾಗೂ ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ NDS-OM ನ ಸದಸ್ಯತ್ವ ಪಡೆಯಲು ಸಹಾ RBIನ ಅನುಮೋದನೆಗೆ ಸಲ್ಲಿಸಲಾಗಿದ್ದು, April–2023 ಸದಸ್ಯತ್ವ ಪಡೆಯಲು ಯಶಸ್ವಿಯಾಗಿರುತ್ತೇವೆ. ಮುಂದಿನ ದಿನಗಳಲ್ಲಿ ಹೂಡಿಕೆಗಳನ್ನು ನೇರವಾಗಿ RBIನ ಸಹಯೋಗದಿಂದ ವ್ಯವಹರಿಸಬಹುದಾಗಿರುತ್ತದೆ. ಹಾಗೂ ಬ್ಯಾಂಕ್ FSWM (Financially Sound and Well Managed) ಬ್ಯಾಂಕ್ ಎಂದು ಮನ್ನಣೆಯನ್ನು ಪಡೆದಿದ್ದು ಹರ್ಷದಾಯಕವಾಗಿರುತ್ತದೆ.

ಹಾಲಿ ಬ್ಯಾಂಕ್ ಸ್ವತಃ DC/DR ಗಳನ್ನು ಹೊಂದಿದ್ದು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ Cyber Security Frame work ಅನ್ವಯ ಅವಶ್ಯವಿರುವ ಎಲ್ಲಾ ಭದ್ರತಾಕ್ರಮಗಳನ್ನು ಕೈಗೊಳ್ಳಲು ಕಷ್ಟಸಾಧ್ಯವಾಗಿರುವ ಕಾರಣ DC/DRನ್ನು ಹೊರಗುತ್ತಿಗೆಗೆ ನೀಡಲು ತೀರ್ಮಾನಿಸಿದ್ದು, ಅದರನ್ವಯ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಬ್ಯಾಂಕ್ 2019–20, 2020–21ನೇ ಸಾಲಿನಲ್ಲಿ ಬರಬೇಕಾಗಿದ್ದ ಆದಾಯ ತೆರಿಗೆ Refund ಮೊತ್ತ ರೂ.375.72ಲಕ್ಷಗಳಲ್ಲಿ ರೂ.326.85ಲಕ್ಷಗಳ Refund ಗಳನ್ನು ಪಡೆದಿರುತ್ತೇವೆ. ಬ್ಯಾಂಕ್ 2022–23ನೇ ಸಾಲಿಗೆ Deferred tax ಬಗ್ಗೆ ಲೆಕ್ಕ ಮಾಡಿದ್ದು ರೂ.65.29ಲಕ್ಷಗಳಾಗಿದ್ದು ಅದನ್ನು ಆದಾಯಕ್ಕೆ ಸೇರಿಸಲಾಗಿರುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕ್ ಕಾಲ ಕಾಲಕ್ಕೆ ಹೊರಡಿಸುತ್ತಿರುವ ಮಾರ್ಗದರ್ಶನಗಳನ್ನು ಚಾಚು ತಪ್ಪದೇ ಬ್ಯಾಂಕಿನ ಆಡಳಿತದಲ್ಲಿ ಅಳವಡಿಸಿಕೊಂಡು ಅದರನ್ವಯ ಕಾರ್ಯ ಪ್ರವೃತ್ತವಾಗಿರುತ್ತದೆ.

ಹಾಲಿ ಬ್ಯಾಂಕಿನ ಬಡ್ಡಿದರಗಳು ರಾಷ್ಟ್ರೀಕೃತ ಬ್ಯಾಂಕ್, ಸಾರ್ವಜನಿಕ ವಲಯದ ಬ್ಯಾಂಕ್‌ಗಳಿಗೆ ಸಮಾನವಾಗಿರುವುದರಿಂದ ಆದ್ಯತಾವಲಯಗಳ ಸಾಲಗಳಿಗೆ ರಿಯಾಯಿತಿ ಬಡ್ಡಿದರದಲ್ಲಿ ಸಾಲಗಳನ್ನು ನೀಡುತ್ತಿರುವುದರಿಂದ ಹೆಚ್ಚಿನ ಸದಸ್ಯರುಗಳು ಇದರ ಸದುಪಯೋಗ ಪಡೆದುಕೊಂಡು ಬ್ಯಾಂಕಿನ ಅಭಿವೃದ್ದಿಗೆ ಹಾಗೂ ಆದ್ಯತಾ ವಲಯದ ಸಾಲಗಳ ಗುರಿಗಳನ್ನು ಸಾಧಿಸಲು ಸಹಕರಿಸಬೇಕೆಂದು ಕೋರಿಕೊಳ್ಳುತ್ತೇನೆ. ಹಾಗೂ ಬ್ಯಾಂಕಿನಲ್ಲಿ ಠೇವಣಿಗಳ ಮೇಲೆ ಆಕರ್ಷಿತ ಬಡ್ಡಿದರಗಳನ್ನು ನೀಡುತ್ತಿದ್ದು, ಎಲ್ಲ ಸದಸ್ಯರುಗಳು ತಮ್ಮ ಮತ್ತು ತಮ್ಮ ಪರಿಚಯಸ್ಥರ ಠೇವಣಿಗಳನ್ನು ಮಾಡಲು ತಿಳಿಸುತ್ತಾ ಬ್ಯಾಂಕಿನ ಸಮಗ್ರ ಅಭಿವೃದ್ಧಿಗೆ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**<u>2022–23ನೇ ಸಾಲಿನ ಆರ್ಥಿಕ ಪ್ರಗತಿ:</u>**

ಬ್ಯಾಂಕ್ 2021–22ನೇ ಸಾಲಿಗೆ ರೂ.124.41 ಕೋಟಿ ಆದಾಯ ಗಳಿಸಿದ್ದು, ಇದಕ್ಕೆ ಹೋಲಿಸಿದಾಗ ಪ್ರಸಕ್ತ ಸಾಲಿನಲ್ಲಿ ಬ್ಯಾಂಕ್ ಒಟ್ಟು ರೂ.114.34ಕೋಟಿ ಆದಾಯ ಗಳಿಸಿದ್ದು, ಒಟ್ಟು ರೂ.10.07ಕೋಟಿಗಳು ಕಡಿಮೆಯಾಗಿದ್ದು, ಇದರ ಪ್ರಮಾಣ ಶೇ.7.09% ಕಡಿಮೆಯಾಗಿರುತ್ತದೆ, ಸಾಲಗಳ ಮೇಲೆ ಬಡ್ಡಿದರಗಳನ್ನು ಗಣನೀಯವಾಗಿ ಕಡಿಮೆ ಮಾಡಿರುವ ಕಾರಣ ಹಾಗೂ ಸಾಲಗಳನ್ನು ವಿತರಿಸಲು ಹೂಡಿಕೆಗಳನ್ನು ಮಾರಾಟ ಮಾಡಿದರ ಕಾರಣ ಒಟ್ಟು ಆದಾಯ ಕಡಿಮೆಯಾಗಿರುತ್ತದೆ.

2021–22ನೇ ಸಾಲಿಗೆ ಬ್ಯಾಂಕಿನ ನಿವ್ವಳ ಲಾಭ ರೂ.14.67 ಕೋಟಿ ಇದ್ದು ಇದಕ್ಕೆ ಹೋಲಿಸಿದಾಗ ಪ್ರಸಕ್ತ ಸಾಲಿನಲ್ಲಿ ಬ್ಯಾಂಕ್ ಒಟ್ಟು ರೂ.11.24 ಕೋಟಿ ಲಾಭ ಗಳಿಸಿದ್ದು, ಒಟ್ಟು ರೂ.3.43ಕೋಟಿ ಇಳಿಕೆಯಾಗಿದ್ದು ಇದರ ಪ್ರಮಾಣ ಶೇ 23.38% ಗಳಾಗಿರುತ್ತದೆ. ಹಾಗೂ ಬ್ಯಾಂಕ್ ಅನುತ್ಪಾದಕ ಆಸ್ತಿಯ ಪ್ರಮಾಣವನ್ನು ಕಡಿಮೆಗೊಳಿಸಲು ಸಾಲ ವಸೂಲಾತಿಯಲ್ಲಿ ಕಠಿಣ ಕ್ರಮಗಳನ್ನು ಅನುಸರಿಸಿ ಹಾಗೂ ಕಾನೂನು ಕ್ರಮಗಳನ್ನು ಕೈಗೊಂಡಿದ್ದು ಸಾಲಗಾರರೂ ಸಹ ಸಹಕರಿಸಿ ಸಾಲಗಳನ್ನು ಮರುಪಾವತಿ ಮಾಡಿರುತ್ತಾರೆ.ಕಳೆದ ಸಾಲಿನಲ್ಲಿ ಒಟ್ಟು ಅನುತ್ಪಾದಕ ಆಸ್ತಿಯ ಪ್ರಮಾಣ ಶೇ.14.03 ಇದ್ದು ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣ ಶೇ 0.00. ಆಗಿರುತ್ತದೆ. ವರದಿ ಸಾಲಿನ ಅಂತ್ಯಕ್ಕೆ ಒಟ್ಟು ಅನುತ್ಪಾದಕ ಆಸ್ತಿಯ ಪ್ರಮಾಣ ಶೇ.7.03 ಇದ್ದು, ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣ ಶೇ.0.00 ಆಗಿದ್ದು ಬ್ಯಾಂಕ್ ಸದೃಢವಾಗಿರುವುದನ್ನು ಬಿಂಬಿಸುತ್ತದೆ. ವರದಿ ಸಾಲಿನಲ್ಲಿ ಸಾಲ ವಸೂಲಾತಿ ತಂಡವನ್ನು ಇಲ್ಲದೇ ಬ್ಯಾಂಕಿನ ಶಾಖಾವಾರು ಸಿಬ್ಬಂದಿಗಳೇ ಸಾಲವಸೂಲಾತಿಯನ್ನು ಮಾಡಿದ್ದು ಗಮನಾರ್ಹ ಸಂಗತಿಯಾಗಿರುತ್ತದೆ.

ಬ್ಯಾಂಕ್‌ನ ಸಾಲಗಾರರಾದ ವೆಂಕಟೇಶ್ವರ ಎಸ್ ಸಾಲದ ಖಾತೆಗೆ ಸಂಬಂಧಿಸಿದಂತೆ ಬ್ಯಾಂಕ್ FIR ದಾಖಲು ಮಾಡಿದ್ದು ಆರೋಪಿಗಳಿಂದ ಸಾಲ ವಸೂಲಾತಿಗಾಗಿ ಚೆಕ್‌ಬೌನ್ಸ್ ಪ್ರಕರಣವನ್ನು ದಾಖಲು ಮಾಡಲಾಗಿದ್ದು ದಾವಾ ನಡೆಯುತ್ತಿರುತ್ತದೆ.

ಬ್ಯಾಂಕಿನ 42ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಗೆ ಮತ್ತೊಮ್ಮೆ ತಮ್ಮೆಲ್ಲರನ್ನು ಸ್ವಾಗತಿಸುತ್ತಾ 2023ನೇ ಮಾರ್ಚ್ 31ಕ್ಕೆ (ದಿನಾಂಕ 01–04–2022 ರಿಂದ 31–03–2023 ರವರೆಗೆ) ಆಖೈರಾದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಪ್ರಕಾರ ಲೆಕ್ಕ ಪರಿಶೋಧಕರಿಂದ ಲೆಕ್ಕಪರಿಶೋಧನೆ ನಡೆಸಿ ನೀಡಲ್ಪಟ್ಟಿರುವ ಲಾಭ–ನಷ್ಟ, ಆಸ್ತಿಜವಾಬ್ದಾರಿ ತ:ಖ್ತೆಗಳು ಲೆಕ್ಕಪರಿಶೋಧನಾ ವರದಿ ಹಾಗೂ ಬ್ಯಾಂಕ್‌ನ ಕಾರ್ಯಚಟುವಟಿಕೆಗಳ ಜೊತೆಗೆ ಆರ್ಥಿಕ ಅಭಿವೃದ್ಧಿಯ, ಪ್ರಗತಿಯ ಪಕ್ಷಿನೋಟವನ್ನು ಆಡಳಿತ ಮಂಡಳಿಯ

ವರದಿ ಸಮೇತ ಈ ಮಹಾಸಭೆಯ ಮುಂದೆ ತಮ್ಮಗಳ ಒಪ್ಪಿಗೆಗಾಗಿ ಮಂಡಿಸುತ್ತಿದ್ದೇವೆ.

ರೂ.ಕೋಟಿಗಳಲ್ಲಿ

## 2022–23ನೇ ಸಾಲಿನ ಅಂತ್ಯಕ್ಕೆ ಶಾಖಾವಾರು ಆರ್ಥಿಕ ಸ್ಥಿತಿಯ ವಿವರಗಳು

| ಶಾಖೆ | ಠೇವಣಿಗಳು | ಸಾಲ ಮತ್ತು ಮುಂಗಡಗಳು | ಲಾಭ | ಒಟ್ಟು ಎನ್‌ಪಿಎ | ನಿವ್ವಳ ಎನ್‌ಪಿಎ |
|---|---|---|---|---|---|
| ವಿಜಯನಗರ | 559.95 | 293.54 | 7.18 | 38.15 | 0.00 |
| ಮಹಾಲಕ್ಷ್ಮೀಪುರ | 288.87 | 186.58 | 5.49 | 2.34 | 0.00 |
| ಮೂಡಲಪಾಳ್ಯ | 142.37 | 52.09 | 0.59 | 0.23 | 0.00 |
| ರಾಜರಾಜೇಶ್ವರಿನಗರ | 119.91 | 34.89 | 0.20 | 1.12 | 0.00 |
| ಸುಂಕದ ಕಟ್ಟೆ | 33.06 | 28.32 | 0.96 | 0.00 | 0.00 |
| **ಒಟ್ಟು** | **1144.16** | **595.42** | **14.42** | **41.84** | **0.00** |

**ಸದಸ್ಯತ್ವ ಮತ್ತು ಷೇರು ಬಂಡವಾಳ :**–ಬ್ಯಾಂಕಿನ ಷೇರು ಬಂಡವಾಳವು ದಿನಾಂಕ: 31–03–2023ಕ್ಕೆ ರೂ. 31.43ಕೋಟಿ ಇದ್ದು **ಒಟ್ಟು ಸದಸ್ಯರ ಸಂಖ್ಯೆ 13447 ಇದ್ದು, ಇದರಲ್ಲಿ ಖಾಯಂ ಸದಸ್ಯರ ಸಂಖ್ಯೆ 12147 ಹಾಗೂ ಸಹಸದಸ್ಯರ ಸಂಖ್ಯೆ 1300 ಇರುತ್ತದೆ.**

**ಆಪದ್ಧನ ಮತ್ತು ಇತರೆ ನಿಧಿಗಳು ಹಾಗೂ ಅವಕಾಶಗಳು :** ದಿನಾಂಕ 31–03–2023ಕ್ಕೆ ಬ್ಯಾಂಕಿನ ಆಪದ್ಧನ ಮತ್ತು ಇತರೆ ನಿಧಿಗಳಲ್ಲಿ 116.49 ಕೋಟಿ, ಅವಕಾಶಗಳಲ್ಲಿ ರೂ.74.37 ಕೋಟಿ, ಒಟ್ಟು ರೂ.190.86 ಕೋಟಿ ಗಳಿದ್ದು ಈ ಅಂಕಿ ಅಂಶವು ಬ್ಯಾಂಕ್ ಸದೃಢವಾಗಿದೆ ಎಂಬುದನ್ನು ಬಿಂಬಿಸುತ್ತದೆ.

**ಠೇವಣಾತಿಗಳು:**–ಬ್ಯಾಂಕಿನ ಎಲ್ಲಾ ಠೇವಣಾತಿಗಳು ದಿನಾಂಕ 31–03–2022ಕ್ಕೆ ರೂ.1203.54 ಕೋಟಿಗಳಿದ್ದು ಇದಕ್ಕೆ ಹೋಲಿಸಿದಾಗ ದಿನಾಂಕ 31–03–2023ಕ್ಕೆ ರೂ.1144.15 ಕೋಟಿ ಇದ್ದು, ರೂ. 59.39 ಕೋಟಿಗಳಷ್ಟು ಕಡಿಮೆಯಾಗಿದ್ದು ಇದರ ಪ್ರಮಾಣ ಶೇಕಡಾವಾರು 9.5 ರಷ್ಟು ಕಡಿಮೆಯಾಗಿರುತ್ತದೆ. ಇದು ಠೇವಣಿಗಳ ಮೇಲಿನ ಬಡ್ಡಿದರಗಳು ಕಡಿಮೆ ಮಾಡಿದರ ಕಾರಣವಾಗಿರುತ್ತದೆ.

ಬ್ಯಾಂಕಿನಲ್ಲಿ ಒಟ್ಟು ರೂ.186.31ಕೋಟಿ ಉಳಿತಾಯ ಮತ್ತು ಚಾಲ್ತೀ ಖಾತೆ (CASA Deposit) ಠೇವಣಿಗಳನ್ನು ಹೊಂದಿದ್ದು,ಒಟ್ಟು ಠೇವಣಿ ರೂ.1144.15 ಗಳಿಗೆ ಹೋಲಿಸಿದಾಗ ಇದರ ಪ್ರಮಾಣವು ಶೇ.16.28 ಆಗಿರುತ್ತದೆ.

**ದುಡಿಯುವ ಬಂಡವಾಳ :** ಬ್ಯಾಂಕಿನ ದುಡಿಯುವ ಬಂಡವಾಳ 2021–22ನೇ ಸಾಲಿಗೆ ರೂ.1447.37 ಕೋಟಿಗೆ ಹೋಲಿಸಿದಾಗ ದಿನಾಂಕ 31–03–2023ಕ್ಕೆ ರೂ.1398.81 ಕೋಟಿಗಳಾಗಿದ್ದುರೂ.48.56 ಕೋಟಿ ಇಳಿಕೆಯಾಗಿರುವುದರ ಪ್ರಮಾಣ ಶೇ3.36%ರಷ್ಟು ಇಳಿಕೆಯಾಗಿರುತ್ತದೆ.

**ಸಾಲಗಳು ಮತ್ತು ಮುಂಗಡಗಳು :** ದಿನಾಂಕ 31–03–2022ಕ್ಕೆ ಒಟ್ಟು ರೂ.512.87 ಕೋಟಿ ಸಾಲ ನೀಡಿದ್ದು ಇದಕ್ಕೆ ಹೋಲಿಸಿದಾಗ ದಿನಾಂಕ 31–03–2023ಕ್ಕೆ ರೂ.595.41ಕೋಟಿಗಳಿದ್ದುರೂ.82.54 ಕೋಟಿಗಳಷ್ಟು ಸಾಲ ಜಾಸ್ತಿಯಾಗಿರುತ್ತದೆ. ಇದರ ಶೇಕಡಾವಾರು 16.09 ರಷ್ಟು ಜಾಸ್ತಿಯಾಗಿರುತ್ತದೆ. ಬ್ಯಾಂಕ್ ಸಾಲಗಳ ಬಡ್ಡಿದರಗಳನ್ನು ಗಣನೀಯವಾಗಿ ಕಡಿಮೆ ಮಾಡಿದರ ಪ್ರಯುಕ್ತ ಸಾಲದ ಪ್ರಮಾಣ ಹೆಚ್ಚಾಗಿರುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯನ್ವಯ ಹಿಂದಿನ ಹಣಕಾಸು ವರ್ಷಾಂತ್ಯಕ್ಕೆ ಇರುವ ಸಾಲದ ಬಾಕಿಯ ಶೇ.60%ರಷ್ಟು ಸಾಲವನ್ನು ಆದ್ಯತಾವಲಯಕ್ಕೆ ನೀಡಬೇಕಿದ್ದು, ವರದಿ ಸಾಲಿನಲ್ಲಿ ಬ್ಯಾಂಕ್ ಶೇ. 61.32 ರಷ್ಟು ಆದ್ಯತಾ ವಲಯಕ್ಕೆ, ಶೇ. 13.52ರಷ್ಟು ದುರ್ಬಲ ವರ್ಗ ಮತ್ತು ಮಹಿಳಾ ವರ್ಗಕ್ಕೆ ನೀಡಲಾಗಿದೆ.

**ಸುಸ್ತಿ ಸಾಲಗಳು :** ದಿನಾಂಕ 31–03–2023ಕ್ಕೆ ಸುಸ್ತಿ ಸಾಲಗಾರ ಸದಸ್ಯರುಗಳಿಂದ ಬ್ಯಾಂಕಿಗೆ ಬರಬೇಕಾದ ಎಲ್ಲಾ ಬಗೆಯ ಸುಸ್ತಿ ಸಾಲಗಳ ಮೊತ್ತ ರೂ.85.98ಕೋಟಿಗಳಿದ್ದು, ಅನುತ್ಪಾದಕ ಸಾಲದ ಮೊತ್ತ ರೂ.41.84 ಕೋಟಿ ಇದು ಒಟ್ಟು ಸಾಲದ ಶೇ. 7.03 ರಷ್ಟಿರುತ್ತದೆ. ಹಾಗೂ ನಿವ್ವಳ ಎನ್.ಪಿ.ಎ ಶೇಕಡ 0.00ಗಳಾಗಿರುತ್ತದೆ.

**ಹೂಡಿಕೆಗಳು :** ದಿನಾಂಕ 31–03–2023ಕ್ಕೆ ಬ್ಯಾಂಕ್ ಸರ್ಕಾರಿ ಭದ್ರತಾ ಪತ್ರಗಳಲ್ಲಿ ರೂ. 583.84 ಕೋಟಿಗಳನ್ನು, ಷೇರುಗಳಲ್ಲಿ ರೂ.5.52ಕೋಟಿಗಳ ಹಾಗೂ ಇತರೆ ಬ್ಯಾಂಕುಗಳಲ್ಲಿ ರೂ.101.84 ಕೋಟಿ ಠೇವಣಿ ಮಾಡಲಾಗಿದ್ದು, ಒಟ್ಟು ರೂ.691.19 ಕೋಟಿ ಹೂಡಿಕೆ ಮಾಡಲಾಗಿದೆ. ಈ ಹೂಡಿಕೆಗಳಿಂದ 2022–23ನೇ ಸಾಲಿಗೆ ಬಡ್ಡಿಯಿಂದ ರೂ.52.20 ಕೋಟಿಗಳಷ್ಟು ಆದಾಯ ಬಂದಿರುತ್ತದೆ. ಹೂಡಿಕೆಗಳ ಮಾರಾಟದಿಂದ ಮಾರುಕಟ್ಟೆ ಮೌಲ್ಯದ ಏರಿಳಿತದ ಪರಿಣಾಮ ರೂ.3.88 ಕೋಟಿಗಳಷ್ಟು ನಿವ್ವಳ ನಷ್ಟವು ಉಂಟಾಗಿರುತ್ತದೆ.

ಬ್ಯಾಂಕ್ 2022–23ನೇ ಸಾಲಿಗೆ ನಗದು ಮೀಸಲು (CRR) ಮತ್ತು ಶಾಸನಬದ್ಧ (SLR)ಮೀಸಲುಗಳನ್ನು ಭಾರತೀಯ

ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ ನಿರ್ವಹಣೆ ಮಾಡಲಾಗಿರುತ್ತದೆ. ಯಾವುದೇ ರೀತಿಯ Default ಆಗಿರುವುದಿಲ್ಲ.

**ನಿವ್ವಳಲಾಭ :** ಬ್ಯಾಂಕ್ 2021-22ನೇ ಸಾಲಿನಲ್ಲಿ ಒಟ್ಟು ರೂ.20.06 ಕೋಟಿ ಲಾಭಗಳಿಸಿದ್ದು ಆದಾಯ ತೆರಿಗೆ ರೂ.5.38 ಕೋಟಿ ಪಾವತಿಸಿದ ನಂತರ ನಿವ್ವಳ ಲಾಭ ರೂ. 14.67 ಕೋಟಿಗಳಾಗಿದ್ದು ವರದಿ ಸಾಲಿನಲ್ಲಿಒಟ್ಟು ರೂ.14.42 ಕೋಟಿ ಲಾಭ ಗಳಿಸಿದ್ದು, ಆದಾಯ ತೆರಿಗೆ ರೂ.3.82 ಪಾವತಿಸಿದ ನಂತರ ನಿವ್ವಳ ಲಾಭ ರೂ.11.24 ಕೋಟಿಗಳಾಗಿದ್ದು, 2021-22ನೇ ಸಾಲಿಗೆ ಹೋಲಿಸಿದಾಗ ರೂ. 3.43ಕೋಟಿ ಕಡಿಮೆಯಾಗಿದ್ದು, ಇದರ ಶೇಕಡವಾರು 23.38 ರಷ್ಟು ಕಡಿಮೆಯಾಗಿರುತ್ತದೆ.

**ಠೇವಣಿ ವಿಮಾ ಯೋಜನೆ :** ಬ್ಯಾಂಕಿನ ಗ್ರಾಹಕರುಗಳ/ಸದಸ್ಯರುಗಳ ಠೇವಣಿಗಳ ಭದ್ರತೆಯ ದೃಷ್ಟಿಯಿಂದ ರೂ.5.00ಲಕ್ಷದವರೆಗಿನ ಎಲ್ಲಾ ಠೇವಣಿಗಳಿಗೆ DICGCರವರ ವಿಮಾ ಯೋಜನೆಯಡಿಯಲ್ಲಿ ವರದಿ ಸಾಲಿಗೆ ರೂ.1.44ಕೋಟಿ ವಿಮೆ ಪಾವತಿಸಲಾಗಿದೆ.

ಬ್ಯಾಂಕಿನ ಕಟ್ಟಡ, ನಗದು ಮತ್ತು ಚಿನ್ನಾಭರಣಗಳ ಮೇಲೆ United India Insurance Company ವಿಮಾ ಕಂಪನಿಗೆ ರೂ.3.77ಲಕ್ಷ ಪ್ರೀಮಿಯಂ ಪಾವತಿಸಲಾಗಿದೆ.

**ಆಡಿಟ್(ಲೆಕ್ಕ ಪರಿಶೋಧನೆ) :-**2023ನೇ ಮಾರ್ಚ್ 31ಕ್ಕೆ ಆಖೈರಾದ (ದಿನಾಂಕ 01-04-2022 ರಿಂದ 31-03-2023ರವರೆಗೆ) ಲೆಕ್ಕಪತ್ರಗಳನ್ನು ಹಾಗೂ ಇನ್ನಿತರ ಆರ್ಥಿಕ ತ:ಖ್ತೆಗಳನ್ನು ಮೆ. ಬಾಬು ಅಂಡ್ ಬಡತ್ ಚಾರ್ಟರ್ಡ್ ಅಕೌಂಟೆಂಟ್ಸ್‌ರವರು ಲೆಕ್ಕಪರಿಶೋಧನೆಯನ್ನು ಮಾಡಿದ್ದು ಲೆಕ್ಕಪರಿಶೋಧಕರ ದೃಢೀಕರಣ ಪತ್ರವನ್ನು (ಪ್ರಮಾಣ ಪತ್ರ) ನೀಡಿರುತ್ತಾರೆ.ಆಡಿಟ್ ವರ್ಗೀಕರಣದನ್ವಯ ಬ್ಯಾಂಕ್‌ಗೆ "ಎ"ಶ್ರೇಣಿಯನ್ನು ನೀಡಿರುತ್ತಾರೆ ಎಂದು ತಿಳಿಸಲು ಹರ್ಷಿಸುತ್ತೇನೆ.ಹಾಗೂ 2022-23ನೇ ಸಾಲಿಗೆ ಸಮವರ್ತಿ ಲೆಕ್ಕಪರಿಶೋಧಕರಾಗಿ RHG Associates ರವರು ಆಡಿಟ್ ಮಾಡಿ ವರದಿಯನ್ನು ನೀಡಿರುತ್ತಾರೆ.

**DEAFಖಾತೆ (Depositor Education and Awareness fund) :-**ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ, ಯಾವುದೇ ಖಾತೆಯಲ್ಲಿ 10 ವರ್ಷ ಸತತವಾಗಿ ವ್ಯವಹಾರ ಇಲ್ಲದೇ ಇದ್ದಲ್ಲಿ ಈ ಠೇವಣಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ **DEAF** ಖಾತೆಗೆ ವರ್ಗಾಯಿಸಲಾಗುವುದು. ದಿನಾಂಕ 31-03-2023ಕ್ಕೆ ಈ ಖಾತೆಯಲ್ಲಿ ರೂ. 2.40ಕೋಟಿ (9905ಖಾತೆಗಳು) ಇರುತ್ತದೆ. ಆದ್ದರಿಂದ ಗ್ರಾಹಕರು ಸಾಧ್ಯವಾದಷ್ಟು ತಮ್ಮ ಖಾತೆಯಲ್ಲಿ ವ್ಯವಹರಿಸಿ ಖಾತೆಯನ್ನು ಚಾಲ್ತಿಯಲ್ಲಿರುವಂತೆ ನೋಡಿಕೊಳ್ಳುವುದು ಉತ್ತಮ.

**CRAR:-** ಬ್ಯಾಂಕಿನ Capital Risk Asset ratio 2021-22ನೇ ಸಾಲಿಗೆ ಶೇ.24.10 ರಷ್ಟಿದ್ದು ಅದು 2022-23ನೇ ಸಾಲಿಗೆ ಶೇ.23.78 ರಷ್ಟಿರುತ್ತದೆ.

**ಸಭೆಗಳು :-**ಬ್ಯಾಂಕ್ ಸಾಲದ ಉಪಸಮಿತಿ, ಹೂಡಿಕೆ ಮತ್ತು ಸಾಲ ವಸೂಲಾತಿ ಉಪಸಮಿತಿ, ಆಡಿಟ್ ಉಪಸಮಿತಿ, ಆಡಳಿತ ಉಪಸಮಿತಿಗಳನ್ನು ಹೊಂದಿದ್ದು, ಈ ಸಮಿತಿಯ ಸದಸ್ಯರು ಕಾಲಕಾಲಕ್ಕೆ ಸಭೆ ಸೇರಿ ಸಮಿತಿಗಳ ಉದ್ದೇಶಕ್ಕನುಸಾರವಾಗಿ ವಿಷಯಗಳನ್ನು ಚರ್ಚಿಸಿ ಬ್ಯಾಂಕಿನ ಅಭಿವೃದ್ಧಿಗೆ ಸಹಕರಿಸುತ್ತಿದ್ದಾರೆ. ಈ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ.

**ಮರಣೋತ್ತರ ಪರಿಹಾರ ಹಾಗೂ ವೈದ್ಯಕೀಯ ಪರಿಹಾರ :-** ಬ್ಯಾಂಕಿನ ಸದಸ್ಯರು ಮರಣ ಹೊಂದಿದಲ್ಲಿ ಮರಣ ಪರಿಹಾರಗಳನ್ನಾಗಿ ರೂ.15,000/-ಗಳನ್ನು ನೀಡಲಾಗುತ್ತಿದ್ದು, ಸದಸ್ಯರು ಮರಣಹೊಂದಿದ ಒಂದು ವರ್ಷದೊಳಗೆ ವಾರಸುದಾರರು ಮರಣೋತ್ತರ ಪರಿಹಾರದ ಅರ್ಜಿಯನ್ನು ಸಲ್ಲಿಸಬೇಕು. ತಪ್ಪಿದಲ್ಲಿ ಪರಿಹಾರದ ಮೊತ್ತವನ್ನು ನೀಡಲಾಗುವುದಿಲ್ಲ. ಹಾಗೂ ನಮ್ಮ ಬ್ಯಾಂಕಿನ ಸದಸ್ಯರ ಕಷ್ಟದಲ್ಲೂ/ನೋವಿನಲ್ಲೂ ಭಾಗಿಯಾಗುವ ಸದುದ್ದೇಶದಿಂದ ಈ ಕೆಳಗೆ ತಿಳಿಸಿರುವ ಕಾಯಿಲೆಗಳಿಗೆ ವೈದ್ಯಕೀಯ ವೆಚ್ಚ ಭರಿಸಲು ನೆರವಾಗುವಂತೆ ಸದಸ್ಯತ್ವದ ಅವಧಿಯಲ್ಲಿ ಒಂದು ಬಾರಿ ಅನ್ವಯವಾಗುವಂತೆ ರೂ.70,000/-ಗಳ ಸಹಾಯಧನವನ್ನು ಬ್ಯಾಂಕಿನ ನಿಬಂಧನೆಗಳಿಗೊಳಪಟ್ಟು ನೀಡಲಾಗುತ್ತಿದೆ.

ಎ) ಹೃದಯ ಸಂಬಂಧಿ ಕಾಯಿಲೆಗೆ – ಆಂಜಿಯೋಪ್ಲಾಸ್ಟ್, ಬೈಪಾಸ್

ಬಿ) ಕಿಡ್ನಿ ಸಂಬಂಧಿ ಕಾಯಿಲೆಗೆ – ಕಿಡ್ನಿ ಕಸಿ ಸಂಬಂಧ

ಸಿ) ಕ್ಯಾನ್ಸರ್

ಡಿ) ಮಂಡಿ ಚಿಪ್ ಶಸ್ತ್ರ ಚಿಕಿತ್ಸೆ

**ಸಿಬ್ಬಂದಿಗಳ ವಿವರ ಹಾಗೂ ಸಿಬ್ಬಂದಿಯವರಿಗೆ ನೀಡಲಾಗಿರುವ ತರಬೇತಿ ಸೌಲಭ್ಯಗಳು : 2022-23ನೇ ಸಾಲಿನ** ಅಂತ್ಯಕ್ಕೆ ಬ್ಯಾಂಕಿನಲ್ಲಿ ಒಟ್ಟು 55 ಜನ ಸಿಬ್ಬಂದಿಗಳು ಖಾಯಂ ನೌಕರರಾಗಿ ಕೆಲಸ ನಿರ್ವಹಿಸುತ್ತಿದ್ದು, **2022-23ನೇ ಸಾಲಿಗೆ** ಸಿಬ್ಬಂದಿ ವೆಚ್ಚವು ರೂ.6.43ಕೋಟಿ ಇದ್ದು, ಇದು ಬ್ಯಾಂಕಿನ ದುಡಿಯುವ ಬಂಡವಾಳ ರೂ.1398.81 ಕೋಟಿಗೆ, ಶೇ.0.45 ಇರುತ್ತದೆ. ಇದು ಸರ್ಕಾರ ನಿಗದಿತ ಶೇ.2 ರ ಮಿತಿಯಲ್ಲಿರುತ್ತದೆ. ಹಾಗೂ ಬ್ಯಾಂಕಿನ ವ್ಯವಹಾರಗಳನ್ನು ಅತ್ಯಂತ ದಕ್ಷತೆಯಿಂದ ನಿರ್ವಹಿಸಲು

ಭಾರತೀಯ ರಿಸರ್ವ್ ಬ್ಯಾಂಕ್, ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದವರು ವ್ಯವಸ್ಥೆಗೊಳಿಸುವ ತರಬೇತಿ ಕಾರ್ಯಕ್ರಮ ಹಾಗೂ ಬ್ಯಾಂಕಿನಲ್ಲಿಯೇ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿರುತ್ತದೆ. ಹಾಗೂ ವರದಿ ಸಾಲಿನಲ್ಲಿ 3 ಜನ ಅಟ್ಟೆಂಡರ್/ವಾಹನ ಚಾಲಕರನ್ನು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.

ಬ್ಯಾಂಕಿನ ಸಿಬ್ಬಂದಿಗಳಿಗೆ ನೀಡಬೇಕಾಗಿರುವ ಪದೋನ್ನತಿ ಹಾಗೂ ಕಾಲಮಿತಿ ಪದೋನ್ನತಿಗಳನ್ನು ಕಾಲಕಾಲಕ್ಕೆ ನೀಡುತ್ತಿದ್ದು, Gratuity and Leave Encashment ಸಂಬಂಧ ಕಲ್ಪಿಸಬೇಕಾದ ಅವಕಾಶಗಳಲ್ಲಿ ಸ್ವಲ್ಪ ಮಟ್ಟದ ಮೊತ್ತವನ್ನು ಕಲ್ಪಿಸಿದ್ದು, ಭಾರತೀಯ ವಿಮಾ ನಿಗಮನಲ್ಲಿ ಹೂಡಿಕೆ ಮಾಡಲಾಗಿರುತ್ತದೆ.

**ಬ್ಯಾಂಕ್ 2023–24ನೇ ಸಾಲಿನಲ್ಲಿ ಸಾಧಿಸಬೇಕೆಂದಿರುವ ಗುರಿ:–**

1. ಬ್ಯಾಂಕ್ ಹೊಂದಿರುವ ಕೆಲವು ಹಳೆಯಅನುತ್ಪಾದಕ ಆಸ್ತಿಗಳನ್ನು ವಸೂಲು ಮಾಡುವುದು ಹಾಗೂ ಬ್ಯಾಂಕಿನಲ್ಲಿ ಬಾಕಿಯಿರುವ Non-Banking Asset ನಲ್ಲಿರುವ ಮೊತ್ತವನ್ನು ವಸೂಲು ಮಾಡುವುದು.
2. ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ ಆದ್ಯತಾ ವಲಯಗಳಿಗೆ ಸಾಲಗಳನ್ನು ನೀಡಿಸಮಾಜದ ಅಭಿವೃದ್ಧಿಗೆ ಸಹಕರಿಸುವುದು.
3. ಬ್ಯಾಂಕಿನ ಠೇವಣಿ ಸಂಗ್ರಹಣೆ ಮತ್ತು ಸಾಲಗಳ ವಿತರಣೆ ಹೆಚ್ಚಾಗುವಂತೆ ಕ್ರಮಕೈಗೊಳ್ಳುವುದು.
4. ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಗಳಲ್ಲಿ ಶಾಖೆಗಳನ್ನು ಹೊಂದುವುದು.
5. ಬ್ಯಾಂಕಿನ ಸುಂಕದಕಟ್ಟೆ ಶಾಖೆಗೆ ಸ್ವಂತ ಕಟ್ಟಡ ಹೊಂದುವುದು. ಅಥವಾ ಹಾಲಿ ಇರುವ ಶಾಖಾ ಕಟ್ಟಡವನ್ನು ಇತರೆ ಕಡೆಗೆ ಸ್ಥಳಾಂತರಿಸುವುದು.
6. ರೂ.18.00 ಕೋಟಿಗಳ ಲಾಭಗಳಿಸುವುದು.
7. Digital Payment ಗಳ ಉಪಯೋಗವನ್ನು ಹೆಚ್ಚು ಜನರಿಗೆ ನೀಡುವುದು.
8. NDS-OM ನ ಸದಸ್ಯತ್ವದೊಂದಿಗೆ ಹೂಡಿಕೆಗಳ ಮಾರಾಟದಿಂದ ಲಾಭವನ್ನು ಮಾಡುವುದು.
9. RBI ನಿರ್ದೇಶನದನ್ವಯ CKYC ಗೆ ಗ್ರಾಹಕರ ಮಾಹಿತಿಗಳನ್ನು ಹಂಚಿಕೊಳ್ಳುವುದು.
10. KYC ದಾಖಲೆಗಳು ಇಲ್ಲದ ಚಾಲ್ತಿಯಲ್ಲಿರುವ ಉಳಿತಾಯ ಖಾತೆಗಳಿಗೆ, KYC ದಾಖಲೆಗಳನ್ನು ಒದಗಿಸುವುದು ಕಡ್ಡಾಯವಾಗಿರುತ್ತದೆ. KYC ದಾಖಲೆಗಳನ್ನು ಒದಗಿಸದಿದ್ದಲ್ಲಿ ಅಂತಹ ಖಾತೆಗಳನ್ನು ನಿಷ್ಕ್ರಿಯ (Inoperative) ಎಂದು ವರ್ಗೀಕರಿಸಲಾಗುವುದು.

**ವಂದನೆಗಳು:–**

ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಮಾರ್ಗದರ್ಶನವನ್ನು ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕ್‌ಗೆ, ಕರ್ನಾಟಕ ರಾಜ್ಯ ಸಹಕಾರ ಇಲಾಖೆಗೆ, ಪಟ್ಟಣ ಸಹಕಾರಿ ಬ್ಯಾಂಕ್‌ಗಳ ಮಹಾಮಂಡಳಿ ಹಾಗೂ ನ್ಯಾಫ್‌ಕಬ್, ಕರ್ನಾಟಕ ರಾಜ್ಯ ಮಹಾಮಂಡಲದ ಎಲ್ಲಾ ಅಧಿಕಾರಿ ವರ್ಗದವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಬ್ಯಾಂಕ್‌ನ ಲೆಕ್ಕಪರಿಶೋಧನೆಯನ್ನು ನಡೆಸಿದ ಎಲ್ಲಾ ಸಂಸ್ಥೆಗಳಿಗೂ, ಬ್ಯಾಂಕ್‌ನ ಖಾತೆಗಳನ್ನು, ಠೇವಣಿಗಳನ್ನು ನಿರ್ವಹಿಸಿದ ಎಲ್ಲಾ ಬ್ಯಾಂಕ್‌ಗಳಿಗೂ, ಕಾನೂನು ಸಲಹೆಗಾರರಿಗೂ, ಮೌಲ್ಯಮಾಪಕರಿಗೂ, ಅಕ್ಕಸಾಲಿಗರಿಗೂ ಹಾಗೂ ಬ್ಯಾಂಕಿನ ಆಡಳಿತಕ್ಕೆ ಸಹಕರಿಸಿದ ಎಲ್ಲಾ ಸಂಸ್ಥೆಗಳಿಗೂ ಹೃತ್ಪೂರ್ವಕ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಕಡೆಯದಾಗಿ ಬ್ಯಾಂಕಿನ ಧಣಿಗಳಾದ, ಬ್ಯಾಂಕಿನ ಅಭಿವೃದ್ಧಿಯಲ್ಲಿ ಪಾಲುದಾರರಾದ ಎಲ್ಲಾ ಸದಸ್ಯರುಗಳಿಗೆ ಹಾಗೂ ಗ್ರಾಹಕರಿಗೆ ತುಂಬು ಹೃದಯದಿಂದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಜೊತೆಗೆ ಬ್ಯಾಂಕಿನ ಆಡಳಿತ ಮಂಡಳಿ ಮಿತ್ರರಿಗೂ ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಆಡಳಿತ ಮಂಡಳಿಯ ಪರವಾಗಿ**
**ಸಹಿ/–**
**ಶ್ರೀ ಹೆಚ್.ಸಿ.ಗೋಪಾಲ್**
**(ಅಧ್ಯಕ್ಷರು)**

ವಿಷಯ–6

# ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

ನಂ.14, "ರಜತ ಭವನ" ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104

## ದಿನಾಂಕ 26–06–2022 ರಂದು "ಅಭಿಮಾನಿ ಇನ್ ಅಂಡ್ ಕನ್‌ವೆನ್ಷನ್ ಸೆಂಟರ್" ನಂ.97, 2ನೇ ಬ್ಲಾಕ್, 3ನೇ ಹಂತ, ಬಸವೇಶ್ವರ ನಗರ, ಬೆಂಗಳೂರು–560079, ಇಲ್ಲಿ ನಡೆದ 41ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ನಡವಳಿಗಳು

ಒಟ್ಟು ಸದಸ್ಯರ ಸಂಖ್ಯೆ : 9757
ಹಾಜರಿದ್ದ ಸದಸ್ಯರ ಸಂಖ್ಯೆ : 1610

**ವಿಷಯ 1:– ಸ್ವಾಗತ:**

ಬ್ಯಾಂಕಿನ ಹಿರಿಯ ಸಿಬ್ಬಂದಿಯವರಾದ ಶ್ರೀ ರುದ್ರೇಶ್.ಜೆ.ಆರ್.ರವರು ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ನ 41ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಗೆ ಆಗಮಿಸಿರುವ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್. ಸಿ. ಗೋಪಾಲ್‌ರವರನ್ನು, ಉಪಾಧ್ಯಕ್ಷರಾದ ಶ್ರೀಮತಿ ಬಿ.ಎಸ್. ಕನ್ಯಾಕುಮಾರಿರವರನ್ನು ಹಾಗೂ ಆಡಳಿತ ಮಂಡಳಿ ಸದಸ್ಯರನ್ನು ಹಾಗೂ ಸದಸ್ಯರನ್ನು ಸ್ವಾಗತಿಸಿದರು ಹಾಗೂ ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸುವಂತೆ ಕೋರಿದರು. ನಂತರ ಆಡಳಿತ ಮಂಡಳಿ ಸದಸ್ಯರು ಜ್ಯೋತಿ ಬೆಳಗುವ ಮೂಲಕ 41ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ಉದ್ಘಾಟಿಸಿದರು.

**ವಿಷಯ 2:–ಪ್ರಾರ್ಥನೆ:**

ಬ್ಯಾಂಕಿನ ಸಿಬ್ಬಂದಿಯವರಾದ ಶ್ರೀಮತಿ ಜೀವಿತಾ.ಎಸ್.ಜೆ, ಶ್ರೀಮತಿ ವಿಜಯಲಕ್ಷ್ಮಿ.ಪಿ ಮತ್ತು ಶ್ರೀಮತಿ ರಮ್ಯಾ.ಎನ್.ರವರು ಹಾಡಿದ ದೇವತಾ ಪ್ರಾರ್ಥನೆಯೊಂದಿಗೆ 41ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯು ಪ್ರಾರಂಭವಾಯಿತು.

**ವಿಷಯ3:–ವಾರ್ಷಿಕ ಮಹಾಸಭೆಯ ಸೂಚನಾಪತ್ರವನ್ನು ಓದಿ ದಾಖಲು ಮಾಡುವುದು.**

ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಮುಖ್ಯ ಕಾರ್ಯನಿರ್ವಾಹಕಿಯವರಾದ ಶ್ರೀಮತಿ ಭಾಗ್ಯ. ಎಸ್. ರವರು ವೇದಿಕೆ ಮೇಲೆ ಆಸೀನರಾಗಿದ್ದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರನ್ನು ಹಾಗೂ ಸಭೆಗೆ ಹಾಜರಾಗಿದ್ದ ಸದಸ್ಯರುಗಳಿಗೆ 41ನೇ ವಾರ್ಷಿಕ ಮಹಾಸಭೆಗೆ ಸ್ವಾಗತಿಸುತ್ತಾ ಕಾರ್ಯಕ್ರಮವನ್ನು ಪ್ರಾರಂಭಿಸುವುದಾಗಿ ತಿಳಿಸುತ್ತಾ ಮೊದಲನೆಯ ಕಾರ್ಯಕ್ರಮವಾಗಿ 41ನೇ ವಾರ್ಷಿಕ ಸರ್ವಸದಸ್ಯರ ಮಹಾ ಸಭೆಯ ಸೂಚನಾ ಪತ್ರವನ್ನು ಓದಿ ಮಹಾ ಸಭೆಗೆ ಮಂಡಿಸಿದರು.

ನಂತರ 41ನೇ ವಾರ್ಷಿಕ ಸರ್ವಸದಸ್ಯರ ಮಹಾ ಸಭೆಯ ಸೂಚನಾ ಪತ್ರವನ್ನು ಒಪ್ಪಬಹುದೆಂದು ಶ್ರೀ ಶಿವಶಂಕರ್ ಹೆಚ್.ಸಿ (ಸ.ಸಂ. 1530) ರವರು ಸೂಚಿಸಿದರು. ಹಾಗೂ ಶ್ರೀಬಿ.ಸುಬ್ಬರಾಯಪ್ಪ (ಸ.ಸಂ2577)ರವರು ಅನುಮೋದಿಸಿದರು. ಇದನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ4:– 2021–22ನೇಸಾಲಿನಲ್ಲಿ ನಿಧನ ಹೊಂದಿದ ಸದಸ್ಯರಿಗೆ ಶ್ರದ್ಧಾಂಜಲಿ ಅರ್ಪಿಸುವುದು.**

2021–22ನೇ ಸಾಲಿನಲ್ಲಿ ಒಟ್ಟು 126 ಸದಸ್ಯರು ನಿಧನ ಹೊಂದಿದ್ದು, ಸಭೆಯಲ್ಲಿ ಹಾಜರಿದ್ದ ಸದಸ್ಯರೆಲ್ಲರೂ ಒಂದು ನಿಮಿಷ ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಅರ್ಪಿಸಿ ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸಿದರು.

**ವಿಷಯ 5:–ಅಧ್ಯಕ್ಷರಿಂದ ಸ್ವಾಗತ ಭಾಷಣ ಮತ್ತು 2021–22ನೇ ಸಾಲಿನ ಆಡಳಿತ ಮಂಡಳಿ ವರದಿಯ ಅಂಗೀಕಾರ.**

ಬ್ಯಾಂಕಿನ ಅಧ್ಯಕ್ಷರಾದಂತಹ ಶ್ರೀ ಹೆಚ್.ಸಿ.ಗೋಪಾಲ್‌ರವರು ಬ್ಯಾಂಕಿನ 41ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಗೆ ಹಾಜರಾದ ಸದಸ್ಯರುಗಳನ್ನು ಸ್ವಾಗತಿಸಿದರು ಹಾಗೂ ಈ 2021–22ನೇ ಸಾಲಿನ ಆಡಳಿತ ಮಂಡಳಿ ವರದಿಯನ್ನು ಈ ಕೆಳಗಿನಂತೆ ಮಹಾಸಭೆಗೆ ಮಂಡಿಸಿದರು.

**ಆತ್ಮೀಯ ಸಹಕಾರಿ ಬಂಧುಗಳೇ,**

ಬ್ಯಾಂಕಿನ 41ನೇ ವಾರ್ಷಿಕ ಸರ್ವ ಸದಸ್ಯರ ಸಭೆಗೆ ತಮ್ಮೆಲ್ಲರಿಗೂ ಆಡಳಿತ ಮಂಡಳಿಯ ಪರವಾಗಿ ಹೃದಯಪೂರ್ವಕ ಸ್ವಾಗತವನ್ನು ಕೋರುತ್ತೇವೆ.

2021–22ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಕೋವಿಡ್–19 ಮಹಾಮಾರಿ ಸಾಂಕ್ರಾಮಿಕ ರೋಗದ ಪರಿಣಾಮ ಕಡಿಮೆಯಾಗಿದ್ದು ಈ ಸಭೆಯನ್ನು ಸಾರ್ವಜನಿಕವಾಗಿ ಖುದ್ದು ಹಾಜರಾಗುವ ಮೂಲಕ 41ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ನಡೆಸಲು ಆಡಳಿತ ಮಂಡಳಿಯವರು ತೀರ್ಮಾನಿಸಿದ್ದು. ಈ ಮೂಲಕ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಸರ್ವ ಸದಸ್ಯರ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಕೋರುತ್ತೇವೆ.

ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದ ಹಿಂದಿನ ಅಧ್ಯಕ್ಷರಾದ ದಿವಂಗತ ಶ್ರೀ ಸಿ. ರಾಮುರವರು, ಮಾಜಿ ಅಧ್ಯಕ್ಷರುಗಳನ್ನು, ನಿರ್ದೇಶಕರುಗಳನ್ನು ಹಾಗೂ ಬ್ಯಾಂಕಿನ ಏಳಿಗೆಗಾಗಿ ದುಡಿದ ಎಲ್ಲರನ್ನೂ ಈ ಸಂದರ್ಭದಲ್ಲಿ ಸ್ಮರಿಸುತ್ತಾ ಈ ಸಭೆಯನ್ನು ಪ್ರಾರಂಭಿಸುತ್ತಿದ್ದೇವೆ.

ನಮ್ಮ ಬ್ಯಾಂಕ್ ದಿನಾಂಕ: 04–10–1969 ರಂದು ಆರಂಭಗೊಂಡು 2019ನೇ ಇಸವಿಗೆ ಯಶಸ್ವಿಯಾಗಿ 50 ವರ್ಷ ಗಳನ್ನು ಪೂರೈಸಿದ್ದು, ಈ ಪ್ರಯುಕ್ತ ಬ್ಯಾಂಕಿನ ಸುವರ್ಣ ಮಹೋತ್ಸವವನ್ನು 2019ರಲ್ಲೇ ಆಚರಿಸಬೇಕಿತ್ತು, ಆದರೆ ಮಹಾಮಾರಿ ಕೋವಿಡ್–19 ಪರಿಣಾಮದಿಂದ ಮುಂದೂಡಿದ್ದು, ಈ ಸಮಾರಂಭವನ್ನು ದಿನಾಂಕ:23–04–2022ರಂದು ಅರಮನೆ ಆವರಣದಲ್ಲಿ ಸುವರ್ಣ ಮಹೋತ್ಸವವನ್ನು ಆಚರಿಸಲಾಯಿತು, ಈ ಸುವರ್ಣ ಮಹೋತ್ಸವಕ್ಕೆ ಸದಸ್ಯರುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಮಾರಂಭವನ್ನು ಯಶಸ್ವಿಗೊಳಿಸಿರುತ್ತೀರಿ. ಇದಕ್ಕಾಗಿ ಬ್ಯಾಂಕಿನ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇವೆ ಮತ್ತು ಈ ಸವಿ ನೆನಪಿಗಾಗಿ ಬ್ಯಾಂಕಿನ ಹಿಂದಿನ ಸರ್ವಸದಸ್ಯರ ಸಭೆಯಲ್ಲಿ ನೀಡಿದ ಭರವಸೆಯಂತೆ ಖಾಯಂ ಸದಸ್ಯರುಗಳಿಗೆ ತಲಾ ರೂ.3000/–ಮೌಲ್ಯದ 30 ಷೇರುಗಳನ್ನು ಕೊಡುಗೆಯಾಗಿ ನಿಮ್ಮಗಳ ಷೇರು ಖಾತೆಗಳಿಗೆ ಈಗಾಗಲೇ ವರ್ಗಾಯಿಸಿದ್ದು, ತಾವು ಇಚ್ಛಿಸಿದಲ್ಲಿ ಹೆಚ್ಚುವರಿಯಾಗಿ ರೂ. 2000/–ಗಳ ಮೌಲ್ಯದ 20 ಷೇರುಗಳನ್ನು ತಮ್ಮ ಸ್ವಂತ ಹಣದಿಂದ ಪಡೆಯಲು ದಿನಾಂಕ:30–06–2022ರ ವರೆಗೆ ಅವಕಾಶವಿರುತ್ತದೆ.

ನಮ್ಮ ಬ್ಯಾಂಕಿನ ವ್ಯವಹಾರದ ಗಾತ್ರವು ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದರಿಂದ ಹಾಲಿ ಕೇಂದ್ರ ಕಚೇರಿ ಇರುವ ಕಟ್ಟಡದಲ್ಲಿ ಆಡಳಿತಾತ್ಮಕ ಕಚೇರಿ ಹಾಗೂ ವಿಜಯನಗರ ಶಾಖೆ ಎರಡೂ ಕಾರ್ಯನಿರ್ವಹಿಸಲು ಸ್ಥಳಾವಕಾಶದ ಕೊರತೆ ಎದುರಿಸುತ್ತಿದ್ದು, ಕೇಂದ್ರ ಕಚೇರಿ ಹಾಗೂ ವಿಜಯನಗರ ಶಾಖೆ ಎರಡೂ ಒಂದೇ ಕಟ್ಟಡದಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಗುವಂತೆ ವಿಜಯನಗರದ ಮುಖ್ಯ ರಸ್ತೆಯಲ್ಲಿ 3500ಚ.ಅ.ಯ ನಿವೇಶನವನ್ನು ಖರೀದಿಸಿದ್ದು, ಈ ನಿವೇಶನದಲ್ಲಿ ವಿಶಾಲವಾದ ಕಟ್ಟಡ ನಿರ್ಮಾಣದ ಕಾಮಗಾರಿ ಪ್ರಗತಿಯಲ್ಲಿದೆ ಎಂದು ತಿಳಿಸಲು ಹರ್ಷಿಸುತ್ತೇವೆ.

ನಮ್ಮ ಬ್ಯಾಂಕ್ ಬೆಂಗಳೂರು ನಗರದಲ್ಲಿ ಒಟ್ಟು 5 ಶಾಖೆಗಳನ್ನು ಹೊಂದಿದ್ದು, ವರದಿ ಸಾಲಿನ ಅಂತ್ಯಕ್ಕೆ ರೂ. 1203.54 ಕೋಟಿ ಠೇವಣಿಯನ್ನು ಸದಸ್ಯರು ಮತ್ತು ಗ್ರಾಹಕರಿಂದ ಸಂಗ್ರಹಿಸಿದ್ದು, ರೂ.512.88 ಕೋಟಿ ಸಾಲ ವಿತರಿಸಿರುತ್ತೇವೆ.

ನಮ್ಮ ಬ್ಯಾಂಕ್ ಕೋವಿಡ್–19ರ ಸಂತ್ರಸ್ತರಿಗೆ ನೆರವಾಗುವ ಸದುದ್ದೇಶದಿಂದ 2020–21, 2021–22 ಸಾಲಿಗೆ ರೂ. 5.00 ಲಕ್ಷಗಳಂತೆ ಒಟ್ಟು ರೂ. 10.00ಲಕ್ಷಗಳನ್ನು ದೇಣಿಗೆಯಾಗಿ ಸಹಕಾರ ಇಲಾಖೆಗೆ ನೀಡಿರುತ್ತೇವೆ.

ನಮ್ಮ ಬ್ಯಾಂಕ್ ಸದಸ್ಯರ ಅವಶ್ಯಕತೆಗನುಸಾರ ವಿವಿಧ ರೀತಿಯ ಸಾಲ ಸೌಲಭ್ಯಗಳನ್ನು ಅಂದರೆ ಗೃಹ ಸಾಲ, ವ್ಯಾಪಾರ ಸಾಲ, ಜಾಮೀನು ಸಾಲ, ಚಿನ್ನಾಭರಣ ಸಾಲ, ಜನತಾ ರೆಂಟಲ್ ಸಾಲ, ವಾಹನ ಸಾಲ, ಶಿಕ್ಷಣ ಸಾಲ, ಓ.ಡಿ. ಸಾಲ ಮತ್ತು ಸ್ಥಿರಾಸ್ತಿ ಅಡಮಾನ ಸಾಲಗಳನ್ನು ಸ್ಪರ್ಧಾತ್ಮಕ ಬಡ್ಡಿ ದರದಲ್ಲಿ ನೀಡುತ್ತಿದ್ದು, ಸದಸ್ಯರುಗಳಿಗೆ ಅನುಕೂಲವಾಗುವಂತೆ ಈಗಾಗಲೇ ದಿನಾಂಕ 01–05–2022 ರಿಂದ ಅನ್ವಯವಾಗುವಂತೆ ಸಾಲದ ಮೇಲಿನ ಬಡ್ಡಿದರವನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡಲಾಗಿದ್ದು ಹಾಗೂ ಆರ್.ಬಿ.ಐ ನಿರ್ದೇಶನದಂತೆ ಗೃಹ ಸಾಲದ ಮಿತಿಯನ್ನು ರೂ.70.00 ಲಕ್ಷದಿಂದ ರೂ.140.00 ಲಕ್ಷದವರೆಗೆ ಹೆಚ್ಚಿಸಲಾಗಿದ್ದು, ಮಾನ್ಯ ಸದಸ್ಯರುಗಳು ಈ ಸೌಲಭ್ಯಗಳ ಸದುಪಯೋಗ ಪಡೆದುಕೊಂಡು ಬ್ಯಾಂಕಿನ ಅಭಿವೃದ್ಧಿಗೆ ಸಹಕರಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ. ಕಡಿಮೆ ಬಡ್ಡಿದರಗಳನ್ನು ಹಾಲಿ ಸಾಲಗಾರರಿಗೆ ನೀಡುವ ಉದ್ದೇಶದಿಂದ ನಿಯಮಗಳನ್ನು ರೂಪಿಸಿಕೊಂಡು ಸೌಲಭ್ಯವನ್ನು ನೀಡಲಾಗುತ್ತದೆ.

ವರದಿ ಸಾಲಿನಲ್ಲಿ ಬ್ಯಾಂಕ್ ಹೊಂದಿದ್ದ 2 ನಿವೇಶನಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದನ್ವಯ ಮಾರಾಟ ಮಾಡಿದ್ದು, ರೂ.2.44 ಕೋಟಿ ಲಾಭ ಬಂದಿರುತ್ತದೆ.

ಈಗಾಗಲೇ ಮೊಬೈಲ್ ಬ್ಯಾಂಕಿಂಗ್ ಸೌಲಭ್ಯವನ್ನು ನೀಡಿದ್ದು, ಪ್ರತಿದಿನಕ್ಕೆ ರೂ.2.00 ಲಕ್ಷದವರೆಗೆ ವ್ಯವಹರಿಸಲು ಅವಕಾಶವಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಬ್ಯಾಂಕಿನ ಆ್ಯಪ್ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಲಭ್ಯವಿದ್ದು, ಈ ಆ್ಯಪ್‌ಅನ್ನು ಎಲ್ಲಾ ಸದಸ್ಯರು ಮತ್ತು ಗ್ರಾಹಕರು ತಮ್ಮ ಮೊಬೈಲ್‌ಗಳಲ್ಲಿ ಅಳವಡಿಸಿಕೊಂಡು ಈ ಸೇವೆಯ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಂಡು Digital Banking ಅನ್ನು ಯಶಸ್ವಿಗೊಳಿಸುವಂತೆ ಕೋರುತ್ತೇವೆ. ಹಾಗೂ UPI Scan to Pay (Phone Pay, Google Pay, Paytm) ಸೇವೆಯನ್ನು ತಕ್ಷಣದಿಂದಲೇ ಆರಂಭಿಸಲಾಗುವುದೆಂದು ತಿಳಿಸಲು ಹರ್ಷಿಸುತ್ತೇವೆ.

ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದನ್ವಯ ಬ್ಯಾಂಕ್ ಹಾಲಿ ಇರುವ ಆಡಳಿತ ಮಂಡಳಿಯ 05 ಸದಸ್ಯರನ್ನೊಳಗೊಂಡಂತೆ ಜೊತೆಗೆ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಸೇರಿದಂತೆ, ವ್ಯವಸ್ಥಾಪನಾ ಸಮಿತಿಯನ್ನು (Board of Management) ರಚಿಸಿಕೊಳ್ಳಬೇಕಿದ್ದು, ಅದರಂತೆ ಈ ಸಮಿತಿಗೆ ಶ್ರೀ ಜಿ.ಸಿದ್ಧಪ್ಪ, ಶ್ರೀ ರಾಜಗೋಪಾಲ್ ಹೆಗ್ಡೆ, ಶ್ರೀ ಟಿ.ಆರ್.ಸ್ವಾಮಿ, ಶ್ರೀ ಎಸ್.ಜಿ.ಕುಲಕರ್ಣಿ ಮತ್ತು ಆನಂದರಾಮಯ್ಯ ರಮೇಶ್ ರವರುಗಳನ್ನೊಳಗೊಂಡ ಸಮಿತಿಯನ್ನು ರಚಿಸಿ ಕೊಂಡಿದ್ದು, ಈ ವ್ಯವಸ್ಥಾಪನಾ ಸಮಿತಿಯನ್ನು ರಚಿಸಿಕೊಂಡಿರುವ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕಿಗೆ ಮಾಹಿತಿಯನ್ನು ಸಲ್ಲಿಸಲಾಗಿದ್ದು, ಮುಂದಿನ ತಿಂಗಳಿನಿಂದ ಈ ಸಮಿತಿಯು ಕಾರ್ಯಾರಂಭ ಮಾಡುತ್ತದೆ ಎಂದು ತಿಳಿಸಲು ಇಚ್ಛಿಸುತ್ತೇವೆ.

**2021–22ನೇ ಸಾಲಿನ ಆರ್ಥಿಕ ಪ್ರಗತಿ:**

ಬ್ಯಾಂಕ್ 2020–21ನೇ ಸಾಲಿಗೆ ರೂ.138.27 ಕೋಟಿ ಆದಾಯ ಗಳಿಸಿದ್ದು, ಇದಕ್ಕೆ ಹೋಲಿಸಿದಾಗ ಪ್ರಸಕ್ತ ಸಾಲಿನಲ್ಲಿ ಬ್ಯಾಂಕ್ ಒಟ್ಟು ರೂ.124.41 ಕೋಟಿ ಆದಾಯ ಗಳಿಸಿದ್ದು, ಒಟ್ಟು ರೂ.13.86 ಕೋಟಿ ಕಡಿಮೆಯಾಗಿದ್ದು, ಇದರ ಪ್ರಮಾಣ ಶೇ.10.02 ಕಡಿಮೆಯಾಗಿರುತ್ತದೆ, ಸಾಲಗಳು ಕಡಿಮೆಯಾಗಿರುವ ಕಾರಣ ಒಟ್ಟು ಆದಾಯ ಕಡಿಮೆಯಾಗಿರುತ್ತದೆ. ಬ್ಯಾಂಕಿನ ಒಟ್ಟು ವ್ಯವಹಾರ 2020–21ನೇ ಸಾಲಿಗೆ ರೂ. 1732.71 ಕೋಟಿ ಇದ್ದು, ಇದಕ್ಕೆ ಹೋಲಿಸಿದಾಗ ಪ್ರಸಕ್ತ ಸಾಲಿನಲ್ಲಿ ರೂ. 1716.42 ಕೋಟಿಗಳಾಗಿದ್ದು, ಒಟ್ಟು ರೂ.16.30 ಕೋಟಿ ಕಡಿಮೆಯಾಗಿದ್ದು, ಇದರ ಪ್ರಮಾಣ ಶೇ 0.94 ಕಡಿಮೆಯಾಗಿರುತ್ತದೆ. 2020–21ನೇ ಸಾಲಿಗೆ ಸಂಗ್ರಹವಾದ ಠೇವಣಿ ಒಟ್ಟು ರೂ. 1134.08 ಕೋಟಿಗಳಿದ್ದು ಇದಕ್ಕೆ ಹೋಲಿಸಿದಾಗ ಪ್ರಸಕ್ತ ಸಾಲಿನ ಅಂತ್ಯಕ್ಕೆ ರೂ.1203.54 ಕೋಟಿ ಠೇವಣಿ ಸಂಗ್ರಹಣೆಯಾಗಿದ್ದು, ಒಟ್ಟು ರೂ.69.46 ಕೋಟಿ ಏರಿಕೆಯಾಗಿದ್ದು, ಇದರ ಪ್ರಮಾಣ ಶೇ 6.12 ಜಾಸ್ತಿಯಾಗಿರುತ್ತದೆ. ಸಾಲ ಮತ್ತು ಮುಂಗಡಗಳು 2020–21ನೇ ಸಾಲಿಗೆ ರೂ.598.64ಕೋಟಿಗಳಿದ್ದು ಇದಕ್ಕೆ ಹೋಲಿಸಿದಾಗ ಪ್ರಸಕ್ತ ಸಾಲಿನಲ್ಲಿ ರೂ.512.87ಕೋಟಿಗಳಿದ್ದು ಒಟ್ಟು ರೂ.85.76 ಕೋಟಿ ಕಡಿಮೆಯಾಗಿದ್ದು ಇದರ ಪ್ರಮಾಣ ಶೇ.14.33 ಕಡಿಮೆಯಾಗಿರುತ್ತದೆ.

2020–21ನೇ ಸಾಲಿಗೆ ಬ್ಯಾಂಕಿನ ನಿವ್ವಳ ಲಾಭ ರೂ.9.33 ಕೋಟಿ ಇದ್ದು ಇದಕ್ಕೆ ಹೋಲಿಸಿದಾಗ ಪ್ರಸಕ್ತ ಸಾಲಿನಲ್ಲಿ ಬ್ಯಾಂಕ್ ಒಟ್ಟು ರೂ.14.67 ಕೋಟಿ ಲಾಭ ಗಳಿಸಿದ್ದು, ಒಟ್ಟು ರೂ. 5.34 ಕೋಟಿ ಏರಿಕೆಯಾಗಿದ್ದು ಇದರ ಪ್ರಮಾಣ ಶೇ 57.23 ಜಾಸ್ತಿಯಾಗಿರುತ್ತದೆ. ಹಾಗೂ ಬ್ಯಾಂಕ್ ಅನುತ್ಪಾದಕ ಆಸ್ತಿಯ ಪ್ರಮಾಣವನ್ನು ಕಡಿಮೆಗೊಳಿಸಲು ಕೋವಿಡ್–19 ಮಹಾಮಾರಿಯ ಪರಿಣಾಮದ ಹೊರತಾಗಿಯೂ ಸಾಲ ವಸೂಲಾತಿಯಲ್ಲಿ ಕಠಿಣ ಕ್ರಮಗಳನ್ನು ಅನುಸರಿಸಿ ಹಾಗೂ ಕಾನೂನು ಕ್ರಮಗಳನ್ನು ಕೈಗೊಂಡಿದ್ದು ಸಾಲಗಾರರೂ ಸಹ ಸಹಕರಿಸಿ ಸಾಲಗಳನ್ನು ಮರುಪಾವತಿ ಮಾಡಿರುತ್ತಾರೆ. ಕಳೆದ ಸಾಲಿನಲ್ಲಿ ಒಟ್ಟು ಅನುತ್ಪಾದಕ ಆಸ್ತಿಯಪ್ರಮಾಣ ಶೇ.16.82 ಇದ್ದು ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣ ಶೇ 4.90 ಆಗಿರುತ್ತದೆ. ವರದಿ ಸಾಲಿನ ಅಂತ್ಯಕ್ಕೆ ಒಟ್ಟು ಅನುತ್ಪಾದಕ ಆಸ್ತಿಯ ಪ್ರಮಾಣ ಶೇ.14.03 ಇದ್ದು, ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣ ಶೇ.0.00 ಆಗಿದ್ದು ಬ್ಯಾಂಕ್ ಸದೃಢವಾಗಿರುವುದನ್ನು ಬಿಂಬಿಸುತ್ತದೆ.

ವರದಿ ಸಾಲಿನಲ್ಲಿ ಬ್ಯಾಂಕ್ ಕೆಲವೊಂದು ಕ್ಲಿಷ್ಟಕರ ಅನುತ್ಪಾದಕ ಸಾಲದ ಖಾತೆಗಳನ್ನು ಮುಕ್ತಾಯಗೊಳಿಸುವ ಸಲುವಾಗಿ ಭಾರತಿಯ ರಿಸರ್ವ್ ಬ್ಯಾಂಕಿನ ನಿಯಮಾನುಸಾರ Compromise Settlement Policyಯನ್ನು ರಚಿಸಿಕೊಂಡು ಆಡಳಿತ ಮಂಡಳಿಯ ಅನುಮೋದನೆ ಪಡೆದುಕೊಂಡು, ಈ ಪಾಲಿಸಿಯನ್ವಯ 6 ಅನುತ್ಪಾದಕ ಸಾಲದ ಖಾತೆಯನ್ನು ಮುಕ್ತಾಯಗೊಳಿಸಿದ್ದು, ಇದರ ಪರಿಣಾಮ ಅನುತ್ಪಾದಕ ಆಸ್ತಿಯ ಮೊತ್ತದಲ್ಲಿ ಒಟ್ಟು

ರೂ.30.00ಕೋಟಿಯಷ್ಟು ಕಡಿಮೆಯಾಗಿರುತ್ತದೆ.

ವರದಿ ಸಾಲಿನಲ್ಲಿ ಮಹಾಲಕ್ಷ್ಮಿಪುರ ಶಾಖೆಯಲ್ಲಿ ವೆಂಕಟೇಶ್ವರ.ಎಸ್.ಎಂಬ ಸದಸ್ಯನು ಸ್ಥಿರಾಸ್ತಿ ಖರೀದಿ ಸಾಲ ಪಡೆದಿದ್ದು, ಸಾಲ ಸುಸ್ತಿಯಾದ ಸಂದರ್ಭದಲ್ಲಿ ಕಾನೂನು ಕ್ರಮ ಜರುಗಿಸಿದ ಸಂದರ್ಭದಲ್ಲಿ ಸ್ಥಿರಾಸ್ತಿ ದಾಖಲೆಗಳು ನಕಲು ಎಂದು ಕಂಡುಬಂದಿದ್ದು, ಸಾಲಗಾರರ ವಿರುದ್ಧ ಹಾಗೂ ಸ್ಥಿರಾಸ್ತಿ ಮಾರಾಟ ಮಾಡಿದವರ ವಿರುದ್ಧ FIR ದಾಖಲು ಮಾಡಿದ್ದು ಸಾಲ ವಸೂಲಾತಿಗಾಗಿ ಕ್ರಮ ಜರುಗಿಸಲಾಗಿರುತ್ತದೆ.

ಕೋವಿಡ್–19 ಮಹಾಮಾರಿಯನ್ನು ಹೋಗಲಾಡಿಸಲು ಅಗತ್ಯವಿರುವ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಸದಸ್ಯರೆಲ್ಲರೂ ಆರೋಗ್ಯವಂತರಾಗಿರಲೆಂದು ಹಾರೈಸುತ್ತಾ ಬ್ಯಾಂಕಿನ 41ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಗೆ ಮತ್ತೊಮ್ಮೆ ತಮ್ಮೆಲ್ಲರನ್ನು ಸ್ವಾಗತಿಸುತ್ತಾ 2022ನೇ ಮಾರ್ಚ್ 31ಕ್ಕೆ (ದಿನಾಂಕ 01–04–2021 ರಿಂದ 31–03–2022ರವರೆಗೆ) ಆಖೈರಾದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಪ್ರಕಾರ ಲೆಕ್ಕ ಪರಿಶೋಧಕರಿಂದ ಲೆಕ್ಕಪರಿಶೋಧನೆ ನಡೆಸಿ ನೀಡಲ್ಪಟ್ಟಿರುವ ಲಾಭ–ನಷ್ಟ, ಆಸ್ತಿಜವಾಬ್ದಾರಿ ತ:ಖ್ತೆಗಳು ಲೆಕ್ಕಪರಿಶೋಧನಾ ವರದಿ ಹಾಗೂ ಬ್ಯಾಂಕ್‌ನ ಕಾರ್ಯಚಟುವಟಿಕೆಗಳ ಜೊತೆಗೆ ಆರ್ಥಿಕ ಅಭಿವೃದ್ಧಿಯ, ಪ್ರಗತಿಯ ಪಕ್ಷಿನೋಟವನ್ನು ಆಡಳಿತ ಮಂಡಳಿಯ ವರದಿ ಸಮೇತ ಈ ಮಹಾಸಭೆಯ ಮುಂದೆ ತಮ್ಮಗಳ ಒಪ್ಪಿಗೆಗಾಗಿ ಮಂಡಿಸುತ್ತಿದ್ದೇವೆ.

**ಸದಸ್ಯತ್ವ ಮತ್ತು ಷೇರು ಬಂಡವಾಳ :** ಬ್ಯಾಂಕಿನ ಷೇರು ಬಂಡವಾಳವು ದಿನಾಂಕ: 31–03–2022ಕ್ಕೆ ರೂ. 28.07 ಕೋಟಿ ಇದ್ದು ಒಟ್ಟು ಸದಸ್ಯರ ಸಂಖ್ಯೆ 13249 ಇದ್ದು, ಇದರಲ್ಲಿ ಖಾಯಂ ಸದಸ್ಯರ ಸಂಖ್ಯೆ 9757 ಹಾಗೂ ಸಹಸದಸ್ಯರ ಸಂಖ್ಯೆ 3492 ಇರುತ್ತದೆ.

**ಆಪದ್ಧನ ಮತ್ತು ಇತರೆ ನಿಧಿಗಳು ಹಾಗೂ ಅವಕಾಶಗಳು :** ದಿನಾಂಕ 31–03–2022ಕ್ಕೆ ಬ್ಯಾಂಕಿನ ಆಪದ್ಧನ ಮತ್ತು ಇತರೆ ನಿಧಿಗಳಲ್ಲಿ 107.02 ಕೋಟಿ ಇದ್ದು, ಅವಕಾಶಗಳಲ್ಲಿ ರೂ.72.80 ಕೋಟಿಯಿದ್ದು, ಒಟ್ಟು ರೂ.179.82 ಕೋಟಿ ಈ ಅಂಕಿ ಅಂಶವು ಬ್ಯಾಂಕ್ ಸದೃಢವಾಗಿದೆ ಎಂಬುದನ್ನು ಬಿಂಬಿಸುತ್ತದೆ.

**ಠೇವಣಾತಿಗಳು:** ಬ್ಯಾಂಕಿನ ಎಲ್ಲಾ ಠೇವಣಾತಿಗಳು ದಿನಾಂಕ 31–03–2021ಕ್ಕೆ ರೂ. 1134.08ಕೋಟಿಗಳಿದ್ದು ಇದಕ್ಕೆ ಹೋಲಿಸಿದಾಗ ದಿನಾಂಕ 31–03–2022ಕ್ಕೆ ರೂ.1203.54 ಕೋಟಿ ಇದ್ದು, ರೂ.69.46 ಕೋಟಿಗಳಷ್ಟು ಏರಿಕೆಯಾಗಿದ್ದು ಇದರ ಪ್ರಮಾಣ ಶೇಕಡಾವಾರು 6.12 ರಷ್ಟು ಜಾಸ್ತಿಯಾಗಿರುತ್ತದೆ.

ಬ್ಯಾಂಕಿನಲ್ಲಿ ಒಟ್ಟು ರೂ.179.70 ಕೋಟಿ ಉಳಿತಾಯ ಮತ್ತು ಚಾಲ್ತೀ ಖಾತೆ (CASA Deposit) ಠೇವಣಿಗಳನ್ನು ಹೊಂದಿದ್ದು, ಒಟ್ಟು ಠೇವಣಿ ರೂ. 1203.54ಗಳಿಗೆ ಹೋಲಿಸಿದಾಗ ಇದರ ಪ್ರಮಾಣವು ಶೇ 14.93% ಆಗಿರುತ್ತದೆ.

**ದುಡಿಯುವ ಬಂಡವಾಳ :** ಬ್ಯಾಂಕಿನ ದುಡಿಯುವ ಬಂಡವಾಳ 2020–21ನೇ ಸಾಲಿಗೆ ರೂ.1349.99 ಕೋಟಿಗೆ ಹೋಲಿಸಿದಾಗ ದಿನಾಂಕ 31–03–2022ಕ್ಕೆ ರೂ.1435.27ಕೋಟಿಗಳಾಗಿದ್ದು ರೂ.85.28ಕೋಟಿ ಏರಿಕೆಯಾಗಿರುವುದರ ಪ್ರಮಾಣ ಶೇ 6.32 ರಷ್ಟು ವೃದ್ಧಿಯಾಗಿರುತ್ತದೆ.

**ಸಾಲಗಳು ಮತ್ತು ಮುಂಗಡಗಳು :** ದಿನಾಂಕ 31–03–2021ಕ್ಕೆ ಒಟ್ಟು ರೂ.598.64 ಕೋಟಿ ಸಾಲಗಳಿದ್ದು ಇದಕ್ಕೆ ಹೋಲಿಸಿದಾಗ ದಿನಾಂಕ 31–03–2022ಕ್ಕೆ ರೂ.512.88 ಕೋಟಿಗಳಿದ್ದು ರೂ.85.76 ಕೋಟಿಗಳಷ್ಟು ಸಾಲ ಕಡಿಮೆಯಾಗಿರುತ್ತದೆ. ಇದು ಶೇಕಡಾವಾರು 14.33 ರಷ್ಟು ಕಡಿಮೆಯಾಗಿರುತ್ತದೆ. ಬ್ಯಾಂಕ್ ಸಾಲ ವಸೂಲಾತಿಯಲ್ಲಿ ಕಠಿಣ ಕ್ರಮ ಕೈಗೊಂಡ ಪರಿಣಾಮ ಹಾಗೂ ದೊಡ್ಡ ಮೊತ್ತದ ಸಾಲದ ಖಾತೆಗಳು ಟೇಕ್ ಓವರ್/ಮುಕ್ತಾಯವಾದ ಕಾರಣ ಸಾಲದ ಪ್ರಮಾಣ ಕಡಿಮೆಯಾಗಿರುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯನ್ವಯ ಹಿಂದಿನ ಹಣಕಾಸು ವರ್ಷಾಂತ್ಯಕ್ಕೆ ಇರುವ ಸಾಲದ ಬಾಕಿಯ ಶೇ.50 ರಷ್ಟು ಸಾಲವನ್ನು ಆದ್ಯತಾವಲಯಕ್ಕೆ ನೀಡಬೇಕಿದ್ದು, ವರದಿ ಸಾಲಿನಲ್ಲಿ ಬ್ಯಾಂಕ್ ಶೇ.52.92 ರಷ್ಟು ಆದ್ಯತಾ ವಲಯಕ್ಕೆ, ಶೇ 12.46 ರಷ್ಟು ದುರ್ಬಲ ವರ್ಗ ಮತ್ತು ಮಹಿಳಾ ವರ್ಗಕ್ಕೆ ನೀಡಲಾಗಿದೆ.

**ಸುಸ್ತಿ ಸಾಲಗಳು :** ದಿನಾಂಕ 31–03–2022ಕ್ಕೆ ಸುಸ್ತಿ ಸಾಲಗಾರ ಸದಸ್ಯರುಗಳಿಂದ ಬ್ಯಾಂಕಿಗೆ ಬರಬೇಕಾದ ಎಲ್ಲಾ ಬಗೆಯ ಸುಸ್ತಿ ಸಾಲಗಳ ಮೊತ್ತ ರೂ.89.97 ಕೋಟಿಗಳಿದ್ದು, ಅನುತ್ಪಾದಕ ಸಾಲದ ಮೊತ್ತ ರೂ.71.96 ಕೋಟಿ ಇದ್ದು, ಇದು ಒಟ್ಟು ಸಾಲದ ಶೇಕಡಾ 14.03 ರಷ್ಟಿರುತ್ತದೆ. ಹಾಗೂ ನಿವ್ವಳ ಎನ್.ಪಿ.ಎ ಶೇಕಡ 0.00 ಗಳಾಗಿರುತ್ತದೆ.

**ಹೂಡಿಕೆಗಳು :** ದಿನಾಂಕ 31–03–2022ಕ್ಕೆ ಬ್ಯಾಂಕ್ ಸರ್ಕಾರಿ ಭದ್ರತಾ ಪತ್ರಗಳಲ್ಲಿ ರೂ.703.84 ಕೋಟಿಗಳಷ್ಟು

ಹಾಗೂ ಇತರೆ ಬ್ಯಾಂಕುಗಳಲ್ಲಿ ರೂ.110.27 ಕೋಟಿ ಠೇವಣಿ ಮಾಡಲಾಗಿದ್ದು, ಒಟ್ಟು ರೂ.814.11 ಕೋಟಿ ಹೂಡಿಕೆ ಮಾಡಲಾಗಿದೆ. ಈ ಹೂಡಿಕೆಗಳಿಂದ 2021-22ನೇ ಸಾಲಿಗೆ ಬಡ್ಡಿಯಿಂದ ರೂ.48.19 ಕೋಟಿಗಳಷ್ಟು ಆದಾಯ ಬಂದಿರುತ್ತದೆ. ಹಾಗೂ ಹೂಡಿಕೆಗಳ ಮಾರಾಟದಿಂದ ರೂ.2.09ಕೋಟಿ ಲಾಭ ಗಳಿಸಿರುತ್ತದೆ.

ಕೇಂದ್ರ ಸರ್ಕಾರ ಪಿ.ಎಂ.ಸಿ ಬ್ಯಾಂಕ್ ಅನ್ನು ಯೂನಿಟಿ ಸ್ಮಾಲ್ ಫೈನಾನ್ಸ್ ಬ್ಯಾಂಕಿನೊಂದಿಗೆ ವಿಲೀನಗೊಳಿಸಿ ರಾಜ್ಯ ಪತ್ರ ಅಧಿಸೂಚನೆಯನ್ನು ಹೊರಡಿಸಿದ್ದು, ಈ ಅಧಿಸೂಚನೆಯನ್ವಯ ಬ್ಯಾಂಕ್ ಪಿ.ಎಂ.ಸಿ.ಬ್ಯಾಂಕಿನಲ್ಲಿ ಹೊಂದಿದ್ದ ರೂ.5.00ಕೋಟಿ ಠೇವಣಿ ಹಾಗೂ ಚಾಲ್ತೀ ಖಾತೆಯಲ್ಲಿದ್ದ ಶಿಲ್ಕನ್ನು ಸೇರಿ ರೂ.4.42ಕೋಟಿಯನ್ನು Perpetual Non-Cumulative Preference Sharesಗಳಾಗಿಯೂ ರೂ1.10ಕೋಟಿಯನ್ನು Equity Warrants ಆಗಿ ಪರವರ್ತನೆಗೊಳಿಸಿರುತ್ತಾರೆ.

ನಗದು ಮೀಸಲು (CRR) ಮತ್ತು ಶಾಸನಬದ್ಧ (SLR) ಮೀಸಲುಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ ನಿರ್ವಹಣೆ ಮಾಡಲಾಗಿರುತ್ತದೆ.

**ನಿವ್ವಳ ಲಾಭ** : ಬ್ಯಾಂಕ್ 2020-21ನೇ ಸಾಲಿನಲ್ಲಿಯೂ ರೂ.13.63ಕೋಟಿ ಲಾಭಗಳಿಸಿದ್ದು ಆದಾಯ ತೆರಿಗೆ ರೂ.4.30 ಕೋಟಿ ಪಾವತಿಸಿದ ನಂತರ ನಿವ್ವಳ ಲಾಭ ರೂ. 9.33 ಕೋಟಿಗಳಾಗಿದ್ದು ವರದಿ ಸಾಲಿನಲ್ಲಿ ರೂ.20.06 ಕೋಟಿ ಲಾಭ ಗಳಿಸಿದ್ದು, ಆದಾಯ ತೆರಿಗೆ ರೂ.5.39 ಕೋಟಿ ಪಾವತಿಸಿದ ನಂತರ ನಿವ್ವಳ ಲಾಭ ರೂ.14.67ಕೋಟಿಗಳಾಗಿದ್ದು, 2020-21ನೇ ಸಾಲಿಗೆ ಹೋಲಿಸಿದಾಗ ರೂ. 5.34ಕೋಟಿ ಜಾಸ್ತಿಯಾಗಿದ್ದು, ಇದರ ಶೇಕಡವಾರು 57.23 ರಷ್ಟು ಜಾಸ್ತಿಯಾಗಿರುತ್ತದೆ.

**ಠೇವಣಿ ವಿಮಾ ಯೋಜನೆ:** ಬ್ಯಾಂಕಿನ ಗ್ರಾಹಕರುಗಳ/ ಸದಸ್ಯರುಗಳ ಠೇವಣಿಗಳ ಭದ್ರತೆಯ ದೃಷ್ಟಿಯಿಂದ ರೂ.5.00 ಲಕ್ಷದವರೆಗಿನ ಎಲ್ಲಾ ಠೇವಣಿಗಳಿಗೆ DICGC ರವರ ವಿಮಾ ಯೋಜನೆಯಡಿಯಲ್ಲಿ ವರದಿ ಸಾಲಿಗೆ ರೂ.1.40 ಕೋಟಿ ವಿಮೆ ಪಾವತಿಸಲಾಗಿದೆ.

ಬ್ಯಾಂಕಿನ ವಾಹನ, ಕಟ್ಟಡ, ನಗದು ಮತ್ತು ಚಿನ್ನಾಭರಣಗಳ ಮೇಲೆ United India Insurance Company ವಿಮಾ ಕಂಪನಿಗೆ ರೂ.3.77 ಲಕ್ಷ ಪ್ರೀಮಿಯಂ ಪಾವತಿಸಲಾಗಿದೆ.

**ಆಡಿಟ್(ಲೆಕ್ಕ ಪರಿಶೋಧನೆ):** 2022ನೇ ಮಾರ್ಚ್ 31ಕ್ಕೆ ಆಖೈರಾದ (ದಿನಾಂಕ 01-04-2021 ರಿಂದ 31-03-2022ರವರೆಗೆ) ಲೆಕ್ಕಪತ್ರಗಳನ್ನು ಹಾಗೂ ಇನ್ನಿತರ ಆರ್ಥಿಕ ತ:ಖ್ತೆಗಳನ್ನು ಮೆ. ಬಾಬು ಅಂಡ್ ಬಡತ್ ಚಾರ್ಟರ್ಡ್ ಅಕೌಂಟೆಂಟ್ಸ್‌ರವರು ಲೆಕ್ಕಪರಿಶೋಧನೆಯನ್ನು ಮಾಡಿದ್ದು ಲೆಕ್ಕಪರಿಶೋಧಕರ ದೃಢೀಕರಣ ಪತ್ರವನ್ನು (ಪ್ರಮಾಣ ಪತ್ರ) ನೀಡಿರುತ್ತಾರೆ.

**DEAF ಖಾತೆ (Depositor Education and Awareness fund):** ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ, ಯಾವುದೇ ಖಾತೆಯಲ್ಲಿ 10 ವರ್ಷ ಸತತವಾಗಿ ವ್ಯವಹಾರ ಇಲ್ಲದೇ ಇದ್ದಲ್ಲಿ ಈ ಠೇವಣಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಆದೇಶದನ್ವಯ **DEAF** ಖಾತೆಗೆ ವರ್ಗಾಯಿಸಲಾಗುವುದು. ದಿನಾಂಕ 31-03-2022ಕ್ಕೆ ಈ ಖಾತೆಯಲ್ಲಿ ರೂ. 1.74 ಕೋಟಿ (8669ಖಾತೆಗಳು) ಇರುತ್ತದೆ. ಆದ್ದರಿಂದ ಗ್ರಾಹಕರು ಸಾಧ್ಯವಾದಷ್ಟು ತಮ್ಮ ಖಾತೆಯಲ್ಲಿ ವ್ಯವಹರಿಸಿ ಖಾತೆಯನ್ನು ಚಾಲ್ತಿಯಲ್ಲಿರುವಂತೆ ನೋಡಿಕೊಳ್ಳುವುದು ಉತ್ತಮ.

**ಸಭೆಗಳು :** ಬ್ಯಾಂಕ್ ಸಾಲದ ಉಪಸಮಿತಿ, ಸಾಲ ವಸೂಲಾತಿ ಉಪಸಮಿತಿ, ಹೂಡಿಕೆಗಳ ಉಪಸಮಿತಿ, ಆಡಿಟ್ ಉಪಸಮಿತಿ, ಆಡಳಿತ ಉಪಸಮಿತಿಗಳನ್ನು ಹೊದಿದ್ದು, ಈ ಸಮಿತಿಯ ಸದಸ್ಯರು ಕಾಲಕಾಲಕ್ಕೆ ಸಭೆ ಸೇರಿ ಸಮಿತಿಗಳ ಉದ್ದೇಶಕ್ಕನುಸಾರವಾಗಿ ವಿಷಯಗಳನ್ನು ಚರ್ಚಿಸಿ ಬ್ಯಾಂಕಿನ ಅಭಿವೃದ್ಧಿಗೆ ಸಹಕರಿಸುತ್ತಿದ್ದಾರೆ. ಈ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ.

**ಮರಣೋತ್ತರ ಪರಿಹಾರ ನಿಧಿ :** ಬ್ಯಾಂಕಿನ ಸದಸ್ಯರು ಮರಣ ಹೊಂದಿದಲ್ಲಿ ಮರಣ ಪರಿಹಾರ ನಿಧಿಯಾಗಿ ರೂ.15,000/-ಗಳನ್ನು ನೀಡಲಾಗುತ್ತಿದ್ದು, ಸದಸ್ಯರು ಮರಣಹೊಂದಿದ ಒಂದು ವರ್ಷದೊಳಗೆ ವಾರಸುದಾರರು ಮರಣೋತ್ತರ ಪರಿಹಾರದ ಅರ್ಜಿಯನ್ನು ಸಲ್ಲಿಸಬೇಕು. ತಪ್ಪಿದಲ್ಲಿ ಪರಿಹಾರ ನಿಧಿಯನ್ನು ನೀಡಲಾಗುವುದಿಲ್ಲ. ಹಾಗೂ ನಮ್ಮ ಬ್ಯಾಂಕಿನ ಸದಸ್ಯರ ಕಷ್ಟದಲ್ಲೂ/ನೋವಿನಲ್ಲೂ ಭಾಗಿಯಾಗುವ ಸದುದ್ದೇಶದಿಂದ ಈ ಕೆಳಗೆ ತಿಳಿಸಿರುವ ಕಾಯಿಲೆಗಳಿಗೆ ವೈದ್ಯಕೀಯ ವೆಚ್ಚ ಭರಿಸಲು ನೆರವಾಗುವಂತೆ ಸದಸ್ಯತ್ವದ ಅವಧಿಯಲ್ಲಿ ಒಂದು ಬಾರಿ ಅನ್ವಯವಾಗುವಂತೆ ರೂ.70,000/-ಗಳ ಸಹಾಯಧನವನ್ನು ಬ್ಯಾಂಕಿನ ನಿಬಂಧನೆಗಳಿಗೊಳಪಟ್ಟು ನೀಡಲಾಗುತ್ತಿದೆ.

ಎ) ಹೃದಯ ಸಂಬಂಧಿ ಕಾಯಿಲೆಗೆ – ಆಂಜಿಯೋಪ್ಲಾಸ್ಟ್, ಬೈಪಾಸ್

ಬಿ) ಕಿಡ್ನಿ ಸಂಬಂಧಿ ಕಾಯಿಲೆಗೆ – ಕಿಡ್ನಿ ಕಸಿ ಸಂಬಂಧ

ಸಿ) ಕ್ಯಾನ್ಸರ್

ಡಿ) ಮಂಡಿ ಚಿಪ್ ಶಸ್ತ್ರ ಚಿಕಿತ್ಸೆ

**ಸಿಬ್ಬಂದಿಯವರಿಗೆ ತರಬೇತಿ ಸೌಲಭ್ಯಗಳು:–** 2021–22 ನೇ ಸಾಲಿಗೆ ಬ್ಯಾಂಕಿನಲ್ಲಿ ಒಟ್ಟು 57 ಜನ ಸಿಬ್ಬಂದಿಗಳು ಖಾಯಂ ನೌಕರರಾಗಿ ಕೆಲಸ ನಿರ್ವಹಿಸುತ್ತಿದ್ದು, 2021–22ನೇ ಸಾಲಿಗೆ ಸಿಬ್ಬಂದಿ ವೆಚ್ಚವು ರೂ.5.47ಕೋಟಿ ಇದ್ದು, ಇದು ಬ್ಯಾಂಕಿನ ದುಡಿಯುವ ಬಂಡವಾಳ ರೂ.1435.27ಕೋಟಿಗಳಿದ್ದು, ಇದರ ಶೇ.0.38 ಇರುತ್ತದೆ. ಇದು ಸರ್ಕಾರ ನಿಗದಿತ ಶೇ.2% ರ ಮಿತಿಯಲ್ಲಿರುತ್ತದೆ. ಹಾಗೂ ಇತರೆ ಎಲ್ಲಾ ಸೌಲಭ್ಯಬ್ಯಾಂಕಿನ ವ್ಯವಹಾರಗಳನ್ನು ಅತ್ಯಂತ ದಕ್ಷತೆಯಿಂದ ನಿರ್ವಹಿಸಲು ಭಾರತೀಯ ರಿಸರ್ವ್ ಬ್ಯಾಂಕ್, ಸಹಕಾರ ತರಬೇತಿ ಮಹಾವಿದ್ಯಾಲಯ, ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದವರು ವ್ಯವಸ್ಥೆಗೊಳಿಸುವ ತರಬೇತಿ ಕಾರ್ಯಕ್ರಮ, ಕಾರ್ಯಾಗಾರ ಹಾಗೂ ಶಿಬಿರಗಳಿಗೆ ಅಧಿಕಾರಿಗಳನ್ನು ಹಾಗೂ ಎಲ್ಲಾ ವರ್ಗದ ಸಿಬ್ಬಂದಿಯವರನ್ನು ಕಳುಹಿಸಿಕೊಡಲಾಗುತ್ತಿದೆ.

ಬ್ಯಾಂಕ್ 2022–23ನೇ ಸಾಲಿನಲ್ಲಿ ಸಾಧಿಸಬೇಕೆಂದಿರುವ ಗುರಿ:–

ಅ) ಬ್ಯಾಂಕ್ ಹೊಂದಿರುವ ಅನುತ್ಪಾದಕ ಆಸ್ತಿಗಳನ್ನು ವಸೂಲು ಮಾಡುವುದು.

ಆ) ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ ಆದ್ಯತಾ ವಲಯಗಳಿಗೆ ಸಾಲಗಳನ್ನು ನೀಡಿ ಸಮಾಜದ ಅಭಿವೃದ್ಧಿಗೆ ಸಹಕರಿಸುವುದು.

ಇ) ಬ್ಯಾಂಕಿನ ಠೇವಣಿ ಸಂಗ್ರಹಣೆ ಮತ್ತು ಸಾಲಗಳ ವಿತರಣೆ ಹೆಚ್ಚಾಗುವಂತೆ ಕ್ರಮಕೈಗೊಳ್ಳುವುದು.

ಉ) ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಗಳಲ್ಲಿ ಹೆಚ್ಚಿನ ಶಾಖೆಗಳನ್ನು ಹೊಂದುವುದು.

ಊ) ಬ್ಯಾಂಕಿನ ಸುಂಕದಕಟ್ಟೆ ಶಾಖೆಗೆ ಸ್ವಂತ ಕಟ್ಟಡ ಹೊಂದುವುದು.

ಋ) ರೂ.45.00 ಕೋಟಿ ಲಾಭಗಳಿಸುವುದು.

ಎ) UPI Products ಗಳನ್ನು ಗ್ರಾಹಕರ ಸೇವೆಗೆ ಒದಗಿಸುವುದು.

ಆಡಳಿತ ಮಂಡಳಿಯ ವರದಿಯನ್ನು ಮಹಾಸಭೆಗೆ ಮಂಡಿಸಿದ ನಂತರ ಅಧ್ಯಕ್ಷರಾದ ಶ್ರೀ ಹೆಚ್.ಸಿ.ಗೋಪಾಲ್ ರವರು, ತಾವು ಕಷ್ಟಕಾಲದಲ್ಲಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದು, ಬ್ಯಾಂಕಿನಲ್ಲಿ ಹೆಚ್ಚಿನ ಹಣವಿದ್ದು, ಗ್ರಾಹಕರು ನಮ್ಮ ಬ್ಯಾಂಕಿನಲ್ಲಿ ಠೇವಣಿ ಇಟ್ಟು, ಇತರೆ ಬ್ಯಾಂಕುಗಳಲ್ಲಿ ಸಾಲ ಪಡೆಯುತ್ತಿದ್ದಾರೆ, ಇದನ್ನು ಮನಗಂಡು ನಮ್ಮ ಬ್ಯಾಂಕ್ ಠೇವಣಿ ಮೇಲಿನ ಬಡ್ಡಿದರವನ್ನು ಕಡಿಮೆಗೊಳಿಸಿ, ಸ್ಪರ್ಧಾತ್ಮಕ ಬಡ್ಡಿ ದರದಲ್ಲಿ ಸಾಲವನ್ನು ನೀಡುವ ಉದ್ದೇಶದಿಂದ ಸಾಲಗಳ ಮೇಲಿನ ಬಡ್ಡಿದರವನ್ನೂ ಸಹ ಕಡಿಮೆಗೊಳಿಸಿದ್ದು, ಮಾನ್ಯ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಸಾಲವನ್ನು ಪಡೆಯಬೇಕೆಂದು ಕೋರಿದರು. ಹಾಗೂ ವರದಿ ಸಾಲಿನಲ್ಲಿ ಆಡಳಿತ ಮಂಡಳಿ ಸದಸ್ಯರ ಮತ್ತು ಸಿಬ್ಬಂದಿಗಳ ಪರಿಶ್ರಮದಿಂದ ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣ ಶೇ.0% ಇದ್ದು, ಇದಕ್ಕೆ ಸಾಲಗಾರರೂ ಸಹ ಸಕಾಲದಲ್ಲಿ ಸಾಲ ಮರುಪಾವತಿ ಮಾಡಿ ಸಹಕರಿಸಿದ್ದಾರೆ, ಸಾಲ ಮರುಪಾವತಿ ಮಾಡದಿದ್ದರೆ, ಠೇವಣಿದಾರರಿಗೆ ವಾಯಿದೆ ದಿನಾಂಕದೊಳಗೆ ಬಡ್ಡಿ ಪಾವತಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸಾಲ ಪಡೆದ ಎಲ್ಲಾ ಸಾಲಗಾರರೂ ಸಕಾಲದಲ್ಲಿ ಸಾಲದ ಕಂತುಗಳನ್ನು ಮರುಪಾವತಿಸಬೇಕೆಂದು ಕೋರಿದರು.

ನಂತರ ಅಧ್ಯಕ್ಷರು ಮಂಡಿಸಿದ ಆಡಳಿತ ಮಂಡಳಿ ವರದಿಯನ್ನು ಒಪ್ಪಬಹುದೆಂದು ಸದಸ್ಯರಾದಶ್ರೀ ರಾಜಗೋಪಾಲ್(ಸ.ಸಂ.4631) ರವರು ಸೂಚಿಸಿದರು. ಹಾಗೂ ಸದಸ್ಯರಾದ ಶ್ರೀಪುಟ್ಟರಾಜು.ಹೆಚ್(ಸ.ಸಂ.11149) ರವರು ಅನುಮೋದಿಸಿದರು. ಇದನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ 6: ದಿನಾಂಕ 19-09-2021ರಂದು ನಡೆದ 40ನೇ ವರ್ಚುಯಲ್ ಸರ್ವಸದಸ್ಯರ ಮಹಾಸಭೆಯ ನಡವಳಿಗಳನ್ನು ಓದಿ ದಾಖಲು ಮಾಡುವುದು.**

ಉಪಾಧ್ಯಕ್ಷರಾದ ಶ್ರೀಮತಿ. ಬಿ.ಎಸ್.ಕನ್ಯಾಕುಮಾರಿರವರು ಮಹಾಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರಿಗೆ ಸ್ವಾಗತ ಕೋರುತ್ತಾ ದಿನಾಂಕ 19-09-2021ರಂದು ನಡೆದ 40ನೇ ಸರ್ವಸದಸ್ಯರ ಮಹಾಸಭೆಯ ನಡವಳಿಗಳನ್ನು ಸಭೆಯ ಮುಂದೆ ಮಂಡಿಸಿದರು.

ದಿನಾಂಕ 19-09-2021ರಂದು ನಡೆದ ಸರ್ವಸದಸ್ಯರ ಮಹಾಸಭೆಯ ನಡವಳಿಗಳನ್ನು ಒಪ್ಪಬಹುದೆಂದು ಸದಸ್ಯರಾದ ಕೃಷ್ಣೇಗೌಡ(ಸ.ಸಂ.4675)ರವರು ಸೂಚಿಸಿದರು. ಹಾಗೂ ಸದಸ್ಯರಾದ ಶ್ರೀಆರ್.ಬಿ.ಮಲ್ಲಿಕಾರ್ಜುನಯ್ಯ (ಸ.ಸಂ.835)ರವರು ಅನುಮೋದಿಸಿದರು. ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ 7: 2021-22ನೇ ಸಾಲಿನ ಲೆಕ್ಕ ಪರಿಶೋಧನೆ ಆದ ಲೆಕ್ಕ-ಪತ್ರ ಹಾಗೂ ಲೆಕ್ಕ ಪರಿಶೋಧನಾ ವರದಿಗಳನ್ನು ಪರಿಶೀಲಿಸಿ ಅಂಗೀಕರಿಸುವುದು.**

ಬ್ಯಾಂಕಿನ 2021-22ನೇ ಸಾಲಿನಲೆಕ್ಕ ಪರಿಶೋಧನೆಯನ್ನು ಮೆ.ಬಾಬು ಅಂಡ್ ಬಡತ್ ರವರು ನಡೆಸಿ ವರದಿ ನೀಡಿದ್ದು, ಈ ವರದಿಯನ್ನು ನಿರ್ದೇಶಕರಾದ ಶ್ರೀ.ಜಿ.ಸಿದ್ದಪ್ಪರವರು ಮಹಾ ಸಭೆಯ ಮುಂದೆ ವಿವರವಾಗಿ ಮಂಡಿಸಿದರು.

ಸದಸ್ಯರಾದ ಶ್ರೀ ಕೃಷ್ಣಮೂರ್ತಿ ಸ.ಸಂ.9831ರವರು ಪುಟ ಸಂಖ್ಯೆ 37 ರಲ್ಲಿ ಆದಾಯದ ತಖ್ತೆಗಳಲ್ಲಿ 16 ವಿಷಯಗಳಲ್ಲಿ 14 ವಿಷಯಗಳು ಕಳೆದ ಸಾಲಿಗಿಂತ ಕಡಿಮೆ ಇದ್ದು 02 ವಿಷಯಗಳಲ್ಲಿ ಮಾತ್ರ ಆದಾಯ ಹೆಚ್ಚಾಗಿರುವ ಬಗ್ಗೆ ಕಾರಣ ಕೇಳಿದರು ಹಾಗೂ ಸರ್ಕಾರಿ ಹೂಡಿಕೆಗಳಿಂದ ಬಂದ ಆದಾಯ ಮಾತ್ರ ಹೆಚ್ಚಾಗಿದ್ದು ಹಾಗೂ ಈ ವರ್ಷ ಯಾವ ರೀತಿಯಲ್ಲಿ ಆದಾಯವನ್ನು ಗಳಿಸುತ್ತೀರಿ ಎಂಬುವುದರ ಬಗ್ಗೆ ಪ್ರಶ್ನಿಸಿದರು ಇದಕ್ಕೆ ಉತ್ತರವಾಗಿ ಬ್ಯಾಂಕಿನ ಅಧ್ಯಕ್ಷರು ಈಗಾಗಲೇ ನಿಮಗೆ ತಿಳಿದಿರುವಂತೆ ಸದಸ್ಯರುಗಳು ಬ್ಯಾಂಕಿನಿಂದ ಸಾಲಗಳನ್ನು ತಗೆದುಕೊಳ್ಳುತ್ತಿಲ್ಲ ಇದರಿಂದ  ಸಾಲದ ಮೇಲೆ ಬರಬೇಕಾದ ಆದಾಯವು ಕಡಿಮೆಯಾಗಿರುತ್ತದೆ. ಈ ವರ್ಷಕ್ಕೆ ಆಡಳಿತ ಮಂಡಲಿಯು ಸದಸ್ಯರನ್ನು ಆಕರ್ಷಿಸುವ ಸಲುವಾಗಿ ಸಾಲದ ಮೇಲಿನ ಬಡ್ಡಿ ದರವನ್ನು ಕಡಿಮೆಗೊಳಿಸಲಾಗಿದೆ. ಈ ವರ್ಷ ಹೆಚ್ಚಿನ ಸಾಲವನ್ನು ನೀಡುವುದರ ಮೂಲಕ ಆದಾಯವನ್ನು ಹೆಚ್ಚಿಸುವ ನಿರೀಕ್ಷೆಯಲ್ಲಿದ್ದೇವೆಂದು ತಿಳಿಸಿದರು.

ಸದಸ್ಯರಾದ ಶ್ರೀ ರಾಮಲಿಂಗಯ್ಯ, ಸ.ಸಂ.4852 ರವರು2020-2021ನೇ ಸಾಲಿಗೆ ಹೋಲಿಸಿದಾಗ ವರದಿ ಸಾಲಿನಲ್ಲಿ ಸಾಲ ಮತ್ತು ಹೂಡಿಕೆಯ ಮೇಲೆ ಸ್ವೀಕೃತವಾದ ಬಡ್ಡಿಯ ಪ್ರಮಾಣದಲ್ಲಿ ಇಳಿಕೆಯಾಗಿದ್ದು, ಪರಿಣಾಮ ಒಟ್ಟು ಲಾಭ ಗಳಿಕೆ ಇಳಿಮುಖವಾಗಿದೆ.  ಬ್ಯಾಂಕಿನ ಒಟ್ಟು ಆದಾಯ 2020-21ನೇ ಸಾಲಿನಲ್ಲಿ ರೂ.138.26ಕೋಟಿ ಇದ್ದು, ವರದಿ ಸಾಲಿನಲ್ಲಿ ಒಟ್ಟು ಆದಾಯ ರೂ.124.40ಕೋಟಿ ಇದ್ದು, ಒಟ್ಟು ಆದಾಯದಲ್ಲಿ ರೂ.13.86ಕೋಟಿ ಕಡಿಮೆಯಾಗಿರುತ್ತದೆ. ಆದಾಗ್ಯೂ ಕಳೆದ ಸಾಲಿಗೆ ಹೋಲಿಸಿದಾಗ ನಿವ್ವಳ ಲಾಭದ ಪ್ರಮಾಣದಲ್ಲಿ ಏರಿಕೆಯಾಗಿದ್ದು, ಇದರ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಕೋರಿದರು.

ಇದಕ್ಕೆ ಬ್ಯಾಂಕಿನ ಮು.ಕಾ.ನಿಯವರಾದ ಶ್ರೀಮತಿ ಭಾಗ್ಯ.ಎಸ್.ರವರು ಕಳೆದ ಸಾಲಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅನುತ್ಪಾದಕ ಸಾಲಗಳಿಗೆ ಅವಕಾಶ ಕಲ್ಪಿಸಿದ್ದರ ಪರಿಣಾಮ ನಿವ್ವಳ ಲಾಭದ ಪ್ರಮಾಣ ಕಡಿಮೆ ಇದ್ದು, ಈ ಬಾರಿ ಅನುತ್ಪಾದಕ ಆಸ್ತಿಗೆ ಅವಕಾಶ ಕಲ್ಪಿಸಿರುವುದಿಲ್ಲ,ಆದರೆ ಹೂಡಿಕೆ ಬೆಲೆ ಏರಿಳಿತ ನಿಧಿಗೆ RBI ನಿಯಮಾನುಸಾರ ಅವಕಾಶ ಕಲ್ಪಿಸಬೇಕಾಗಿದ್ದು ಅದನ್ನು  ನಿವ್ವಳ ಲಾಭ ವಿಲೇವಾರಿಯಿಂದ ಅವಕಾಶ ಕಲ್ಪಿಸಬೇಕಾಗಿರುತ್ತದೆ ಎಂದು ಉತ್ತರಿಸಿದರು.

ನಿವೇಶನಗಳ ಮಾರಾಟದಿಂದ ರೂ.2.43ಕೋಟಿ ಆದಾಯ ಬಂದಿದ್ದು, ಒಟ್ಟಾರೆ ಬ್ಯಾಂಕಿನ ಕಾರ್ಯಾಚರಣೆಯು ತೃಪ್ತಿಕರವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದಕ್ಕೆ ಅಧ್ಯಕ್ಷರಾದ ಹೆಚ್.ಸಿ.ಗೋಪಾಲ್ ರವರು ಕೋವಿಡ್-19 ಮಹಾಮಾರಿಯ ಪರಿಣಾಮ ಸಾಲ ನೀಡುವಿಕೆಯಲ್ಲಿ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿದ್ದು, ಇಂತಹ ಕಷ್ಟಕರ ಸಂದರ್ಭದಲ್ಲಿಯೂ ಸಹ ಶ್ರಮವಹಿಸಿ ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣವನ್ನು ಶೇ 0%ಗೆ ತರಲಾಗಿದೆ ಎಂದು ಉತ್ತರಿಸಿದರು

ಸದಸ್ಯರಾದ ಶ್ರೀ ಯೋಗೇಂದ್ರ ವಿ.ಆರ್. ಸ.ಸಂ.4559 ರವರು ಹಿಂದಿನ ಅಧ್ಯಕ್ಷರಾಗಿದ್ದಂತಹ ಶ್ರೀ ಸಿ.ರಾಮುರವರು ಬ್ಯಾಂಕನ್ನು ಬೆಳೆಸಿದ್ದು ಸದರಿ ಆಡಳಿತ ಮಂಡಳಿಯವರು ಉತ್ತಮವಾಗಿ ನಡೆಸುತ್ತಿರುವುದಾಗಿ

ಅಭಿನಂದನೆ ವ್ಯಕ್ತಪಡಿಸಿದರು ಸದಸ್ಯರುಗಳು ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರುಗಳು ಬ್ಯಾಂಕಿನ ಹಾಗೂ ಸದಸ್ಯರ ಹಿತದೃಷ್ಟಿಯಿಂದ ಸಭಾಭತ್ಯೆಯನ್ನು ಪಡೆಯದೇ ಗೌರವಾನ್ವಿತ ಸೇವೆಯನ್ನು ನೀಡಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಹಾಗೂ ಸದಸ್ಯರಿಗೆ ನೀಡುವ ವೈದ್ಯಕೀಯ ಪರಿಹಾರ ಮೊತ್ತವನ್ನು ಏರಿಕೆ ಮಾಡುವಂತೆ ಕೋರಿದರು ಈ ವಿಷಯವನ್ನು ಮುಂದಿನ ಆಡಳಿತ ಮಂಡಳಿಯ ಸಭೆಯಲ್ಲಿ ಮಂಡಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳುವುದಾಗಿ ತಿಳಿಸಿದರು.

ಇದಕ್ಕೆ ಅಧ್ಯಕ್ಷರಾದ ಶ್ರೀ ಹೆಚ್.ಸಿ.ಗೋಪಾಲ್‌ರವರು ಹಿಂದಿನ ಅಧ್ಯಕ್ಷರಾಗಿದ್ದಂತಹ ಶ್ರೀ ಸಿ.ರಾಮುರವರ ಕಾಲದಿಂದಲೂ ಸಭಾ ಭತ್ಯೆ ಮತ್ತು ಸಾರಿಗೆ ಭತ್ಯೆಯನ್ನು ಪಡೆಯುತ್ತಿದ್ದು, ಸಹಕಾರ ಸಂಘದ ಸುತ್ತೋಲೆಯನ್ವಯ ಸಭಾಭತ್ಯೆ ಮತ್ತು ಸಾರಿಗೆ ಭತ್ಯೆಯನ್ನು ಪಡೆಯುತ್ತಿದ್ದೇವೆ ಎಂದು ಉತ್ತರಿಸಿದರು.

ನಂತರ ಲೆಕ್ಕ ಪರಿಶೋಧನಾ ವರದಿಯನ್ನು ಒಪ್ಪಬಹುದೆಂದು ಶ್ರೀ ಈಶ್ವರ್.ಎನ್ (ಸ.ಸಂ11534) ಸೂಚಿಸಿದರು ಹಾಗೂ ಶ್ರೀ ಅರ್.ಬಿ.ಮಲ್ಲಿಕಾರ್ಜುನಯ್ಯ ರವರು (ಸ.ಸಂ835)ರವರು ಅನುಮೋದಿಸಿದರು. ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ 8:–2021–22ನೇ ಸಾಲಿನಲ್ಲಿ ಮಂಜೂರಾತಿಗಿಂತ ಹೆಚ್ಚಿಗೆ ಖರ್ಚಾಗಿರುವ ಬಾಬ್ತುಗಳನ್ನು ಅಂಗೀಕರಿಸುವುದು ಹಾಗೂ 2022–23ನೇ ಸಾಲಿನ ಅಂದಾಜು ಆಯ–ವ್ಯಯದ ಕರಡಿಗೆ ಮಂಜೂರಾತಿ ನೀಡುವುದು.**

ಬ್ಯಾಂಕಿನ ನಿರ್ದೇಶಕರಾದ ಶ್ರೀಮತಿ ಚಂದ್ರಕಲಾ.ಕೆ.ರವರು 2021–2022ನೇ ಸಾಲಿನಲ್ಲಿ ಮಂಜೂರಾತಿಗಿಂತ ಹೆಚ್ಚಿಗೆ ಖರ್ಚಾಗಿರುವ ಬಾಬ್ತುಗಳನ್ನು ಅವುಗಳಿಗೆ ನೀಡಿರುವ ಕಾರಣಗಳನ್ನು ಪರಿಗಣಿಸಿ ಅಂಗೀಕರಿಸಲು ಹಾಗೂ 2022–23ನೇ ಸಾಲಿನ ಅಂದಾಜು ಆಯ–ವ್ಯಯದ ಕರಡನ್ನು ಸಭೆಯ ಮುಂದೆ ಮಂಡಿಸಿದರು.

**2021–22ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚಿಗೆ ವೆಚ್ಚವಾಗಿರುವ ಬಾಬ್ತುಗಳ ಪಟ್ಟಿ ಹಾಗೂ ವಿವರಣೆ**

| ಕ್ರ. ಸಂ. | ವಿವರಗಳು | 2021–22ನೇ ಸಾಲಿನಲ್ಲಿ ಅನುಮೋದನೆ ಪಡೆದ ಅಂದಾಜು ವೆಚ್ಚ | 2021–22ನೇ ಸಾಲಿನ ವಾಸ್ತವಿಕ ವೆಚ್ಚ | 2021–22ನೇ ಸಾಲಿನ ಅಂದಾಜಿಗಿಂತ ಹೆಚ್ಚಿನ ಖರ್ಚು | ಕಾರಣಗಳು |
|---|---|---|---|---|---|
| 1 | ನಿರ್ದೇಶಕರ ಭತ್ಯೆ ಮತ್ತು ಪ್ರಯಾಣ ಭತ್ಯೆ | 13,50,000.00 | 13,71,000.00 | 21,000.00 | ಹೆಚ್ಚು ಬಾರಿ ಸಭೆ ಸೇರಿದ ಕಾರಣ (ಸುವರ್ಣ ಮಹೋತ್ಸವ ಸಭೆಗಳನ್ನೊಳಗೊಂಡಂತೆ |
| 2 | ಬ್ಯಾಂಕ್ ಕಟ್ಟಡ ಬಾಡಿಗೆ | 7,00,000.00 | 9,07,960.00 | 2,07,960.00 | ಮಹಾಲಕ್ಷ್ಮಿಪುರಂ ಶಾಖೆಯ ಬಾಡಿಗೆ ಸಂಬಂಧದ ದಾವಾ ಇತ್ಯರ್ಥವಾದ ಕಾರಣ |
| 3 | ಸಾಲ ವಸೂಲಾತಿ ಖರ್ಚು | 30,000.00 | 55,108.00 | 25,108.00 | ವಸೂಲಾತಿಗೆ ಹೆಚ್ಚಿನ ಕ್ರಮ ಕೈಗೊಂಡ ಕಾರಣ |
| 4 | ಸದಸ್ಯರ ವೈದ್ಯಕೀಯ ವೆಚ್ಚ | 20,00,000.00 | 27,10,300.00 | 7,10,300.00 | ಸದಸ್ಯರ ಮರಣ ಪರಿಹಾರ ನಿಧಿಗೆ ಅವಕಾಶ ಕಲ್ಪಿಸಿದ ಕಾರಣ |
| 5 | ಸ್ಟ್ಯಾಂಡ್ ಸ್ಟಿಲ್ ಸಾಲದ ಖಾತೆಗಳಿಗೆ ಅವಕಾಶ ಕಲ್ಪಿಸಿದ್ದು | 1,00,00,000.00 | 8,22,02,879.00 | 7,22,02,879.00 | ಹೂಡಿಕೆಯ ಮಾರುಕಟ್ಟೆ ಮೌಲ್ಯ ಕಡಿಮೆ ಆದ ಕಾರಣ |

## 2022–23ನೇ ಸಾಲಿನಲ್ಲಿ ಅಂದಾಜು ವ್ಯಯ ಪಟ್ಟಿ ಹಾಗೂ ವಿವರಣೆ

| ಕ್ರ. ಸಂ. | ವಿವರಗಳು | ಅಂದಾಜು ಖರ್ಚು 2021–2022 | ವಾಸ್ತವಿಕ ವೆಚ್ಚ 2021–2022 | ಅಂದಾಜು ಖರ್ಚು 2022–2023 |
|---|---|---|---|---|
| 1 | ಠೇವಣಿಗಳ ಮೇಲಿನ ಬಡ್ಡಿ | 92,00,00,000.00 | 85,23,10,807.50 | 90,00,00,000.00 |
| 2 | ಸಿಬ್ಬಂದಿ ವೇತನ | 5,95,00,000.00 | 5,46,64,846.86 | 5,95,00,000.00 |
| 3 | ನಿರ್ದೇಶಕರ ಭತ್ಯೆ ಮತ್ತು ಪ್ರಯಾಣ ಭತ್ಯೆ | 13,50,000.00 | 1,371,000.00 | 18,00,000.00 |
| 4 | ಪ್ರತಿನಿಧಿಗಳ ತರಬೇತಿ | 2,00,000.00 | 1,000.00 | 1,00,000.00 |
| 5 | ಬ್ಯಾಂಕ್ ಕಟ್ಟಡ ಬಾಡಿಗೆ | 7,00,000.00 | 9,07,960.00 | 6,00,000.00 |
| 6 | ವಿದ್ಯುತ್ ಮತ್ತು ನೀರು | 22,00,000.00 | 16,22,336.00 | 22,00,000.00 |
| 7 | ಬ್ಯಾಂಕಿನ ಕಟ್ಟಡ ತೆರಿಗೆ | 4,00,000.00 | 2,46,054.00 | 4,00,000.00 |
| 8 | ಠೇವಣಿ ಮತು ಇತರೆ ವಿಮೆ | 1,60,00,000.00 | 1,43,50,167.99 | 1,80,00,000.00 |
| 9 | ಕಟ್ಟಡ ನಿರ್ವಹಣೆ | 10,00,000.00 | 2,33,419.07 | 5,00,000.00 |
| 10 | ವೃತ್ತಿ ತೆರಿಗೆ | 15,000.00 | 12,500.00 | 15,000.00 |
| 11 | ಕಾನೂನು ಸಲಹಾ ವೆಚ್ಚ | 20,00,000.00 | 8,65,000.00 | 20,00,000.00 |
| 12 | ಅಂಚೆ ಮತ್ತು ದೂರವಾಣಿ | 1,225,000.00 | 7,42,228.57 | 12,25,000.00 |
| 13 | ಎಂ.ಪಿ.ಎಲ್.ಎಸ್.ಲೀಸ್ ಲೈನ್ | 5,000,000.00 | 4,105,604.57 | 50,00,000.00 |
| 14 | ಲೆಕ್ಕ ಪರಿಶೋಧನಾ ಶುಲ್ಕ | 15,00,000.00 | 11,22,088.00 | 15,00,000.00 |
| 15 | ಸವಕಳಿ | 1,52,00,000.00 | 92,62,418.65 | 1,50,00,000.00 |
| 16 | ಎನ್.ಪಿ.ಎ.ಗೆ ಕಾದಿರಿಸಿದ್ದು | 61,500,000.00 | 0.00 | 1,00,00,000.00 |
| 17 | ರಿಪೇರಿ ಮತ್ತು ನಿರ್ವಹಣೆ | 2,000,000.00 | 252,965.66 | 10,00,000.00 |
| 18 | ವಾಹನಗಳ ನಿರ್ವಹಣೆ | 6,00,000.00 | 325,267.88 | 5,00,000.00 |
| 19 | ವಾರ್ಷಿಕ ನಿರ್ವಹಣೆ (ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಮತ್ತು ಇತರೆ) | 25,00,000.00 | 1,316,000.00 | 25,00,000.00 |
| 20 | ಮುದ್ರಣ ಲೇಖನಿ ಸಾಮಗ್ರಿಗಳು | 20,00,000.00 | 514,801.93 | 10,00,000.00 |
| 21 | ಜಾಹೀರಾತು ಮತ್ತು ಪ್ರಚಾರ | 10,00,000.00 | 563,291.00 | 10,00,000.00 |
| 22 | ಗಣಕ ಯಂತ್ರ ಸ್ಟೇಷನರಿ | 4,00,000.00 | 1,07,630.24 | 4,00,000.00 |
| 23 | ಮಹಾಮಂಡಳಿ ಚಂದಾ | 5,00,000.00 | 2,14,400.00 | 5,00,000.00 |
| 24 | ಜಿ.ಎಸ್.ಟಿ.ವೆಚ್ಚ | 45,00,000.00 | 37,35,745.62 | 45,00,000.00 |
| 25 | ಪ್ರಯಾಣ ಭತ್ಯೆ | 3,00,000.00 | 12,820.00 | 2,00,000.00 |
| 26 | ಸರ್ವ ಸದಸ್ಯರ ಸಭೆ ಖರ್ಚು | 5,00,000.00 | 3,38,431.08 | 10,00,000.00 |
| 27 | ಆಡಳಿತ ಮಂಡಳಿ ಮತ್ತು ಇತರೆ ಸಭೆಗಳ ವೆಚ್ಚ | 1,50,000.00 | 28,635.00 | 1,00,000.00 |
| 28 | ದಿನ ಪತ್ರಿಕೆ | 40,000.00 | 18,010.00 | 30,000.00 |
| 29 | ಸಾಲ ವಸೂಲಾತಿ ಖರ್ಚು | 30,000.00 | 55,108.00 | 30,000.00 |
| 30 | ಭದ್ರತಾ ಖರ್ಚು | 25,00,000.00 | 21,00,640.00 | 25,00,000.00 |
| 31 | ಇತರೆ ವೆಚ್ಚಗಳು | 10,00,000.00 | 4,83,783.55 | 10,00,000.00 |

| | | | | |
|---|---|---|---|---|
| 32 | ಬ್ಯಾಂಕ್ ಚಾರ್ಜಸ್ | 10,00,000.00 | 7,49,066.43 | 10,00,000.00 |
| 33 | ಪೂಜಾ ಖರ್ಚು | 5,00,000.00 | 2,79,332.13 | 5,00,000.00 |
| 34 | ಸದಸ್ಯರ ವೈದ್ಯಕೀಯ ವೆಚ್ಚ ಮತ್ತು ಮರಣ ಪರಿಹಾರ ನಿಧಿ ವೆಚ್ಚ | 20,00,000.00 | 27,10,300.00 | 20,00,000.00 |
| 35 | ರೂಪೇ ಎ.ಟಿ.ಎಂ.ವೆಚ್ಚ | 1,500,000.00 | 6,84,412.72 | 10,00,000.00 |
| 36 | ಸ್ಟ್ಯಾಂಡ್ ಸ್ಟಿಲ್ ಸಾಲದ ಖಾತೆಗಳಿಗೆ ಅವಕಾಶ ಕಲ್ಪಿಸಿದ್ದು | 1,00,00,000.00 | 8,22,02,879.00 | 5,00,00,000.00 |
| 37 | ಪ್ರಕೃತಿ ವಿಕೋಪ ಪರಿಹಾರ ನಿಧಿ | 10,00,000.00 | 5,00,000.00 | 2,00,000.00 |
| 38 | ನಿವ್ವಳ ಲಾಭ ಆದಾಯ ತೆರಿಗೆಗೆ ಮೊದಲು | 18,00,00,000.00 | 200,586,093.45 | 20,00,00,000.00 |
| 39 | ಚುನಾವಣಾ ವೆಚ್ಚ | 7,00,000.00 | 56,449.00 | 5,00,000.00 |
| 40 | ಆದಾಯ ತೆರಿಗೆ ಪಾವತಿಸಿದ್ದು | – | 7,11,586.00 | 10,00,000.00 |
| 41 | ಐಟಿ ಆಸ್ತಿಗೆ ಅವಕಾಶ ಕಲ್ಪಿಸಿದ್ದು | – | 30,00,000.00 | 25,00,000.00 |
| 42 | ಆಸ್ತಿ ಮಾರಾಟದಿಂದ ಆದ ನಷ್ಟ | – | 722,624.75 | 500,000.00 |
| | ಒಟ್ಟು ರೂ. | 1,30,25,10,000.00 | 1,244,087,704.65 | 1,29,33,00,000.00 |

## 2022–23ನೇ ಸಾಲಿನ ಅಂದಾಜು ಆಯ ಪಟ್ಟಿ ಹಾಗೂ ವಿವರಣೆ

| ಕ್ರ. ಸಂ. | ವಿವರಗಳು | 2021–2022 ಅಂದಾಜು | 2021–2022ರ ವಾಸ್ತವಿಕ | ಅಂದಾಜು 2022–2023 |
|---|---|---|---|---|
| 1 | ಸಾಲಗಳ ಮೇಲಿನ ಬಡ್ಡಿ | 84,00,00,000.00 | 69,08,40,396.23 | 6,45,200,000.00 |
| 2 | ಹೂಡಿಕೆಗಳ ಮೇಲಿನ ಬಡ್ಡಿ | 42,91,90,000.00 | 50,28,25,813.92 | 5,54,200,000.00 |
| 3 | ಕಮಿಷನ್ ಹಾಗೂ ಇತರೆ ಆದಾಯ | 7,00,000.00 | 9,12,438.93 | 1,00,00,000.00 |
| 4 | ಇತರೆ ಆದಾಯಗಳು | 50,00,000.00 | 56,77,997.26 | 2,00,00,000.00 |
| 5 | ಷೇರು ಫೀ | 20,000.00 | 24,35,955.00 | 500,000.00 |
| 6 | ಚಾಲ್ತೀ ಖಾತೆ, ಉಳಿತಾಯ ಖಾತೆ ಆದಾಯ | 2,00,000.00 | 1,36,097.52 | 2,00,000.00 |
| 7 | ಲಾಕರ್ ಬಾಡಿಗೆ | 20,00,000.00 | 19,10,500.00 | 20,00,000.00 |
| 8 | ಹೂಡಿಕೆಗಳ ವ್ಯವಹಾರದಿಂದ ಬಂದ ಲಾಭ | 0.00 | 0.00 | 5,00,00,000.00 |
| 9 | ವಿಮೆ ಕಮಿಷನ್ ಪಡೆದದ್ದು | 4,00,000.00 | 1,24,244.60 | 2,00,000.00 |
| 10 | ಸ್ಟ್ಯಾಂಡ್ ಸ್ಟಿಲ್ ಖಾತೆಗಳ ಅವಕಾಶ ಹಿಂಪಡೆದದ್ದು | 0.00 | 1,40,00,000.00 | 1,00,00,000.00 |
| 11 | ರೂಪೆ ಡೆಬಿಟ್ ಕಾರ್ಡ್‌ನಿಂದ ಬಂದ ಆದಾಯ | 0.00 | 8,31,977.19 | 10,00,000.00 |
| 12 | ಬ್ಯಾಂಕೇತರ ಆಸ್ತಿ ಮಾರಾಟದಿಂದ ಬಂದ ಲಾಭ | 2,50,00,000.00 | 2,43,92,284.00 | 0.00 |
| | ಒಟ್ಟು ರೂ | 1,30,25,10,000.00 | 1,24,40,87,704.65 | 1,29,33,00,000.00 |

2021–2022ನೇ ಸಾಲಿನಲ್ಲಿ ಮಂಜೂರಾತಿಗಿಂತ ಹೆಚ್ಚಿಗೆ ಖರ್ಚಾಗಿರುವ ಬಾಬ್ತುಗಳನ್ನು ಅವುಗಳಿಗೆ ನೀಡಿರುವ ಕಾರಣಗಳನ್ನು ಪರಿಗಣಿಸಿ ಹಾಗೂ 2022–23ನೇ ಸಾಲಿನ ಅಂದಾಜು ಆಯ–ವ್ಯಯದ ಕರಡನ್ನು ಒಪ್ಪಬಹುದೆಂದು

ಸದಸ್ಯರಾದ ಶ್ರೀಮತಿ ಬಿಂಧು.ಎಸ್. ಸ.ಸಂ. 10584 ರವರು ಸೂಚಿಸಿದರು. ಹಾಗೂ ಶ್ರೀಕೃಷ್ಣಪ್ಪಮೂರ್ತಿ (ಸ.ಸಂ.7584) ರವರು ಇದನ್ನು ಅನುಮೋದಿಸಿದರು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ 9: 2021–22ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸುವುದು.**

ಬ್ಯಾಂಕ್ 2021–22ನೇ ಸಾಲಿನಲ್ಲಿ ಒಟ್ಟು ರೂ.20,05,86,093.45 ಗಳ ಲಾಭ ಹೊಂದಿದ್ದು ಅದರಲ್ಲಿ ಆದಾಯ ತೆರಿಗೆ ರೂ.5,38,87,400/– ಗಳನ್ನು ಕಳೆದ ನಂತರ ನಿವ್ವಳ ರೂ.14,66,98,693.45ಗಳ ಲಾಭವನ್ನು ಗಳಿಸಿದ್ದು ಇದರ ವಿಲೇವಾರಿಯನ್ನು ಬ್ಯಾಂಕಿನ ನಿರ್ದೇಶಕರಾದ ಶ್ರೀ ಪಿ.ಮರಿಯಪ್ಪರವರು ಈ ಕೆಳಗಿನಂತೆ ಸಭೆಯ ಮುಂದೆ ಮಂಡಿಸಿದರು.

**2021–22ನೇ ಸಾಲಿನ ನಿವ್ವಳ ಲಾಭ ವಿಲೇವಾರಿ ರೂ.14,66,98,693.45**

| ಕ್ರ. ಸಂ. | ಉಪನಿಯಮ ಸಂಖ್ಯೆ | ನಿಧಿಗಳ ವಿವರ | ಶೇಕಡಾವಾರು |
|---|---|---|---|
| 1 | 109 (1) | ಆಪದ್ಧನ ನಿಧಿ | 3,66,74,673.37 |
| 2 | 109 (2) | ಸಹಕಾರ ಶಿಕ್ಷಣ ನಿಧಿ | 22,00,480.40 |
| 3 | –,,– (ಜಿ) | ಕ.ರಾ.ಪಟ್ಟಣ ಬ್ಯಾಂಕ್‌ಗಳ ನಿಧಿಗೆ | 10,78,235.40 |
| 4 | 109 (3(ಎ) | ಹೋಕು ಬಾಕಿ ನಿಧಿಗೆ (ಕರಡು ಸಾಲದ ನಿಧಿ) | 53,37,265.21 |
| 5 | –,,– (ಬಿ) | ಕಟ್ಟಡ ನಿಧಿಗೆ | 1,06,74,530.43 |
| 6 | –,,– (ಸಿ) | ಸದಸ್ಯರ ಕ್ಷೇಮ ನಿಧಿ | 2,66,863.26 |
| 7 | –,,– (ಡಿ) | ಸದಸ್ಯರ ಮರಣೋತ್ತರ ಪರಿಹಾರ ನಿಧಿಗೆ (ಸಾಮಾಜಿಕ ಕಲ್ಯಾಣ ನಿಧಿ) | 2,66,863.26 |
| 8 | –,,– (ಇ) | ಧರ್ಮದ ನಿಧಿ | 2,66,863.26 |
| 9 | –,,– (ಹೆಚ್) | ಲಾಭಾಂಶ ಸಮೀಕರಣ ನಿಧಿಗೆ (ಡಿವಿಡೆಂಡ್ ಸಮತೋಲನ ನಿಧಿ) | 2,66,863.26 |
| 10 | –,,– (ಐ) | ಹೂಡಿಕೆಗಳ ಬೆಲೆ ಏರಿಳಿತ ನಿಧಿಗೆ | 5,01,68,803.60 |
| 11 | –,,– (ಜೆ) | ಸದಸ್ಯರ ಲಾಭಾಂಶ (ಡಿವಿಡೆಂಡ್)* ಸದಸ್ಯರು ಹೊಂದಿರುವ ಷೇರು ಮೊತ್ತದ ಮೇಲೆ 15% | 3,94,97,252.00 |
| | | ಒಟ್ಟು ರೂ. | 14,66,98,693.45 |

ಈ ಬಾರಿ ಆಡಳಿತ ಮಂಡಳಿ ಸದಸ್ಯರ ಮತ್ತು ಸಿಬ್ಬಂದಿಗಳ ಪರಿಶ್ರಮದಿಂದ ಹೆಚ್ಚಿನ ಲಾಭಗಳಿಸಿದ್ದು ಭಾರತೀಯ ರಿಸರ್ವ್ ಬ್ಯಾಂಕ್ ಡಿವಿಡೆಂಡ್ ಅನ್ನು ಶೇ.10 ರಿಂದ 12ರವರೆಗೆ ನೀಡುವಂತೆ ಸೂಚಿಸಿದ್ದು, ಬ್ಯಾಂಕ್ ಹೆಚ್ಚಿನ ಲಾಭ ಹೊಂದಿರುವುದರಿಂದ ಆಡಳಿತ ಮಂಡಳಿಯು ಶೇ.15 ಡಿವಿಡೆಂಡ್ ಅನ್ನು ನೀಡುವಂತೆ ತೀರ್ಮಾನಿಸಿದ್ದು ಮಹಾಸಭೆಯ ಅನುಮೋದನೆಯನ್ನು ಕೋರಿದರು.

ಸದಸ್ಯರಾದ ಶ್ರೀ ಕೆ.ಪಿ.ಮುತ್ತಯ್ಯರವರು ನಿವ್ವಳ ಲಾಭ ವಿಲೇವಾರಿಯ ವಿವರಗಳಲ್ಲಿ ಉಪನಿಯಮದ ಸಂಖ್ಯೆಯನ್ನು ನಮೂದಿಸಿದ್ದು, ಅದರ ಶೇಕಡಾವಾರುಗಳನ್ನು ಎಷ್ಟು ವಿಲೇವಾರಿಯಾಗಿದೆ ಎಂಬ ಮಾಹಿತಿ ನೀಡಿರುವುದಿಲ್ಲ ಹಾಗೂ ಕಳೆದ ಸಾಲಿನಲ್ಲಿ ವಿಲೇವಾರಿಯಾದ ಹೋಲಿಕೆಯೊಂದಿಗೆ ವಿವರಗಳನ್ನು ನೀಡಬೇಕಿತ್ತು ಹಾಗೂ ಬ್ಯಾಂಕ್ ಹೆಚ್ಚಿನ ಲಾಭ ಗಳಿಸಿದ್ದು, ಡಿವಿಡೆಂಡ್ ಅನ್ನು ಶೇ 18 ರಿಂದ ಶೇ 20 ನೀಡಬಹುದಿತ್ತು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಇದಕ್ಕೆ ಅಧ್ಯಕ್ಷರಾದ ಶ್ರೀ ಹೆಚ್.ಸಿ.ಗೋಪಾಲ್‌ರವರು ಬ್ಯಾಂಕ್ ಸುಸ್ಥಿತಿಯಲ್ಲಿದ್ದಾಗ ಹಿಂದಿನ ವರ್ಷಗಳಲ್ಲಿ ಶೇ 20 ರಿಂದ ಶೇ 23 ರವರೆಗೂ ನೀಡಿದ್ದು, ಇತರೆ ಬ್ಯಾಂಕುಗಳು ಶೇ 8 ರಿಂದ 12 ವರೆಗೆ ಡಿವಿಡೆಂಡ್ ನೀಡುತ್ತಿದ್ದು, ಇತ್ತೀಚಿನ ಬ್ಯಾಂಕಿನ ಪರಿಸ್ಥಿತಿಯಲ್ಲಿ ಶೇ 15 ನೀಡಿರುವುದು ಹೆಚ್ಚಾಗಿದ್ದು, ಕೋವಿಡ್–19ರ ಸಂಕಷ್ಟ ಪರಿಸ್ಥಿತಿಯಲ್ಲಿಯೂ ನಾವು ಆಡಳಿತ ಮಂಡಳಿಯವರು ಶೇ 15 ಡಿವಿಡೆಂಡ್ ನೀಡಲು ತೀರ್ಮಾನಿಸಿದ್ದೇವೆ.

ಮುಂದಿನ ದಿನಗಳಲ್ಲಿ ಹೆಚ್ಚಿನ ಲಾಭ ಗಳಿಸಿದ ಸಂದರ್ಭದಲ್ಲಿ ಹೆಚ್ಚಿನ ಡಿವಿಡೆಂಡ್ ನೀಡಬಹುದು ಎಂದು ಉತ್ತರಿಸಿದರು. ಇದಕ್ಕೆ ಸದಸ್ಯರಾದ ಶ್ರೀ ರಾಮಲಿಂಗಪ್ಪಸ.ಸಂ.4852ರವರು ಬ್ಯಾಂಕ್ ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗದರ್ಶನ, ಸೂಚನೆಗಳನ್ನು ಪಾಲಿಸಬೇಕು, ಆಡಳಿತ ಮಂಡಳಿಯವರು ಬ್ಯಾಂಕಿನ ಹಿತದೃಷ್ಟಿಯಿಂದ ಕಾರ್ಯನಿರ್ವಹಿಸಬೇಕು, ಬ್ಯಾಂಕ್ ಸದೃಢವಾಗಿದ್ದರೆ ಡಿವಿಡೆಂಡ್ ನೀಡುತ್ತದೆ ಇಲ್ಲವಾದರೆ ಇಲ್ಲ, ಕೋವಿಡ್ ಮಹಾಮಾರಿಯ ಸಂಕಷ್ಟದಲ್ಲಿಯೂ ಸಹ ಬ್ಯಾಂಕ್ ಶೇ 15 ಡಿವಿಡೆಂಡ್ ನೀಡುತ್ತಿರುವುದು ಶ್ಲಾಘನೀಯ ಎಂದು ಹರ್ಷ ವ್ಯಕ್ತಪಡಿಸಿದರು.

ಅಧ್ಯಕ್ಷರಾದ ಶ್ರೀ ಹೆಚ್.ಸಿ.ಗೋಪಾಲ್‌ರವರು ಭಾರತೀಯ ರಿಸರ್ವ್ ಬ್ಯಾಂಕಿನವರು ಠೇವಣಿದಾರರಿಗೆ ನೀಡುತ್ತಿರುವ ಬಡ್ಡಿ ದರಕ್ಕಿಂತ 2 ರಿಂದ 3 ಹೆಚ್ಚಿಗೆ ಡಿವಿಡೆಂಡ್ ನೀಡುವಂತೆ ಸೂಚಿಸುತ್ತಾರೆ. ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಡಿವಿಡೆಂಡ್ ನೀಡಲಾಗವುದು ಎಂದು ಮಹಾಸಭೆಗೆ ತಿಳಿಸಿದರು.

ಹಿರಿಯ ನಿರ್ದೇಶಕರಾದ ಶ್ರೀ ಪಿ.ಮರಿಯಪ್ಪರವರು, ಸುಸ್ತಿ/ಅನುತ್ಪಾದಕ ಸಾಲಗಳನ್ನು ವಸೂಲಾತಿ ಮಾಡಿ ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣವನ್ನು ಶೆ.0ಗೆ ತರಲಾಗಿದೆ, ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಸಾಲ ಪಡೆದು, ತಮ್ಮ ಸ್ನೇಹಿತರು ಮತ್ತು ಸಂಬಂಧಿಗಳಿಗೆ ಸಾಲ ಪಡೆಯುವಂತೆ ಶಿಫಾರಸ್ಸು ಮಾಡುವಂತೆ ಕೋರಿದರು. ಸಾಲ ವಿತರಣೆಯ ಪ್ರಮಾಣ ಹೆಚ್ಚಾದರೆ, ಬ್ಯಾಂಕಿನ ಲಾಭ ಗಳಿಕೆಯ ಪ್ರಮಾಣ ಹೆಚ್ಚುತ್ತದೆ, ಇದರಿಂದ ಮುಂದಿನ ದಿನಗಳಲ್ಲಿ ಹೆಚ್ಚಿನ ಡಿವಿಡೆಂಡ್ ನೀಡಬಹದು ಎಂದು ಮಹಾಸಭೆಗೆ ವಿವರಿಸಿದರು.

ಸದಸ್ಯರಾದ ಶ್ರೀ ಪರಮೇಶ್ವರಯ್ಯ ಎಸ್. ಸ.ಸಂ.12677 ರವರು ಮಾತನಾಡುತ್ತಾ, ವಾರ್ಷಿಕ ವರದಿಯ ಪುಸ್ತಕದ ಮುಖಪುಟದಲ್ಲಿ ಬ್ಯಾಂಕಿನ ಸಂಸ್ಥಾಪಕರ ಭಾವಚಿತ್ರ ಪ್ರಕಟಿಸುವಂತೆ ಸಲಹೆ ನೀಡಿದರು. ಹಾಗೂ ಬ್ಯಾಂಕ್ ಸಾಲ ವಸೂಲಾತಿ ಕ್ರಮವಾಗಿ ದಿನಪತ್ರಿಕೆಗಳಲ್ಲಿ ನೋಟಿಸುಗಳನ್ನು ಪ್ರಕಟಿಸುತ್ತಿದ್ದೀರಿ, ಇದು ಒಳ್ಳೆಯ ಬೆಳವಣಿಗೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ನಂತರ ಬ್ಯಾಂಕ್ ರಜತಮಹೋತ್ಸವ ಆಚರಣೆಯ ಸಂದರ್ಭದಲ್ಲಿ ಸದಸ್ಯರಿಗೆ ಬೆಳ್ಳಿ ಲೋಟವನ್ನು ನೆನಪಿನ ಕಾಣಿಕೆಯಾಗಿ ನೀಡಿತ್ತು, ಈ ಬಾರಿ ಸುವರ್ಣ ಮಹೋತ್ಸವ ಆಚರಣೆಯ ಸಂದರ್ಭದಲ್ಲಿ ಬೆಳ್ಳಿ ನಾಣ್ಯವನ್ನು ನೀಡಬಹುದಿತ್ತು ಎಂದು ತಿಳಿಸಿದರು.

ಇದಕ್ಕೆ ಅಧ್ಯಕ್ಷರಾದ ಶ್ರೀ ಹೆಚ್.ಸಿ.ಗೋಪಾಲ್‌ರವರು ಸುವರ್ಣ ಮಹೋತ್ಸವ ಆಚರಣೆಯ ನೆನಪಿಗಾಗಿ ಎಲ್ಲಾ ಸಾಮಾನ್ಯ ಸದಸ್ಯರಿಗೆ ಹೆಚ್ಚುವರಿಯಾಗಿ ರೂ.3000/– ಮುಖ ಬೆಲೆಯ 30 ಷೇರುಗಳನ್ನು ನೀಡಲಾಗಿದೆ ಎಂದು ಉತ್ತರಿಸಿದರು ಇದಕ್ಕೆ ಮಹಾಸಭೆಯು ಹರ್ಷ ವ್ಯಕ್ತಪಡಿಸಿತು.

ಇದಕ್ಕೆ ಶ್ರೀ ಪರಮೇಶ್ವರಯ್ಯ.ಎಸ್. ಈ ಹೆಚ್ಚುವರಿ ಷೇರು ಮೊತ್ತ ಸದಸ್ಯತ್ವ ಮುಕ್ತಾಯವಾದಾಗ ಮಾತ್ರ ದೊರೆಯುತ್ತದೆ, ಇದಕ್ಕೆ ಬದಲಾಗಿ ನೆನಪಿನ ಕಾಣಿಕೆಯನ್ನು ನೀಡಬಹುದಿತ್ತು ಎಂದು ತಿಳಿಸಿದರು. ಬ್ಯಾಂಕ್ ನಾಲ್ಕು ಶಾಖೆಗಳಿಗೆ ಸ್ವಂತ ಕಟ್ಟಡವನ್ನು ಹೊಂದಿದ್ದು, ವಿಜಯನಗರ ಶಾಖೆಗೆ 3500.00 ಚದುರ ಅಡಿಯ ನಿವೇಶನದಲ್ಲಿ ನೂತನ ಕಟ್ಟಡವನ್ನು ನಿರ್ಮಿಸುತ್ತಿದ್ದೀರಿ, ಇದೆ ರೀತಿ ಸುಂಕದಕಟ್ಟೆ ಶಾಖೆಗೂ ಸ್ವಂತ ಕಟ್ಟಡವನ್ನು ಹೊಂದಬೇಕು, ಇದಕ್ಕಾಗಿ ನಮಗೆ ನೀಡಿರುವ ಡಿವಿಡೆಂಡ್ ಹಣದಲ್ಲಿ ಶೇ2 ಅನ್ನು ವರ್ಗಾಯಿಸಿಕೊಳ್ಳಿ ಎಂದು ಸೂಚಿಸಿದರು. ಹಾಗೂ ಒಂದು ಮಹಿಳಾ ಶಾಖೆಯನ್ನು ಹೊಂದುವಂತೆಯೂ ಸಲಹೆ ನೀಡಿದರು. ಇತರೆ ಬ್ಯಾಂಕ್‌ಗಳಲ್ಲಿ ಇರುವಂತೆ ವಿದ್ಯಾಭ್ಯಾಸ ಸಂಸ್ಥೆಗಳು, ಗೃಹ ನಿರ್ಮಾಣ ಸಂಸ್ಥೆಗಳು ಮಾಡುವಂತೆ ಇದರಿಂದ ಸದಸ್ಯರಿಗೆ ಮತ್ತು ಸಿಬ್ಬಂದಿವರ್ಗದವರಿಗೆ ಅನುಕೂಲವಾಗುವುದೆಂದು ತಿಳಿಸಿದರು. ಮುಂದುವರದೆಂತೆ ಶ್ರೀ ಪರಮೇಶ್ವರಯ್ಯ.ಎಸ್. ರವರು ವಿಧಾನ ಸೌಧದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಕ್ಯಾಲೆಂಡರ್ ವರ್ಷಕ್ಕೆ 15 ಸಾಂಧರ್ಭಿಕ ರಜೆಯನ್ನು ನೀಡಲಾಗುತ್ತಿದೆ, ಆದರೆ ಬ್ಯಾಂಕಿನಲ್ಲಿ ಕೇವಲ 10 ಸಾಂದರ್ಭಿಕ ರಜೆಯನ್ನು ನೀಡುತ್ತಿದ್ದೀರಿ, ಹಾಗೂ 1/2 ದಿನ ರಜೆಯನ್ನು ಮಂಜೂರು ಮಾಡುತ್ತಿಲ್ಲ ಎಂದು ಪ್ರಶ್ನಿಸಿದರು. ಹಾಗೂ ಜಾಮೀನು ಸಾಲವನ್ನು ಮಾಸಿಕ ವೇತನ ಪಡೆಯುವಂತಹ ಸದಸ್ಯರಿಗೆ ಮಾತ್ರ ಸಾಲ ನೀಡುವಂತೆಯೂ, ಅಡಮಾನ ಸಾಲದ ಮೇಲಿನ ಬಡ್ಡಿದರವನ್ನು ಕಡಿಮೆಗೊಳಿಸುವಂತೆಯೂ ಕೋರಿದರು.

ಇದಕ್ಕೆ ಅಧ್ಯಕ್ಷರಾದ ಶ್ರೀ ಹೆಚ್.ಸಿ.ಗೋಪಾಲ್‌ರವರು ಸಿಬ್ಬಂದಿಗಳಿಗೆ ರಜೆಯನ್ನು ಬ್ಯಾಂಕಿನ ಉಪನಿಯಮದನ್ವಯ ನೀಡಲಾಗುತ್ತಿದೆ ಎಂದು ಉತ್ತರಿಸಿದರು.

ಸದಸ್ಯರಾದ ಶ್ರೀ ಗಣಪತಯ್ಯ.ಜಿ.ಎನ್.(ಸ.ಸಂ.11245)ರವರು ಕೋವಿಡ್–19 ರ ಪರಿಣಾಮ ಎಲ್ಲಾ ಸದಸ್ಯರೂ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದು, ಹಾಗೂ ಆದಾಯ ತೆರಿಗೆ ಇಲಾಖೆಯವರೂ ಸಹ ಡಿವಿಡೆಂಡ್ ಮೊತ್ತದ ಮೇಲೆ

ತೆರಿಗೆ ಕಡಿತಗೊಳಿಸುವಂತೆ ಘೋಷಿಸಿದ್ದು, ಬ್ಯಾಂಕ್ ಸಹ ತನ್ನ ಲಾಭದ ಮೇಲೆ ಆದಾಯ ತೆರಿಗೆ ಪಾವತಿಸುತ್ತಿದೆ, ನಾವು ಸಹ ತೆರಿಗೆ ಪಾವತಿಸುತ್ತಿದ್ದೇವೆ ಆದ್ದರಿಂದ ಡಿವಿಡೆಂಡ್ ಮೊತ್ತವನ್ನು ಹೆಚ್ಚಿಸುವಂತೆ ಕೋರಿದರು ಅಧ್ಯಕ್ಷರು ಮುಂದಿನ ದಿನಗಳಲ್ಲಿ ತಮ್ಮ ಕೋರಿಕೆಯನ್ನು ಪರಿಶೀಲಿಸಲಾಗುವುದೆಂದು ತಿಳಿಸಿದರು.

ಬ್ಯಾಂಕಿನ ಮಾಜಿ ಉಪಾಧ್ಯಕ್ಷರಾಗಿದ್ದಂತಹ ಶ್ರೀ ಆರ್.ಬಿ.ಮಲ್ಲಿಕಾರ್ಜುನಯ್ಯರವರು ಮಾತನಾಡುತ್ತ ತಾವು 15 ವರ್ಷಗಳ ಕಾಲ ಶ್ರೀ ಸಿ.ರಾಮುರವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು, ಅನಾರೋಗ್ಯದ ನಿಮಿತ್ತ ನಿರ್ದೇಶಕ ಸ್ಥಾನದಿಂದ ನಿವೃತ್ತಿ ಹೊಂದಿರುವುದಾಗಿ ತಿಳಿಸುತ್ತಾ, ವ್ಯವಸ್ಥಾಪನಾ ಸಮಿತಿಯ ಬಗ್ಗೆ ವಿವರಣೆ ಕೋರಿದರು ಹಾಗೂ ಬ್ಯಾಂಕಿನ ಸಾಲ ಮತ್ತು ಠೇವಣಿಯ ಅನುಪಾತ ಶೇ 42 ಇದ್ದು, ಯಾವುದೇ ಆರೋಗ್ಯಕರ ಬ್ಯಾಂಕಿನ ಸಾಲ ಮತ್ತು ಠೇವಣಿಯ ಅನುಪಾತವು ಶೇ 70 ರಿಂದ 72 ಆಗಿರಬೇಕು. ಮುಂದಿನ ಮಹಾಸಭೆಯ ಹೊತ್ತಿಗೆ ಬ್ಯಾಂಕ್ ಈ ಮಟ್ಟಕ್ಕೆ ತಲುಪಲಿ ಎಂದು ಆಶಿಸುತ್ತೇನೆ ಎಂದರು. ಹಿಂದಿನ ಸಾಲಿನಲ್ಲಿ ಕೋವಿಡ್ ಮಹಾಮಾರಿಯ ಸಂಕಷ್ಟವಿತ್ತು, ಆದರೆ ಈ ಸಾಲಿಗೆ ಆ ರೀತಿಯ ಯಾವುದೇ ಕ್ಲಿಷ್ಟಕರ ಪರಿಸ್ಥಿತಿ ಇಲ್ಲ, ಆಡಳಿತ ಮಂಡಳಿಯ ಪ್ರತಿಯೊಬ್ಬ ನಿರ್ದೇಶಕನೂ ತಲಾ ಒಬ್ಬರನ್ನು ಸದಸ್ಯರನ್ನಾಗಿಸಿ, ಸಾಲದ ಪ್ರಸ್ತಾವನೆಗಳನ್ನು ತರಬೇಕು ಇದಕ್ಕಾಗಿ ಎಲ್ಲಾ ನಿರ್ದೇಶಕರು ತಮಗೆ ತಾವೇ ಗುರಿಯನ್ನು ನಿಗದಿಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಮುಂದುವರೆದು ಮಾತನಾಡುತ್ತಾ ನಂತರ ಬ್ಯಾಂಕ್ ಖರೀದಿಸಿರುವ ನಿವೇಶನದ ಸಂಬಂಧ ಮಾತನಾಡುತ್ತ, ಹಾಲಿ ಕೇಂದ್ರ ಕಚೇರಿ ಇರುವ ಸ್ಥಳದ ರಸ್ತೆಯಲ್ಲಿ ನಿವೇಶನ ಖರೀದಿಸಲು 20 ವರ್ಷಗಳಿಂದ ಪ್ರಯತ್ನಿಸಿದ್ದು ಹಾಲಿ ಶ್ರೀ ಹೆಚ್.ಸಿ.ಗೋಪಾಲ್‌ರವರ ಅಧ್ಯಕ್ಷತೆಯಲ್ಲಿ ಇದು ನೆರವೇರಿದೆ ಎಂದು ತಿಳಿಸಿದರು

ನಂತರ 2021–22ನೇ ಸಾಲಿನ ನಿವ್ವಳ ಲಾಭದ ವಿಲೇವಾರಿಯನ್ನು ಒಪ್ಪಬಹುದೆಂದು ಶ್ರೀ ಮಹಾರುದ್ರಪ್ಪ.ಕೆ, ಸ.ಸಂ.12046ರವರು ಸೂಚಿಸಿದರು. ಹಾಗೂ ಶ್ರೀಕೆ.ಪಿ. ಮುತ್ತಯ್ಯ (ಸ.ಸಂ.9957)ರವರು ಅನುಮೋದಿಸಿದರು. ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ 10:– ಬ್ಯಾಂಕಿನ ಉಪನಿಯಮಗಳಿಗೆ ತಿದ್ದುಪಡಿಯನ್ನು ಅನುಮೋದಿಸುವುದು.**

ನಿರ್ದೇಶಕರಾದ ಡಾ.ಪಿ.ಎಲ್.ವೆಂಕಟೇಶಮೂರ್ತಿರವರು ದಿನಾಂಕ 07–10–2021ರಂದು ಸ್ವೀಕೃತವಾಗಿರುವ ಸುತ್ತೋಲೆಯನ್ವಯ ಯಥಾವತ್ತಾಗಿ ಬ್ಯಾಂಕಿನ ಉಪನಿಯಮಕ್ಕೆ ತಿದ್ದುಪಡಿ ಕೈಗೊಳ್ಳಬೇಕಿದ್ದು, ಈ ತಿದ್ದುಪಡಿಗೆ ಮಹಾಸಭೆಯ ಅನುಮೋದನೆ ಅವಶ್ಯಕ ಎಂದು ತಿಳಿಸುತ್ತಾ ಉಪನಿಯಮದ ತಿದ್ದುಪಡಿಯನ್ನು ಈ ಕೆಳಗಿನಂತೆ ಮಹಾ ಸಭೆಯ ಅನುಮೋದನೆಗಾಗಿ ಮಂಡಿಸಿದರು.

| ಉಪ ನಿಯಮ ಸಂಖ್ಯೆ | ಹಾಲಿ ಉಪ ನಿಯಮ | ಪ್ರಸ್ತಾಪಿತ ತಿದ್ದುಪಡಿ | ಷರಾ |
|---|---|---|---|
| 4 | **ಪದಗಳ ಅರ್ಥ ವಿವರಣೆ**<br>(28)ಡೆಲಿಗೇಟ್ ಎಂದರೆ ಇತರ ಸಹಕಾರ ಸಂಘಗಳಲ್ಲಿ ಬ್ಯಾಂಕನ್ನು ಪ್ರತಿನಿಧಿಸುವ ಬ್ಯಾಂಕಿನ ಒಬ್ಬ ನಿರ್ದೇಶಕ | **ಪದಗಳ ಅರ್ಥ ವಿವರಣೆ**<br>(28) "ಡೆಲಿಗೇಟ್ ಎಂದರೆ, ಮಹಾಸಭೆಯಲ್ಲಿ ಭಾಗವಹಿಸುವ ಮತ್ತು ಮತ ಚಲಾಯಿಸುವ ಅಧಿಕಾರದೊಂದಿಗೆ ಇತರ ಸಹಕಾರ ಸಂಘಗಳಲ್ಲಿ ಆ ಸಹಕಾರ ಸಂಘವನ್ನು ಪ್ರತಿನಿಧಿಸಲು ಮತ್ತು ಆತ ಪ್ರತಿನಿಧಿ ಎಂದು ಯಾವುದಕ್ಕೆ ನೇಮಕವಾಗಿರುವನೋ ಆ ಸಹಕಾರ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಲು ಅಥವಾ ಅನುಮೋದಿಸಲು ಅಥವಾ ಬೆಂಬಲಿಸಲು ಮಂಡಳಿಯಿಂದ ನೇಮಕವಾದ ಸಹಕಾರ ಸಂಘದ ನಿರ್ದೇಶಕ | **ಸರ್ಕಾರದ ತಿದ್ದುಪಡಿ ಅಧಿಸೂಚನೆ ಪತ್ರ ದಿನಾಂಕ 07–10–2021ರ ಪ್ರಕಾರ** |

| | | | |
|---|---|---|---|
| 11 | **ಷೇರು ಹಣಕ್ಕಾಗಿ ಅರ್ಜಿ**<br><br>ಷೇರು ಪಡೆಯಲು ಅರ್ಜಿಯನ್ನು ಲಿಖಿತ ಮೂಲಕ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕನಿಗೆ ಸಲ್ಲಿಸತಕ್ಕದ್ದು. ಅಂತಹ ಅರ್ಜಿಯ ಸಹಿತ ಕನಿಷ್ಠ ಹತ್ತು ಷೇರುಗಳ ಪೂರ್ಣ ಮೌಲ್ಯದೊಂದಿಗೆ ಪ್ರತಿ ಷೇರಿಗೆ ಹತ್ತು ರೂಪಾಯಿಗಳಂತೆ ಷೇರು ಶುಲ್ಕವನ್ನು ಮತ್ತು ಇಪ್ಪತ್ತೈದು ರೂಪಾಯಿಗಳ ಪ್ರವೇಶಧನವನ್ನು ಪಾವತಿಸತಕ್ಕದ್ದು. ಅಂಥ ಷೇರು ಅರ್ಜಿಯನ್ನು ಮಂಡಲಿಯು ಅದು ಸ್ವೀಕೃತವಾದ ಎರಡು ತಿಂಗಳೊಳಗೆ ಇತ್ಯರ್ಥಗೊಳಿಸತಕ್ಕದ್ದು. | **ಷೇರು ಹಣಕ್ಕಾಗಿ ಅರ್ಜಿ**<br><br>ಷೇರು ಪಡೆಯಲು ಅರ್ಜಿಯನ್ನು ಲಿಖಿತ ಮೂಲಕ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕನಿಗೆ ಸಲ್ಲಿಸತಕ್ಕದ್ದು. ಅಂತಹ ಅರ್ಜಿಯ ಸಹಿತ ಕನಿಷ್ಠ ಹತ್ತು ಷೇರುಗಳ ಪೂರ್ಣ ಮೌಲ್ಯದೊಂದಿಗೆ ಪ್ರತಿ ಷೇರಿಗೆ ಹತ್ತು ರೂಪಾಯಿಗಳಂತೆ ಷೇರು ಶುಲ್ಕವನ್ನು ಮತ್ತು ಇಪ್ಪತ್ತೈದು ರೂಪಾಯಿಗಳ ಪ್ರವೇಶ ಧನವನ್ನು ಪಾವತಿಸತಕ್ಕದ್ದು. ಅಂಥ ಷೇರು ಅರ್ಜಿಯನ್ನು ಮಂಡಲಿಯು ಅದು ಸ್ವೀಕೃತವಾದ ಎರಡು ತಿಂಗಳೊಳಗೆ ಇತ್ಯರ್ಥಗೊಳಿಸತಕ್ಕದ್ದು.<br><br>ಕಾಯ್ದೆ ಕಲಂ 22ರಲ್ಲಿ ನಮೂದಿಸಿದ ಘಟಕಗಳನ್ನು ಹೊರತುಪಡಿಸಿ ಬ್ಯಾಂಕಿನ ಯಾವುದೇ ಸದಸ್ಯನ ಒಟ್ಟು ಷೇರು ಮೊಬಲಗು ಬ್ಯಾಂಕಿನ ಒಟ್ಟು ಷೇರು ಬಂಡವಾಳದಲ್ಲಿ ಶೇಕಡ ಐದರಷ್ಟನ್ನು ಮೀರತಕ್ಕದ್ದಲ್ಲ. | –,,– |
| 14 | **ಷೇರು ವರ್ಗಾವಣೆ ಶುಲ್ಕ:–**<br><br>(1)ಸದಸ್ಯರು ತಮ್ಮ ಷೇರುಗಳನ್ನು ಬ್ಯಾಂಕಿನ ಇತರ ಸದಸ್ಯರಿಗೆ ವರ್ಗಾಯಿಸಲು ಮಂಡಲಿಗೆ ಅರ್ಜಿ ಸಲ್ಲಿಸಬಹುದು. ಇಂತಹ ವರ್ಗಾವಣೆ ಆಗುವ ಪ್ರತಿ ಷೇರಿಗೆ ಕನಿಷ್ಠ ಹತ್ತು(10) ರೂಪಾಯಿ ಹಾಗೂ ಗರಿಷ್ಠ ನೂರು(100) ಗಳಿಗೆ ಮೀರದಂತೆ ಶುಲ್ಕವನ್ನು ವರ್ಗಾವಣೆ ಮಾಡುವ ಸದಸ್ಯನಿಂದ ಪಡೆಯತಕ್ಕದ್ದು. ಷೇರು ವರ್ಗಾವಣೆ ಮಾಡುವ ಸದಸ್ಯನು ವರ್ಗಾವಣೆ ಮಾಡಲಾಗುವ ಷೇರುಗಳನ್ನು ಪಡೆದು ಕನಿಷ್ಠ ಮೂರು(3) ವರ್ಷ ಆಗಿರತಕ್ಕದ್ದು ಮತ್ತು ಷೇರು ವರ್ಗಾವಣೆಗಾಗಿ ಸಲ್ಲಿಸುವ ಲಿಖಿತ ಅರ್ಜಿಯನ್ನು ಷೇರು ಪ್ರಮಾಣ ಪತ್ರ, ಷೇರುಗಳನ್ನು ಪಡೆಯುವವನಿಂದ ಒಪ್ಪಿಗೆ ಹಾಗೂ ನಿಗದಿತ ವರ್ಗಾವಣೆ ಶುಲ್ಕದೊಂದಿಗೆ ಸಲ್ಲಿಸತಕ್ಕದ್ದು. ಮಂಡಲಿಯು ಆ ವರ್ಗಾವಣೆ ಒಪ್ಪುವವರೆಗೂ ಹಾಗೂ ಬ್ಯಾಂಕಿನ | (1)ಸದಸ್ಯರು ತಮ್ಮ ಷೇರುಗಳನ್ನು ಬ್ಯಾಂಕಿನ ಇತರ ಸದಸ್ಯರಿಗೆ ವರ್ಗಾಯಿಸಲು ಮಂಡಲಿಗೆ ಅರ್ಜಿ ಸಲ್ಲಿಸಬಹುದು. ಇಂತಹ ವರ್ಗಾವಣೆ ಆಗುವ ಪ್ರತಿ ಷೇರಿಗೆ ಐದು(5) ರೂಪಾಯಿಗಳ ಪ್ರಕಾರ ವರ್ಗಾವಣೆ **ಶುಲ್ಕವನ್ನು ಷೇರು ವರ್ಗಾವಣೆ ಪಡೆಯುವ ಸದಸ್ಯರುಗಳಿಂದ ಪಡೆಯತಕ್ಕದ್ದು.** ಷೇರು ವರ್ಗಾವಣೆ ಮಾಡುವ ಸದಸ್ಯನು ವರ್ಗಾವಣೆ ಮಾಡಲಾಗುವ ಷೇರುಗಳನ್ನು ಪಡೆದು ಕನಿಷ್ಠ ಮೂರು(3) ವರ್ಷ ಆಗಿರತಕ್ಕದ್ದು ಮತ್ತು ಷೇರು ವರ್ಗಾವಣೆಗಾಗಿ ಸಲ್ಲಿಸುವ ಲಿಖಿತ ಅರ್ಜಿಯನ್ನು ಷೇರು ಪ್ರಮಾಣ ಪತ್ರ, ಷೇರುಗಳನ್ನು ಪಡೆಯುವವನಿಂದ ಒಪ್ಪಿಗೆ ಹಾಗೂ ನಿಗದಿತ ವರ್ಗಾವಣೆ ಶುಲ್ಕದೊಂದಿಗೆ ಸಲ್ಲಿಸತಕ್ಕದ್ದು. ಮಂಡಲಿಯು ಆ ವರ್ಗಾವಣೆ ಒಪ್ಪುವವರೆಗೂ ಹಾಗೂ ಬ್ಯಾಂಕಿನ ಪುಸ್ತಕದಲ್ಲಿ ಆ ಬಗ್ಗೆ ನೋಂದಣಿ ಆಗುವವರೆಗೂ ಷೇರು ವರ್ಗಾವಣೆ ಕ್ರಮಬದ್ಧವಾಗುವುದಿಲ್ಲ. ಷೇರು ವರ್ಗಾವಣೆದಾರನು ಉಪವಿಧಿಗಳಲ್ಲಿ ಸೂಚಿಸಿರುವ ಷರತ್ತುಗಳನ್ನು ಪಾಲಿಸದಿದ್ದಲ್ಲಿ, ಮಂಡಲಿಯು ಈ ಷೇರು ವರ್ಗಾವಣೆಯನ್ನು ತಿರಸ್ಕರಿಸಬಹುದು. | |

| | | | |
|---|---|---|---|
| | ಪುಸ್ತಕದಲ್ಲಿ ಆ ಬಗ್ಗೆ ನೋಂದಣಿ ಆಗುವವರೆಗೂ ಷೇರು ವರ್ಗಾವಣೆ ಕ್ರಮಬದ್ಧವಾಗುವುದಿಲ್ಲ. ಷೇರು ವರ್ಗಾವಣೆದಾರನು ಉಪವಿಧಿಗಳಲ್ಲಿ ಸೂಚಿಸಿರುವ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಮಂಡಲಿಯು ಈ ಷೇರು ವರ್ಗಾವಣೆಯನ್ನು ತಿರಸ್ಕರಿಸ ಬಹುದು.<br><br>**ಟಿಪ್ಪಣಿ:ಹೀಗೆ ವರ್ಗಾಯಿಸಲ್ಪಟ್ಟ ಷೇರು ಬೆಲೆಯನ್ನು ನಿಯಮ 11ರ ಪ್ರಕಾರ ಲೆಕ್ಕ ಹಾಕಲಾಗಿತ್ತದೆ.** | **ಟಿಪ್ಪಣಿ:ಹೀಗೆ ವರ್ಗಾಯಿಸಲ್ಪಟ್ಟ ಷೇರು ಬೆಲೆಯನ್ನು ನಿಯಮ 11ರ ಪ್ರಕಾರ ಲೆಕ್ಕ ಹಾಕಲಾಗಿತ್ತದೆ.** | |
| **18** | **ಸದಸ್ಯನ ಕರ್ತವ್ಯಗಳು** | **ಸದಸ್ಯನ ಕರ್ತವ್ಯಗಳು** | |
| | ಬ್ಯಾಂಕಿನ ಯಾರೇ ಸದಸ್ಯನು–<br><br>(i) ಬ್ಯಾಂಕಿನ ಅಥವಾ ಅದರ ಹಣಕಾಸು ಸಂಸ್ಥೆಯ ನೌಕರನಾಗಿರತಕ್ಕದ್ದಲ್ಲ. | ಬ್ಯಾಂಕಿನ ಯಾರೇ ಸದಸ್ಯನು–<br><br>(i) ಬ್ಯಾಂಕಿನ ಅಥವಾ ಅದರ ಹಣಕಾಸು ಸಂಸ್ಥೆಯ ಅಥವಾ ಅದರ ಒಕ್ಕೂಟ ಅಥವಾ ಅದರ ಸಂಯುಕ್ತ ಸಂಘದ ನೌಕರನಾಗಿರತಕ್ಕದ್ದಲ್ಲ. | –,,– |
| 18(v) | ಸಾಮಾನ್ಯವಾಗಿ ಬ್ಯಾಂಕಿನ ಪ್ರತಿಯೊಂದು ಸಾಮಾನ್ಯ ಸಭೆಗೆ ಹಾಜರಾಗತಕ್ಕದ್ದು. ಆದರೆ, ಕಳೆದ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಮೂರು ಸಭೆಗಳಿಗೆ ಹಾಜರಾಗುವುದು ಕಡ್ಡಾಯವಾಗಿರತಕ್ಕದ್ದು. | ಸಾಮಾನ್ಯವಾಗಿ ಬ್ಯಾಂಕಿನ ಪ್ರತಿಯೊಂದು ಸಾಮಾನ್ಯ ಸಭೆಗೆ ಹಾಜರಾಗತಕ್ಕದ್ದು. ಆದರೆ, ಕಳೆದ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಎರಡು ಸಭೆಗಳಿಗೆ ಹಾಜರಾಗುವುದು ಕಡ್ಡಾಯವಾಗಿರತಕ್ಕದ್ದು. | –,,– |
| 19 | ಸದಸ್ಯನ ಹಕ್ಕುಗಳು ಮತ್ತು ಹೊಣೆಗಾರಿಕೆಗಳು<br><br>3) ಬ್ಯಾಂಕಿನ ಸದಸ್ಯನು ಹಿಂದಿನ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ 3 ಸಭೆಗಳಿಗೆ ಹಾಜರಾಗದಿದ್ದಲ್ಲಿ ಅಥವಾ ಮೂರು ನಿರಂತರ ಸಹಕಾರ ವರ್ಷಗಳ ವರೆಗೆ ಈ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿ ದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪ್ರತಿವರ್ಷ ಬಳಸಿ ಕೊಳ್ಳಲು ತಪ್ಪಿದ್ದಲ್ಲಿ, ಅಂತ ಸದಸ್ಯನು ಮೂರು ವರ್ಷಗಳ ಅವಧಿಗೆ ಸಾಮಾನ್ಯ ಸಭೆಯಲ್ಲಿ | ಸದಸ್ಯನ ಹಕ್ಕುಗಳು ಮತ್ತು ಹೊಣೆಗಾರಿಕೆಗಳು<br><br>3) ಬ್ಯಾಂಕಿನ ಒಬ್ಬ ಸದಸ್ಯನು ಯುಕ್ತವಾಗಿ ತಿಳಿಸಲಾದ ಕಳೆದ ಐದು ವಾರ್ಷಿಕ ಮಹಾಸಭೆಗಳ ಪೈಕಿ ಕನಿಷ್ಠ ಯಾವುದೇ ಎರಡು ವಾರ್ಷಿಕ ಮಹಾಸಭೆಗೆ ಹಾಜರಾಗದಿದ್ದಲ್ಲಿ ಅಥವಾ ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಕ್ಕಾಗಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ್ದಲ್ಲಿ ಅಂಥ ಸದಸ್ಯನು ಒಂದು ವರ್ಷಗಳವರೆಗೆ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕನ್ನು ಹಾಗೂ ನಿರ್ದೇಶಕರ | –,,– |

| | | | |
|---|---|---|---|
| | ಮತ ನೀಡುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ. | ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ. | |
| 47 | (3) ಯಾವುದೇ ಸುಸ್ತಿದಾರ ಸದಸ್ಯನಿಗೆ ಮತ ನೀಡುವ ಹಕ್ಕು ಇರತಕ್ಕದ್ದಲ್ಲ. ಸಾಮಾನ್ಯ ಸಭೆಯ/ ಚುನಾವಣೆಯ ದಿನಾಂಕದಿಂದ ಕನಿಷ್ಠ 45 ದಿನಗಳ ಮುಂಚೆ ಬ್ಯಾಂಕಿಗೆ ಬರಬೇಕಿರುವ ಯಾವುದೇ ತರಹದ ಸುಸ್ತಿ ಬಾಕಿಯನ್ನು/ಇನ್ನಾವುದೇ ಬಾಕಿಯನ್ನು ತೀರುವಳಿ ಮಾಡಲು ನೋಟೀಸನ್ನು ಕೊಟ್ಟು ಅಂತಹ ಸದಸ್ಯನು ಸಭಾ/ಚುನಾವಣಾ ದಿನಾಂಕದಿಂದ ಕನಿಷ್ಠ 15 ದಿನಗಳಿಗೆ ಮುಂಚಿತವಾಗಿ ಅಂತಹ ಬಾಕಿಯನ್ನು ಪಾವತಿ ಮಾಡಲು ತಪ್ಪಿದಲ್ಲಿ, ಅಂತಹ ಬಾಕಿದಾರನು ಸುಸ್ತಿದಾರನೆಂದು ಪರಿಗಣಿಸತಕ್ಕದ್ದು ಮತ್ತು ಅವನಿಗೆ ಓಟು ಮಾಡುವ ಹಕ್ಕು ಇರುವುದಿಲ್ಲ. | (3) ಯಾವುದೇ ಸುಸ್ತಿದಾರ ಸದಸ್ಯನಿಗೆ ಮತ ನೀಡುವ ಹಕ್ಕು ಇರತಕ್ಕದ್ದಲ್ಲ. ಸಾಮಾನ್ಯ ಸಭೆಯ/ ಚುನಾವಣೆಯ ದಿನಾಂಕದಿಂದ ಕನಿಷ್ಠ 45 ದಿನಗಳ ಮುಂಚೆ ಬ್ಯಾಂಕಿಗೆ ಬರಬೇಕಿರುವ ಯಾವುದೇ ತರಹದ ಸುಸ್ತಿ ಬಾಕಿಯನ್ನು/ಇನ್ನಾವುದೇ ಬಾಕಿಯನ್ನು ತೀರುವಳಿ ಮಾಡಲು ನೋಟೀಸನ್ನು ಕೊಟ್ಟು ಅಂತಹ ಸದಸ್ಯನು ಸಭಾ/ಚುನಾವಣಾ ದಿನಾಂಕದಿಂದ ಕನಿಷ್ಠ 21 ದಿನಗಳಿಗೆ ಮುಂಚಿತವಾಗಿ ಅಂತಹ ಬಾಕಿಯನ್ನು ಪಾವತಿ ಮಾಡಲು ತಪ್ಪಿದಲ್ಲಿ, ಅಂತಹ ಬಾಕಿದಾರನು ಸುಸ್ತಿದಾರನೆಂದು ಪರಿಗಣಿಸತಕ್ಕದ್ದು ಮತ್ತು ಅವನಿಗೆ ಓಟು ಮಾಡುವ ಹಕ್ಕು ಇರುವುದಿಲ್ಲ. | –,,– |
| 47 | **ಮತ ನೀಡಿಕೆ**<br>5) ಈ ಕೆಳಕಂಡ ಸದಸ್ಯರಿಗೆ ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ/ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕಿರುವುದಿಲ್ಲ. | **ಮತ ನೀಡಿಕೆ**<br>5) ಈ ಕೆಳಕಂಡ ಸದಸ್ಯರಿಗೆ ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ/ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕಿರುವುದಿಲ್ಲ. | –,,– |
| (ಇ) | ಕಳೆದ 5 ಸಾಮಾನ್ಯ ಸಭೆಗಳ ಪೈಕಿ ಮೂರು ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಸದಸ್ಯರಿಗೆ ಮೂರು ವರ್ಷಗಳ ಅವಧಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ | ಯುಕ್ತವಾಗಿ ತಿಳಿಸಲಾದ 5 ಸಾಮಾನ್ಯ ಸಭೆಗಳ ಪೈಕಿ ಎರಡು ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಸದಸ್ಯರಿಗೆ ಒಂದು ವರ್ಷಗಳವರೆಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ. | –,,– |
| (ಎಫ್) | ಮೂರು ನಿರಂತರ ಸಹಕಾರ ವರ್ಷಗಳಿಗೆ ಬ್ಯಾಂಕಿನ ಉಪವಿಧಿಗಳಲ್ಲಿ ಪ್ರತಿ ವರ್ಷದಲ್ಲಿ ಒಬ್ಬ ಸದಸ್ಯನು ಬಳಸಿಕೊಳ್ಳಲು ನಿರ್ದಿಷ್ಟಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಸದಸ್ಯರಿಗೆ ಮೂರು ವರ್ಷಗಳ ಅವಧಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ. | ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಲ್ಲಿ ಸದಸ್ಯನು ತನ್ನ ಖಾತೆಯಲ್ಲಿ ಬ್ಯಾಂಕಿನ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಸದಸ್ಯರಿಗೆ ಒಂದು ವರ್ಷದ ಅವಧಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ. | –,,– |

| | | | |
|---|---|---|---|
| 58 | **ಮಂಡಲಿಯ ತೆರವಾದ ಸ್ಥಾನಗಳು**<br><br>1)ಮಂಡಲಿಯ ಉಳಿದ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ, ಸಹಕಾರ ಚುನಾವಣಾ ಪ್ರಾಧಿಕಾರ ನಿರ್ದೇಶಕರ ಪದದಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವ ಜವಾಬ್ದಾರಿ ಹೊಂದತಕ್ಕದ್ದು. | ಮಂಡಲಿಯ ಉಳಿದ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ, ಸಹಕಾರ ಚುನಾವಣಾ ಪ್ರಾಧಿಕಾರ ನಿರ್ದೇಶಕರ ಪದದಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವ ಜವಾಬ್ದಾರಿ ಹೊಂದಿರತಕ್ಕದ್ದು. ಪರಂತು ಮಂಡಳಿಯ ಅಂತಹ ಖಾಲಿ ಸ್ಥಾನಕ್ಕಾಗಿ ಚುನಾವಣೆ ನಡೆಯುವವರೆಗೆ, ಉದ್ಭವವಾಗುವ ತಾತ್ಕಾಲಿಕ ಸ್ಥಾನಕ್ಕೆ ಸಂಬಂಧಿಸಿದಂತೆ, ಅದೇ ವರ್ಗದ ಸದಸ್ಯರ ಪೈಕಿ ನಾಮನಿರ್ದೇಶನದ ಮೂಲಕ ಮಂಡಳಿಯ ತಾತ್ಕಾಲಿಕ ಸ್ಥಾನವನ್ನು ಭರ್ತಿ ಮಾಡಬಹುದು. | –,,– |
| 68 | **ನೌಕರರ ಸೇವಾ ಷರತ್ತುಗಳು** | | |
| (5)(ii) | **ಸಾಂದರ್ಭಿಕ ರಜೆ** | | |
| | ಒಂದು ಕ್ಯಾಲೆಂಡರ್ ವರ್ಷದಲ್ಲಿ ಒಬ್ಬ ನೌಕರನಿಗೆ ಹದಿನೈದು ದಿನಗಳ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಬಹುದು. ಸಾಂದರ್ಭಿಕ ರಜೆಯನ್ನು ವರ್ಷದಿಂದ ವರ್ಷಕ್ಕೆ ಒಟ್ಟುಗೂಡಿಸಿ ಕೊಳ್ಳತಕ್ಕದ್ದಲ್ಲ ಅಥವಾ ಮುಂದಕ್ಕೊ ಯ್ಯಲಾಗತಕ್ಕದ್ದಲ್ಲ, ಸಾಮಾನ್ಯವಾಗಿ ಒಂದು ಸಲಕ್ಕೆ, ಮಧ್ಯಂತರದಲ್ಲಿ ರಜೆಗಳು ಸಾರ್ವತ್ರಿಕ ರಜೆಗಳು ಸೇರಿದಂತೆ, ಏಳು ದಿನಗಳಿಗಿಂತ ಹೆಚ್ಚಾಗಿ ಸಾಂದರ್ಭಿಕ ರಜೆಯನ್ನು ಅನುಮತಿಸತಕ್ಕುದಲ್ಲ. | ಒಂದು ಕ್ಯಾಲೆಂಡರ್ ವರ್ಷದಲ್ಲಿ ಒಬ್ಬ ನೌಕರನಿಗೆ ಹತ್ತು ದಿನಗಳ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಬಹುದು. ಸಾಂದರ್ಭಿಕ ರಜೆಯನ್ನು ವರ್ಷದಿಂದ ವರ್ಷಕ್ಕೆ ಒಟ್ಟುಗೂಡಿಸಿಕೊಳ್ಳತಕ್ಕದ್ದಲ್ಲ ಅಥವಾ ಮುಂ ದಕ್ಕೊಯ್ಯಲಾಗತಕ್ಕದ್ದಲ್ಲ, ಸಾಮಾನ್ಯವಾಗಿ ಒಂದು ಸಲಕ್ಕೆ, ಮಧ್ಯಂತರದಲ್ಲಿ ರಜೆಗಳು ಸಾರ್ವತ್ರಿಕ ರಜೆಗಳು ಸೇರಿದಂತೆ, ಮೂರು ದಿನಗಳಿಗಿಂತ ಹೆಚ್ಚಾಗಿ ಸಾಂದರ್ಭಿಕ ರಜೆಯನ್ನು ಅನುಮತಿಸತಕ್ಕುದಲ್ಲ. | **ಸಿಬ್ಬಂದಿ ಸೇವಾ ನಿಯಮಗಳ ರೀತ್ಯಾ** |
| (5)(iii)(ಇ) | **ರಜೆ ನಗದೀಕರಣ** | | |
| | ಒಂದು ಬ್ಲಾಕ್ ಅವಧಿಯ ಎರಡು ವರ್ಷದಲ್ಲಿ ಒಂದು ಸಲ ನೌಕರನು 30 ದಿನಗಳವರೆಗೆ ರಜೆ ನಗದೀಕರಣಕ್ಕಾಗಿ ನಗದೀಕರಿಸಲು ಒಪ್ಪಲು ಅನುಮತಿಸಬಹುದು. | ಒಂದು ಬ್ಲಾಕ್ ಅವಧಿಯ ಒಂದು ವರ್ಷದಲ್ಲಿ ಒಂದು ಸಲ ನೌಕರನು 15 ದಿನಗಳವರೆಗೆ ರಜೆ ನಗದೀಕರಣಕ್ಕಾಗಿ ನಗದೀಕರಿಸಲು ಒಪ್ಪಲು ಅನುಮತಿಸಬಹುದು. | –,,– |
| (5)(v) | ಅರ್ಧವೇತನ ರಜೆ | | |

| | | | |
|---|---|---|---|
| ಎ, ಬಿ, ಸಿ, ಡಿ, ಇ ಎಫ್ | ಅರ್ಧ ವೇತನ ರಜೆ ಬಗ್ಗೆ | ತೆಗೆಯಲಾಗಿದೆ. | **ಬ್ಯಾಂಕಿನಿಂದ ಸಿಬ್ಬಂದಿಯವರಿಗೆ ವಿವಿಧ ರೀತಿಯ ರಜೆಗಳನ್ನು ನೀಡಲಾಗುತ್ತಿದ್ದು, ಬ್ಯಾಂಕಿನ ಹಿತದೃಷ್ಟಿಯಿಂದ ಮತ್ತು ಸಿಬ್ಬಂದಿ ಸೇವಾನಿಯಮಗಳ ಪ್ರಕಾರ ಈ ಬಗೆಯ ರಜೆಯನ್ನು ಸದ್ಯ ತೆಗೆಯಲಾಗಿದೆ.** |
| (5) vii) | **ವೇತನ ರಹಿತ ರಜೆ** | | |
| | ವೇತನ ರಹಿತ ರಜೆ ಬಗ್ಗೆ | ತೆಗೆಯಲಾಗಿದೆ | **–,,–** |

ಬ್ಯಾಂಕಿನ ಉಪನಿಯಮಗಳಿಗೆ ಪ್ರಸ್ತಾವಿತ ತಿದ್ದುಪಡಿಯನ್ನು ಒಪ್ಪಬಹುದೆಂದು ಸದಸ್ಯರಾದ ಶ್ರೀ ಮಹಾರುದ್ರಪ್ಪ. ಕೆ ಸ.ಸಂ.12046) ರವರು ಸೂಚಿಸಿದರು. ಇದಕ್ಕೆ ಸದಸ್ಯರಾದ ಶ್ರೀ ಶಿವಶಂಕರ್ ಹೆಚ್.ಸಿ. ಸ.ಸಂ 1530 ರವರು ಅನುಮೋದಿಸಿದರು.

**<u>ವಿಷಯ 11:–ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಹಾಗೂ ಸದಸ್ಯತ್ವ ಸಮಾಪನೆ ಮಾಡಿದ ಸದಸ್ಯರ ಪಟ್ಟಿಯ ಅನುಮೋದನೆ.</u>**

ವರದಿ ಸಾಲಿನಲ್ಲಿ ಒಟ್ಟು 406 ಸಾಮಾನ್ಯ ಸದಸ್ಯರು, 02 ಸಹ–ಸದಸ್ಯರು ಸೇರಿ ಒಟ್ಟು 408 ಸದಸ್ಯರುಗಳನ್ನು ಸೇರಿಸಿಕೊಂಡಿರುವ ಪಟ್ಟಿಯನ್ನು ಹಾಗೂ 1391 ಸಾಮಾನ್ಯ ಸದಸ್ಯರುಗಳ ಹಾಗೂ 230 ಸಹ–ಸದಸ್ಯರುಗಳ ಸದಸ್ಯತ್ವವನ್ನು ಮುಕ್ತಾಯಗೊಳಿಸಿರುವ ಪಟ್ಟಿಯನ್ನು ನಿರ್ದೇಶಕರಾದ ಶ್ರೀ ಚಂದ್ರಮೌಳಿರವರು.ಎಸ್.ರವರು ಮಹಾಸಭೆಯ ಅನುಮೋದನೆಗಾಗಿ ಮಂಡಿಸಿದರು.

ಸದಸ್ಯರಾದ ಶ್ರೀಕೃಷ್ಣಯ್ಯ ಸ.ಸಂ.10625 ರವರು ನಾವು ನಮ್ಮ ಖಾತೆಗಳಿಗೆ ಜೇವಣಿ ಮಾಡುವ ಚೆಕ್ಕುಗಳ ವ್ಯವಹಾರಕ್ಕೆ, ಸಂಬಂಧಿಸಿದಂತೆ, ಖಾತೆಗಳಲ್ಲಿ ಹೊಂದಿರುವ ಶಿಲ್ಕಿಗೆ ಸಂಬಂಧಿಸಿದಂತೆ ಎಸ್.ಎಂ.ಎಸ್. ಬರುತ್ತದೆ ಹಾಗೆಯೇ ನಮ್ಮ ಖಾತೆಗಳಿಂದ ಹಣ ಪಡೆಯಲು ಚೆಕ್ಕುಗಳನ್ನು ನೀಡಿದಂತಹ ತೀರುವಳಿ ಆಗುವ ಮೊದಲೇ ಎಸ್.ಎಂ.ಎಸ್ ಬಂದಲ್ಲಿ ನಮಗೆ ಅನುಕೂಲವಾಗುತ್ತದೆ ಎಂದು ಕೋರಿದರು, ಈ ಸಂದರ್ಭದಲ್ಲಿ ಖಾತೆಗಳಲ್ಲಿ ಸಾಕಷ್ಟು ಶಿಲ್ಕು ಇಲ್ಲದಿರುವಂತಹ ಸಂದರ್ಭದಲ್ಲಿಯೂ ಸಹ ಎಸ್.ಎಂ.ಎಸ್ ಮೂಲಕ ಮಾಹಿತಿ ನೀಡಬೇಕು ಎಂದು ಕೋರಿದರು.

ಇದಕ್ಕೆ ಉತ್ತರಿಸುತ್ತಾ ಮು.ಕಾ.ನಿಯವರಾದ ಶ್ರೀಮತಿ ಭಾಗ್ಯ.ಎಸ್.ರವರು ಮುಂದಿನ ದಿನಗಳಲ್ಲಿ ಈ ಸೇವೆಯನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿದರು.

2021–2022ನೇ ಸಾಲಿನಲ್ಲಿ ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಹಾಗೂ ಸದಸ್ಯತ್ವ ಸಮಾಪನೆ ಮಾಡಿದ ಸದಸ್ಯರ ಪಟ್ಟಿಯನ್ನು ಒಪ್ಪಬಹುದೆಂದು ಸದಸ್ಯರಾದ ಶ್ರೀರಮೇಶ್, ಸ.ಸಂ 5292ರವರು ಸೂಚಿಸಿದರು. ಇದಕ್ಕೆ ಸದಸ್ಯರಾದ ಶ್ರೀ ರವೀಂದ್ರನಾಥ್ ಸ.ಸಂ.10828 ರವರು ಅನುಮೋದಿಸಿದರು.

**<u>ವಿಷಯ 12:–ಬ್ಯಾಂಕ್ ತನ್ನ ನಿಧಿಗಳನ್ನು ಕಲಂ 58ರ ಪ್ರಕಾರ ತೊಡಗಿಸಲು ಅನುಮತಿ ನೀಡುವುದು.</u>**

ಬ್ಯಾಂಕ್ ತಾನು ಹೊಂದಿರುವ ಹೆಚ್ಚುವರಿ ನಿಧಿಗಳನ್ನು ಕಲಂ 58ರ ಪ್ರಕಾರ ಲಾಭದಾಯಕವಾಗಿ ವಾಣಿಜ್ಯ ಬ್ಯಾಂಕುಗಳು, ರಾಷ್ಟ್ರೀಕೃತ ಬ್ಯಾಂಕುಗಳು, ಖಾಸಗಿ ಬ್ಯಾಂಕುಗಳು ಹಾಗೂ ಸಣ್ಣ ಹಣಕಾಸು ಬ್ಯಾಂಕುಗಳಲ್ಲಿ

ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗದರ್ಶನದನ್ವಯ ಠೇವಣಿ ಮಾಡಲು ಅನುಮತಿ ನೀಡಬೇಕೆಂದು ವೃತ್ತಿಪರ ನಿರ್ದೇಶಕರಾದ ಶ್ರೀ ರಾಜಗೋಪಾಲ್ ಹೆಗ್ಡೆರವರು ಮಹಾಸಭೆಗೆ ಮಂಡಿಸಿದರು. ಬ್ಯಾಂಕ್ ತಾನು ಹೊಂದಿರುವ ಹೆಚ್ಚುವರಿ ನಿಧಿಗಳನ್ನು ಕಲಂ 58ರ ಪ್ರಕಾರ ತೊಡಗಿಸಲು ಒಪ್ಪಬಹುದೆಂದು ಸದಸ್ಯರಾದ ಶ್ರೀ ಚಂದ್ರಶೇಖರ ಆರಾಧ್ಯ(ಸ.ಸಂ.4009) ರವರು ಸೂಚಿಸಿದರು. ಇದಕ್ಕೆ ಸದಸ್ಯರಾದ ಶ್ರೀ ಶ್ರೀ ಚಂದ್ರಶೇಖರ.ಕೆ ಸ.ಸಂ 2408 ರವರು ಅನುಮೋದಿಸಿದರು.

**ವಿಷಯ 13:–2022–23ನೇ ಸಾಲಿನ ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕರನ್ನು ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಾನುಸಾರ ನೇಮಿಸುವುದು.**

ನಿರ್ದೇಶಕರಾದ ಶ್ರೀ ಟಿ.ಆರ್.ಸ್ವಾಮಿರವರು 2022–23ನೇ ಸಾಲಿನ ಲೆಕ್ಕಪರಿಶೋಧನೆಗೆ ಲೆಕ್ಕ ಪರಿಶೋಧಕರನ್ನು ಭಾರತೀಯ ರಿಸರ್ವ್ ಬ್ಯಾಂಕ್ ದಿನಾಂಕ 27/04/2021ರಂದು ಹೊರಡಿಸಿರುವ ಸುತ್ತೋಲೆ ಸಂಖ್ಯೆ RBI/2021–22/25 Ref.No.DoS.CO.ARG/SEC.01/08.91.001/2021–22ರನ್ವಯ ವರದಿ ಸಾಲಿಗೆ ಲೆಕ್ಕಪರಿಶೋಧನೆ ಮಾಡಿದಂತಹ ಮೆ.ಬಾಬು ಅಂಡ್ ಬಡತ್‌ರವರನ್ನೇ 2022–2023ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಳ್ಳಲು ಮರು ನೇಮಕ ಮಾಡಿಕೊಳ್ಳಲು ಭಾರತೀಯ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿ ಪಡೆಯಬೇಕಿದ್ದು, ಇದಕ್ಕೆ ಮಹಾಸಭೆಯು ಅನುಮತಿ ನೀಡಬೇಕೆಂದು ಸಭೆಗೆ ಪ್ರಸ್ತಾವನೆಯನ್ನು ಮಂಡಿಸಿದರು.

2022–23ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಳ್ಳಲು ಮೆ.ಬಾಬು ಅಂಡ್ ಬಡತ್‌ರವರನ್ನು ಮುಂದುವರೆಸಬಹುದೆಂದು ಹಾಗೂ ಈ ಪ್ರಸ್ತಾವನೆಯನ್ನು ಭಾರತೀಯ ರಿಸರ್ವ್ ಬ್ಯಾಂಕಿಗೆ ಕಳುಹಿಸಿಕೊಡಲು ಒಪ್ಪಬಹುದೆಂದು ಸದಸ್ಯರಾದ. ಪಾಲಾಕ್ಷಪ್ಪ ಜಿ.ಎಸ್ (ಸ.ಸಂ.10259)ಸೂಚಿಸಿದರು. ಹಾಗೂ ಶ್ರೀ ಜಗದೀಶ್ ಎಸ್.(ಸ.ಸಂ.2447)ರವರು ಅನುಮೋದಿಸಿದರು. ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ 14:–ಸದಸ್ಯರುಗಳಿಂದ ಬಂದ ಸೂಚನೆಗಳ ಪರಿಶೀಲನೆ (ಸಭೆಗೆ ಮೂರು ದಿನಗಳ ಮುಂಚಿತವಾಗಿ ಲಿಖಿತ ಮೂಲಕ ಬ್ಯಾಂಕ್‌ಗೆ ತಲುಪಿದ ಸೂಚನೆ ಪತ್ರಗಳ ಬಗ್ಗೆ)**

ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಾದ ಶ್ರೀಮತಿ ಭಾಗ್ಯ.ಎಸ್.ರವರು ಸಭೆಗೆ ಮೂರು ದಿನಗಳ ಮುಂಚಿತವಾಗಿ ಲಿಖಿತ ಮೂಲಕ ಬ್ಯಾಂಕ್‌ಗೆ ತಲುಪಿದ ಸೂಚನೆ ಪತ್ರಗಳನ್ನು ಸಭೆಗೆ ಮಂಡಿಸಿದರು.

1. ಶ್ರೀ ದೊಡ್ಡಕನ್ನಯ್ಯ–ಸ.ಸಂ.7620– ಸೂಚನೆ 09ರ ಪ್ರಕಾರ ಬೈಲಾ ಸಂಖ್ಯೆ 47ರ ಪ್ರಕಾರ ಕಳೆದ 05 ಸಾಮಾನ್ಯ ಸಭೆಗಳ ಪೈಕಿ 02 ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಹಾಗೂ ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಎರಡು ಸಹಕಾರ ವರ್ಷದಲ್ಲಿ ತಮ್ಮ ಚಾಲ್ತೀ ಖಾತೆ/ಉಳಿತಾಯ ಖಾತೆಯಲ್ಲಿ ವರ್ಷಕ್ಕೆ ಕನಿಷ್ಠ 04 ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸಲು ತಪ್ಪಿದ ಸದಸ್ಯನಿಗೆ ಮತ ನೀಡುವ ಹಕ್ಕು ಹಾಗೂ ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕು ಇರುವುದಿಲ್ಲ ಎಂದು ಇದ್ದು ಹಿರಿಯ ನಾಗರೀಕರಿಗೆ ಬ್ಯಾಂಕಿಗೆ ಬಂದು ವ್ಯವಹರಿಸಲು ಕಷ್ಟವಾಗುವುದರಿಂದ ಈ ವ್ಯವಹಾರದ ಸಂಖ್ಯೆಯನ್ನು ಕಡಿಮೆಗೊಳಿಸುವಂತೆ ಕೋರಿರುತ್ತಾರೆ.

ಇದಕ್ಕೆ ಮು.ಕಾ.ನಿಯವರಾದ ಶ್ರೀಮತಿ ಭಾಗ್ಯ.ಎಸ್.ರವರು ಬ್ಯಾಂಕ್ ಉಪನಿಯಮದನುಸಾರ ಕಾರ್ಯನಿರ್ವಹಿಸಬೇಕಾಗಿರುತ್ತದೆ ಎಂದು ಉತ್ತರಿಸುತ್ತಾ ಇವರ ಮನವಿಯನ್ನು ಮಹಾಸಭೆಗೆ ಮಂಡಿಸಿದರು.

2. ಶ್ರೀ ಶಿವರಾಮಯ್ಯ–ಸ.ಸಂ.12164 : ಬ್ಯಾಂಕ್ ಹೆಚ್ಚಿನ ಲಾಭ ಗಳಿಸಿರುವುದರಿಂದ ಡಿವಿಡೆಂಡ್ ಹೆಚ್ಚಿಗೆ ನೀಡುವಂತೆ ಕೋರಿರುತ್ತಾರೆ.

ಇದಕ್ಕೆ ಮು.ಕಾ.ನಿಯವರಾದ ಶ್ರೀಮತಿ ಭಾಗ್ಯ.ಎಸ್.ರವರು ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗದರ್ಶನದನ್ವಯ AFS ವರ್ಗದಲ್ಲಿ ಹೊಂದಿರುವ ಭದ್ರತಾ ಪತ್ರಗಳ ಮೊತ್ತದ ಮೇಲೆ ಶೇ.5 ಹೂಡಿಕೆ ಬೆಲೆ ಏರಿಳಿತ ನಿಧಿಗೆ ಅವಕಾಶ ಕಲ್ಪಿಸಬೇಕಾಗಿದ್ದು, ಈ ವರ್ಷದ ಲಾಭಾಂಶ ವಿಲೇವಾರಿ ಮೂಲಕ ಹೂಡಿಕೆ ಏರಿಳಿತ ಹೂಡಿಕೆ ನಿಧಿಗೆ 5.01 ಕೋಟಿಗಳಷ್ಟು ಅವಕಾಶ ಮಾಡಿದ್ದು ಇನ್ನೂ ಬಾಕಿ 4.60 ಕೋಟಿಗಳಷ್ಟು ಅವಕಾಶ ಕಲ್ಪಿಸಬೇಕಾಗಿದೆ. ಅದ್ದರಿಂದ ತಾವು ಕೋರಿರುವ ಹೆಚ್ಚಿನ ಡಿವಿಡೆಂಡ್ ನೀಡಲು ಸಾಧ್ಯವಾಗುವುದಿಲ್ಲ ಎಂಬುದನ್ನು ವಿವರಿಸಿದರು ಹಾಗೂ ಇವರು ಇ–ಮೇಲ್ ಮೂಲಕ ತಮಗೆ ಅವಶ್ಯವಿರುವ ಮಾಹಿತಿಯನ್ನು ಕೋರಿದ್ದು ಅದಕ್ಕೆ ಬ್ಯಾಂಕಿನ ವತಿಯಿಂದ ಸಮಜಾಯಿಷಿ ನೀಡಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ವಿಷಯ 15: ಅಧ್ಯಕ್ಷರ ಅನುಮತಿಯೊಡನೆ ಚರ್ಚಿಸಬಹುದಾದ ಇತರೆ ವಿಷಯಗಳು

**1.ಮಾಜಿ ಉಪಾಧ್ಯಕ್ಷರಾದ ಶ್ರೀ ಆರ್.ಬಿ.ಮಲ್ಲಿಕಾರ್ಜುನಯ್ಯರವರು** BOM & BOD ಸಂಬಂಧ ವಿವರಣೆ ಕೋರಿದರು.

ಇದಕ್ಕೆ ಮು.ಕಾ.ನಿಯವರು ಆಡಳಿತ ಮಂಡಳಿಯು ಬ್ಯಾಂಕಿನ ಉಪನಿಯಮದನ್ವಯ ರೂಪುಗೊಂಡಿದ್ದು ಒಟ್ಟು 17 ಜನ ನಿರ್ದೇಶಕರನ್ನು ಒಳಗೊಂಡಿರುತ್ತದೆ, ಭಾರತೀಯ ರಿಸರ್ವ್ ಬ್ಯಾಂಕ್ ದಿನಾಂಕ 31-12-2019ರಂದು ಹೊರಡಿಸಿರುವ ಸುತ್ತೋಲೆಯನ್ವಯ ಬ್ಯಾಂಕ್ ವ್ಯವಸ್ಥಾಪನಾ ಸಮಿತಿ (BOM)ಯನ್ನು ರಚಿಸಿಕೊಳ್ಳಬೇಕಾಗಿದ್ದು. ಅದರಂತೆ ಈ ಸಮಿತಿಯಲ್ಲಿ ಕನಿಷ್ಠ 05 ಗರಿಷ್ಠ 12 ಜನ ಸದಸ್ಯರಿರಬೇಕು ಹಾಗೂ ಸಮಿತಿ ಹೊಂದುವ ಒಟ್ಟು ಸದಸ್ಯರ ಪೈಕಿ ಶೇ 50 ರಷ್ಟು ಆಡಳಿತ ಮಂಡಳಿ (BOD) ಸದಸ್ಯರಾಗಿರಬಹುದು, ಉಳಿದ ಶೇ 50% ಸದಸ್ಯರು ಹೊರಗಿನವರಾಗಿರಬೇಕು ಹಾಗೂ ಈ ಸದಸ್ಯರುಗಳು RBI ಸುತ್ತೋಲೆಯಲ್ಲಿ ಸೂಚಿಸಿರುವ ಮಾನದಂಡದನ್ವಯ, ಲೆಕ್ಕ-ಪತ್ರ ಪರಿಶೋಧನಾ ತಜ್ಞರು, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅನುಭವ ಹೊಂದಿರುವವರು, ಆರ್ಥಿಕ ತಜ್ಞರು, ಕಾನೂನು ತಜ್ಞರು, ಕೃಷಿ ಅಥವಾ ಗ್ರಾಮೀಣಾಭಿವೃದ್ಧಿ ಕ್ಷೇತ್ರದಲ್ಲಿ ಮತ್ತು ಸಣ್ಣ ಮತ್ತು ಮಧ್ಯಮ ಕೈಗಾರಿಕೆಯಲ್ಲಿ ಪರಿಣಿತಿ ಹೊಂದಿರತಕ್ಕದ್ದು ಎಂದು ವಿವರಿಸಿದರು. ಹಾಗೂ BOM ಸದಸ್ಯರುಗಳು ಬ್ಯಾಂಕಿನ ಕಾರ್ಯ ವೈಖರಿಯಲ್ಲಿ ಸಾಲದ ಅರ್ಜಿಯನ್ನು ಪರಿಶೀಲಿಸುವುದು, ಸಾಲ ನೀಡುವಿಕೆ ಹಾಗೂ ವಸೂಲಾತಿ, ಹೂಡಿಕೆ, ಇದಕ್ಕೆ ಬೇಕಾದ ಪಾಲಿಸಿಯನ್ನು ರೂಪಿಸುವುದು ಅವಶ್ಯವಿರುವ ಸಲಹೆ ಸೂಚನೆ ನೀಡುವುದು ಹಾಗೂ ಈ ಸದಸ್ಯರುಗಳ ಕಾರ್ಯವೈಖರಿ ಸರಿ ಇಲ್ಲದ ಪಕ್ಷದಲ್ಲಿ RBIಇಂತಹ ಸದಸ್ಯರುಗಳನ್ನು ವಜಾ ಮಾಡುವ ಅಧಿಕಾರವನ್ನು ಹೊಂದಿರುತ್ತದೆ.ಈ ಸಂಬಂಧ ಬ್ಯಾಂಕ್ ವ್ಯವಸ್ಥಾಪನಾ ಸಮಿತಿಯನ್ನು ರಚಿಸಿಕೊಂಡು, ಭಾರತೀಯ ರಿಸರ್ವ್ ಬ್ಯಾಂಕಿನ ಅನುಮೋದನೆಯನ್ನು ಪಡೆದಿದ್ದು, ಮುಂದಿನ ತಿಂಗಳಿನಿಂದ ಈ ವ್ಯವಸ್ಥಾಪನಾ ಸಮಿತಿಯು ಕಾರ್ಯನಿರ್ವಹಿಸಲಿದೆ ಎಂದು ವ್ಯವಸ್ಥಾಪನಾ ಸಮಿತಿಯ ಸದಸ್ಯರನ್ನು ಮಹಾ ಸಭೆಗೆ ಪರಿಚಯಿಸಿದರು.

1. **ಶ್ರೀ.ಜಿ.ಸಿದ್ದಪ್ಪ** – ಹಾಲಿ ಆಡಳಿತ ಮಂಡಳಿ ನಿರ್ದೇಶಕರು
2. **ಶ್ರೀ ರಾಜಗೋಪಾಲ್ ಹೆಗ್ಡೆ** – ಹಾಲಿ ಆಡಳಿತ ಮಂಡಳಿ ನಿರ್ದೇಶಕರು
3. **ಶ್ರೀ ಟಿ.ಆರ್.ಸ್ವಾಮಿ** – ಹಾಲಿ ಆಡಳಿತ ಮಂಡಳಿ ನಿರ್ದೇಶಕರು
4. **ಶ್ರೀ ಆನಂದ ರಾಮಯ್ಯ ರಮೇಶ್** – ನೂತನ ಸದಸ್ಯರು (ಕೃಷಿ ಕ್ಷೇತ್ರದ ಅನುಭವ)
5. **ಶ್ರೀ ಎಸ್.ಜಿ.ಕುಲಕರ್ಣಿ** – ನೂತನ ಸದಸ್ಯರು (ಸಹಕಾರಿ ಬ್ಯಾಂಕಿಂಗ್ ಕ್ಷೇತ್ರದ ಅನುಭವ)

ಹಾಗೂ ಈ ಮಂಡಳಿಯು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನದಲ್ಲಿ ಸೂಚಿಸಿರುವಂತೆ ಕಾರ್ಯ ನಿರ್ವಹಣೆ ಮಾಡುವುದು ಹಾಗೂ ಈ ಸಮಿತಿಯ ಕಾರ್ಯನಿರ್ವಹಣೆಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ನಿಗಾ ಮಾಡುವುದರ ಬಗ್ಗೆ ಸಭೆಗೆ ತಿಳಿಸಿದರು.

**2 ಬ್ಯಾಂಕಿನ ಸದಸ್ಯರಾದ ಕುಮಾರಸ್ವಾಮಿರವರು** ವೆಂಕಟೇಶ್ವರ ಎಸ್. ಮತ್ತು ಕಾಂತರಾಜು.ವಿ.ಪಿ ವಂಚನೆ ಪ್ರಕರಣದ ಬಗ್ಗೆ ವಿವರಣೆ ಕೋರಿದರು.

ಇದಕ್ಕೆ ಅಧ್ಯಕ್ಷರಾದ ಶ್ರೀ ಹೆಚ್.ಸಿ.ಗೋಪಾಲ್‌ರವರು ಮಹಾಲಕ್ಷ್ಮೀಪುರಂ ಶಾಖೆಯಲ್ಲಿ ಸ್ಥಿರಾಸ್ತಿ ಖರೀದಿ ಸಾಲ ಪಡೆಯಲು ನಕಲಿ ದಾಖಲೆಗಳನ್ನು ನೀಡಿದ್ದು, ಇವರು ಸಾಲವನ್ನು ಮರುಪಾವತಿಸದಿದ್ದಾಗ, ವಸೂಲಾತಿ ಕ್ರಮ ಜರುಗಿಸಿದಾಗ ಇವರು ಇದೇ ರೀತಿ ನಕಲಿ ದಾಖಲೆ ಸೃಷ್ಟಿಸಿ ಹಲವು ಬ್ಯಾಂಕುಗಳಲ್ಲಿ ಸಾಲ ಪಡೆದು ವಂಚಿಸಿರುವುದು ಬೆಳಕಿಗೆ ಬಂದಿರುತ್ತದೆ. ಸದರಿಯವರ ವಿರುದ್ಧ ಪೊಲೀಸ್ ಠಾಣೆಯಲ್ಲಿ FIR ದಾಖಲಿಸಲಾಗಿದೆ ನ್ಯಾಯಾಂಗ ಬಂಧನ ಸಹಾ ಆಗಿದ್ದು ಮತ್ತು ಚೆಕ್ ಬೌನ್ಸ್ ಪ್ರಕರಣವನ್ನು ದಾಖಲಿಸಲಾಗಿದ್ದು, ವಸೂಲಾತಿಗಾಗಿ ಕ್ರಮವಿಡಲಾಗಿದೆ ಎಂದು ವಿವರಿಸಿದರು.

ಬ್ಯಾಂಕಿನ ಸಿಬ್ಬಂದಿ ಕಾಂತರಾಜು.ವಿ.ಪಿ ಹಣ ದುರುಪಯೋಗ ಪ್ರಕರಣಕ್ಕೆ ಸಂಬಂಧಿಸಿದಂತೆ, ಒಟ್ಟು ರೂ.1.38 ಕೋಟಿ ವಂಚನೆ ಮೊತ್ತಕ್ಕೆ ಸಂಬಂಧಿಸಿದಂತೆ, ರೂ.40.00ಲಕ್ಷ ವಸೂಲಾತಿ ಮಾಡಲಾಗಿದ್ದು, ಉಳಿದ ಮೊತ್ತವನ್ನು ಪಾವತಿಸುವುದಾಗಿ ಲಾಯರ್ ಮುಖಾಂತರ ಒಪ್ಪಂದಕ್ಕೆ ಬಂದಿರುತ್ತಾರೆ ಎಂದು ಮಹಾಸಭೆಗೆ

ವಿವರಿಸಿದರು. ಮು.ಕಾ.ನಿಯವರು ಸಿಬ್ಬಂದಿಯವರು ಹಣ ದುರುಪಯೋಗದಲ್ಲಿ ಭಾಗಿಯಾಗಿರುವುದು ಇದೇ ಮೊದಲ ಪ್ರಕರಣವಾಗಿದ್ದು, ಮುಂದಿನ ದಿನಗಳಲ್ಲಿ ಈ ರೀತಿಯಾಗದಂತೆ ಎಚ್ಚರ ವಹಿಸುವುದಾಗಿ ತಿಳಿಸಿದರು.

ಮುಂದುವರೆದು ಅನುತ್ಪಾದಕ ಆಸ್ತಿಯ ಪ್ರಮಾಣ ಶೇ. 0 ಇರುವ ಬಗ್ಗೆ ವಿವರಣೆ ಕೋರಿದರು.ಇದಕ್ಕೆ ಮು. ಕಾ.ನಿಯವರಾದ ಶ್ರೀಮತಿ ಭಾಗ್ಯ.ಎಸ್.ರವರು ಉತ್ತರಿಸುತ್ತಾ ಬ್ಯಾಂಕ್ ನೀಡಿರುವ ಒಟ್ಟು ಸಾಲ ರೂ.512.88ಕೋಟಿ ಇದ್ದು ಒಟ್ಟು ಅನುತ್ಪಾದಕ ಆಸ್ತಿಯ ಮೊತ್ತ ರೂ.71.96 ಕೋಟಿಗಳಾಗಿದ್ದು, ಬ್ಯಾಂಕ್ ರೂ.75.17ಕೋಟಿ ಅನುತ್ಪಾದಕ ಆಸ್ತಿಯ ಸಂಬಂಧ ಅವಕಾಶವನ್ನು ಹೊಂದಿರುವುದರಿಂದ ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣ ಶೇ 0 ಆಗಿರುತ್ತದೆ ಎಂದು ವಿವರಿಸುತ್ತಾ ಇದಕ್ಕೆ ಅಧ್ಯಕ್ಷರು ಆಡಳಿತ ಮಂಡಳಿ ಸದಸ್ಯರ ಮತ್ತು ಸಿಬ್ಬಂದಿಯವರ ಪರಿಶ್ರಮ ಕಾರಣ ಎಂದು ವಿವರಿಸಿದರು

ಈ ಸಾಧನೆಗೆ ಸದಸ್ಯರು ಆಡಳಿತ ಮಂಡಳಿ ಸದಸ್ಯರನ್ನು ಮತ್ತು ಸಿಬ್ಬಂದಿ ವರ್ಗವನ್ನು ಅಭಿನಂದಿಸಿದರು.

**3. ಸದಸ್ಯರಾದ ಶ್ರೀ ರಾಮಲಿಂಗಯ್ಯ (ಸ.ಸಂ. 4852)ರವರು** ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ಪುಟ ಸಂಖ್ಯೆ 46 ರಲ್ಲಿ ಜವಾಬ್ದಾರಿ ಅಡಿಯಲ್ಲಿ ನಮೂದಿಸಿರುವ ಅನುತ್ಪಾದಕ ಸಾಲದಿಂದ ಬರಬೇಕಾದ ಬಡ್ಡಿ ಹಿಂದಿನ ಸಾಲಿಗೆ ರೂ.1.99 ಕೋಟಿ ಇದ್ದು ವರದಿ ಸಾಲಿನಲ್ಲಿ ರೂ.1.87 ಕೋಟಿ ಇರುತ್ತದೆ. ಆದಾಗ್ಯೂ ನಿವ್ವಳ ಶೇ.0 ಹೇಗೆ ಎಂದು ಪ್ರಶ್ನಿಸಿದರು.

ಇದಕ್ಕೆ ವೃತ್ತಿಪರ ನಿರ್ದೇಶಕರಾದ ಶ್ರೀ ರಾಜಗೋಪಾಲ್ ಹೆಗ್ಡೆರವರು ಅನುತ್ಪಾದಕ ಆಸ್ತಿಯ ಲೆಕ್ಕಾಚಾರವನ್ನು ಸಭೆಗೆ ವಿವರಿಸಿದರು. ಹಾಗೂ ಜವಾಬ್ದಾರಿ ಅಡಿಯಲ್ಲಿ ನಮೂದಿಸಿರುವ ಅನುತ್ಪಾದಕ ಸಾಲಗಳಿಂದ ಬರಬೇಕಾದ ಬಡ್ಡಿಯಲ್ಲಿ ಕೆಲವೊಂದು ಓ.ಡಿ. ಖಾತೆಗಳಲ್ಲಿ ಬರಬೇಕಾದ ಬಡ್ಡಿಯ ಮೊತ್ತವಾಗಿದ್ದು, ವಸೂಲಾದ ನಂತರ ಆದಾಯಕ್ಕೆ ವರ್ಗಾವಣೆ ಮಾಡುವುದಾಗಿರುತ್ತದೆ. ಈ ಮೊತ್ತಕ್ಕೂ ನಿವ್ವಳ ಅನುತ್ಪಾದಕ ಆಸ್ತಿಗೂ ಯಾವುದೇ ಸಂಬಂಧವಿರುವುದಿಲ್ಲ, ಬ್ಯಾಂಕಿನ ಒಟ್ಟು ಅನುತ್ಪಾದಕ ಆಸ್ತಿಯ ಮೊತ್ತ ರೂ.71.96 ಕೋಟಿ ಇದ್ದು, ಒಟ್ಟು ನೀಡಿದ ಸಾಲ ರೂ.512.88 ಕೋಟಿ ಅದರಂತೆ ಒಟ್ಟು ಅನುತ್ಪಾದಕ ಆಸ್ತಿಯ ಪ್ರಮಾಣ ಶೇ 14.03 ಆಗಿದ್ದು, ಬ್ಯಾಂಕ್ ರೂ.75.17ಕೋಟಿ ಅನುತ್ಪಾದಕ ಆಸ್ತಿಯ ಸಂಬಂಧ ಅವಕಾಶವನ್ನು ಹೊಂದಿರುವುದರಿಂದ ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣ ಶೇ.0 ಆಗಿರುತ್ತದೆ ಎಂದು ಸಭೆಗೆ ವಿವರಿಸಿದರು.

**4. ಸದಸ್ಯರಾದ ಶ್ರೀ ಚಂದ್ರಶೇಖರಯ್ಯ. ಬಿ.ಎನ್ ಸ.ಸಂ.3690** ರವರು ಇತರೆ ಖರ್ಚುಗಳಲ್ಲಿ ಮುದ್ರಣ ಖರ್ಚು, ಮರಣ ನಿಧಿ ಖರ್ಚು, ಬ್ಯಾಂಕ್ ಚಾರ್ಜಸ್, ಪೂಜಾ ಖರ್ಚು ಹೆಚ್ಚಾಗಿ ಖರ್ಚು ಮಾಡಿದ್ದು ಬ್ಯಾಂಕಿನ ಹಿತದೃಷ್ಟಿಯಿಂದ ವೆಚ್ಚಗಳನ್ನುಸಾಧ್ಯವಾದಷ್ಟು ಕಡಿಮೆಗೊಳಿಸಿ ಲಾಭದ ಪ್ರಮಾಣ ಹೆಚ್ಚಿಸುವಂತೆಯೂ ಸೂಚಿಸಿದರು ಹಾಗು ಸಿಬ್ಬಂದಿಗಳಿಗೆ ನೀಡಬೇಕಾದ ವೇತನಗಳನ್ನುಕೊಡಲು ಸೂಚಿಸಿದರು. ಬ್ಯಾಂಕಿನ ಬಗ್ಗೆ ಹೆಚ್ಚು ಪ್ರಚಾರ ಮಾಡಬೇಕು, ಇತರೆ ಸಂಸ್ಥೆಗಳಿಗೆ ಕೊಡುಗೆಗಳನ್ನು ಕೊಡುವ ಮೂಲಕ ಪ್ರಚಾರ ಮಾಡಲು ಸೂಚಿಸಿದರು.

